ದೆಹಲಿ ಕರ್ನಾಟಕ ಸಂಘದ

# ಅಭಿಮತ

ಏಪ್ರಿಲ್ 2022
ಬೆಲೆ ರೂ. 1



## ಚೈತ್ರದ ಚಿಗುರು



ದಿನಾಂಕ 10.03.2022ರಂದು ದೆಹಲಿ ಕರ್ನಾಟಕ ಸಂಘಕ್ಕೆ ಭೇಟಿ ನೀಡಿದ ಉಡುಪಿ ಶಾಸಕ ಶ್ರೀ ರಘುಪತಿ ಭಟ್ ಅವರನ್ನು ಸಂಘದ ಅಧ್ಯಕ್ಷ ಶ್ರೀ ಸಿ.ಎಂ. ನಾಗರಾಜ ಅವರು ಆತ್ಮೀಯವಾಗಿ ಬರಮಾಡಿಕೊಂಡು, ಸಂಘದ ಅಮೃತ ಮಹೋತ್ಸವ ಸಂದರ್ಭದಲ್ಲಿ 'ಕರಾವಳಿ ಉತ್ಸವ' ಆಯೋಜನೆಗೆ ಧನ ಸಹಾಯ ನೀಡುವಂತೆ ಮನವಿ ಮಾಡಿಕೊಳ್ಳಲಾಯಿತು. ಇದೇ ಸಂದರ್ಭದಲ್ಲಿ ಖಜಾಂಚಿ ಶ್ರೀ ರಾಧಾಕೃಷ್ಣ ಮತ್ತಿತರರು ಉಪಸ್ಥಿತರಿದ್ದರು.



ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ನೂತನ ನಿರ್ದೇಶಕರಾದ ಶ್ರೀ ಪ್ರಕಾಶ್ ಅವರನ್ನು ದೆಹಲಿ ಕರ್ನಾಟಕ ಸಂಘದ ಅಧ್ಯಕ್ಷ ಶ್ರೀ ಸಿ.ಎಂ. ನಾಗರಾಜ ಅವರು ದಿನಾಂಕ 15.03.2022ರಂದು ಭೇಟಿ ಮಾಡಿ ದೆಹಲಿ ಕರ್ನಾಟಕ ಸಂಘದ ಪರವಾಗಿ ಅಭಿನಂದಿಸಿದ ಸಂದರ್ಭ.




ದೆಹಲಿ ಕರ್ನಾಟಕ ಸಂಘದ ಪ್ರಶಸ್ತಿ ಪ್ರದಾನ ಸಮಾರಂಭದ ಅತಿಥಿಯಾಗಿದ್ದ ಕನ್ನಡ ಚಿತ್ರರಂಗದ ಯುವ ನಾಯಕ ನಟ ಅನುಪ್ ರೇವಣ್ಣ ಅವರಿಗೆ ಸಂಘದಿಂದ ಗೌರವ ಸನ್ಮಾನ.


**DELHI KARNATAKA SANGHA** Rao Tularam Marg, Sector-12, R K Puram, New Delhi-110022.
Phone: 011-26109615. 011-26104818 email:dksangha@gmail.com

ಅಭಿಮತ
ದೆಹಲಿ ಕರ್ನಾಟಕ ಸಂಘದ ಅಭಿಮತ
ಸಂಪುಟ 32 । ಸಂಚಿಕೆ 7
ಏಪ್ರಿಲ್ 2022

**ಪ್ರಧಾನ ಸಂಪಾದಕ**
ಚಂದ್ರಶೇಖರ ಎನ್.ಪಿ.

**ಸಂಪಾದಕ ಮಂಡಳ ಸದಸ್ಯರು**
ಕೆ.ಎಸ್. ಮೂರ್ತಿ
ಅಮರೇಶ ದೊಡಮನಿ
ಯಲ್ಲಾಲಿಂಗ ಕೊಪ್ಪದ

**ದೆಹಲಿ ಕರ್ನಾಟಕ ಸಂಘದ ಕಾರ್ಯಕಾರಿ ಸಮಿತಿ**

**ಅಧ್ಯಕ್ಷರು**
ಸಿ.ಎಂ. ನಾಗರಾಜ

**ಉಪಾಧ್ಯಕ್ಷರು**
ಡಾ. ಎಂ.ಎಸ್. ಶಶಿ ಕುಮಾರ್
ಪೂಜಾ ಪಿ. ರಾವ್

**ಪ್ರಧಾನ ಕಾರ್ಯದರ್ಶಿ**
ಆರ್. ರೇಣುಕುಮಾರ್

**ಕೋಶಾಧಿಕಾರಿ**
ರಾಧಾಕೃಷ್ಣ

**ಜಂಟಿ ಕಾರ್ಯದರ್ಶಿಗಳು**
ಬಿ. ನಾರಾಯಣ
ಸುಮಿತಾ ಮುರಗೋಡ

**ಸಮಿತಿ ಸದಸ್ಯರು**
ಪ್ರಭಾಕರ ಮಡ್ಡಿತೋಟ್
ಶಿವಪ್ಪ ಎಂ
ಎ.ಟಿ. ಶ್ರೀನಿವಾಸ
ಮಾಲಿನಿ ಪ್ರಹ್ಲಾದ್
ಕೆ.ಎಸ್. ಮೂರ್ತಿ
ನವೀನ್ ಕುಮಾರ್ ವಿ.
ಸವಿತಾ ನೆಲ್ಲಿ
ಅಶ್ವಿನಿ ಬಿ.ಎಸ್.
ಸಂತೋಷ ಜಿ
ಚಂದ್ರಶೇಖರ ಎನ್.ಪಿ.

**ಕಾವಲು ಸಮಿತಿ**
ಅನಂತರಾಮು ಅರಳ
ಡಿ.ವಿ.ಎಸ್. ಮೂರ್ತಿ
ಈಶ್ವರ ಮಡಿವಾಳ



# ಸಂಪಾದಕೀಯ

## ಪ್ರತಿಕೂಲಗಳನ್ನು ಮೆಟ್ಟಿ ನಿಂತು ಚರಿತ್ರಾರ್ಹರಾದ ವೀರಾಗ್ರಣಿಯರ ಅಪ್ರತಿಮ ಸಾಧನೆ ನಮಗೆ ದಾರಿದೀಪವಾಗಬೇಕು

ಸಮಸ್ತ ದೆಹಲಿ ಕನ್ನಡಿಗರಿಗೆ ಹೊಸ ವರ್ಷ ಯುಗಾದಿ ಹಬ್ಬದ ಶುಭಾಶಯಗಳು. ಶುಭಕೃತ್ ಸಂವತ್ಸರ ಎಲ್ಲರಿಗೂ ಶುಭ ತರಲೆಂದು ಆಶಿಸುತ್ತೇನೆ.

ಬಂಧುಗಳೇ, ಮಾರ್ಚ್ ಎಂಟರಂದು ವಿಶ್ವ ಮಹಿಳಾ ದಿನಾಚರಣೆಯನ್ನು ಆಚರಿಸುವ ಮೂಲಕ ಮಹಿಳೆಯರ ಜೀವನ ಕಥನ, ಸಾಧನೆ, ಸವಾಲು ಇತ್ಯಾದಿಗಳ ಕುರಿತ ಚರ್ಚೆ ಸರ್ವೇ ಸಾಮಾನ್ಯ. ಮಹಿಳೆಗೆ ಭಾರತದ ಸಂವಿಧಾನ ನೀಡುವ ಅವಕಾಶಗಳನ್ನು ಮಹಿಳೆಯರೇ ಸ್ವತಃ ಬಳಸಿಕೊಂಡು ಆಕೆಯೇ ನಿರ್ಣಾಯಕ ನಿರ್ಧಾರಗಳನ್ನು ತೆಗೆದುಕೊಳ್ಳುವ ವಾತಾವರಣ ಸೃಷ್ಟಿಯಾಗಬೇಕು. ಆಗ ಮಾತ್ರ ಮಹಿಳಾ ಸಬಲೀಕರಣ ಮತ್ತು ಸಾಮಾಜಿಕ ಸಬಲೀಕರಣ ಸಾಧ್ಯವಾಗಿ ದೇಶ ಸದೃಢವಾಗಬಲ್ಲದು. ವಾಸ್ತವವಾಗಿ ಮನುಷ್ಯನ ಅತ್ಯುನ್ನತ ಸಾಮಾಜಿಕ ಆವಿಷ್ಕಾರಗಳಲ್ಲೊಂದಾದ ಪ್ರಜಾಪ್ರಭುತ್ವ ವ್ಯವಸ್ಥೆ. ಸ್ವಾತಂತ್ರ್ಯ, ಘನತೆ ಮತ್ತು ಸಮಾನತೆಯ ಮೌಲ್ಯಗಳನ್ನು ಎತ್ತಿಹಿಡಿಯುವ ಅವಕಾಶವನ್ನು ಒದಗಿಸುತ್ತದೆ. ಇದಕ್ಕೆ ಸ್ಪಷ್ಟ ಉದಾಹರಣೆ ಜಗತ್ತಿನ ಮೊಟ್ಟ ಮೊದಲ ಸಮಜೋಧಾರ್ಮಿಕ ಸಂಸತ್ತು ಎಂದು ಖ್ಯಾತಿ ಪಡೆದ ಹನ್ನೆರಡನೇ ಶತಮಾನದಲ್ಲಿ ಕರ್ನಾಟಕದಲ್ಲಿ ವಿಶ್ವ ಗುರು ಬಸವಣ್ಣನವರ ನೇತೃತ್ವದಲ್ಲಿ ಸ್ಥಾಪನೆಗೊಂಡ ಅನುಭವ ಮಂಟಪ. ಇಂದಿನ ಆಧುನಿಕ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಸಮಾಜದ ಕಟ್ಟ ಕಡೆಯ ವಂಚಿತ ವರ್ಗಗಳ ಮಹಿಳೆಯರೂ ಸೇರಿದಂತೆ ಇಡೀ ಮಹಿಳಾ ಸಮುದಾಯದ ಸರ್ವಾಂಗೀಣ ಅಭಿವೃದ್ಧಿಗಾಗಿ ನಿರಂತರವಾದ ಯೋಜನೆಗಳು ಅನುಷ್ಠಾನಗೊಳ್ಳುತ್ತಿವೆ, ವಿಶ್ವಸಂಸ್ಥೆಯು 2000 ರಲ್ಲಿ ನಡೆದ ಶೃಂಗಸಭೆಯಲ್ಲಿ ಘೋಶಿಸಿದ್ದಂತೆ 2015ರ ವೇಳೆಗೆ 'ಲಿಂಗ ಸಮಾನತೆ ಮತ್ತು ಮಹಿಳಾ ಸಬಲೀಕರಣ'ವನ್ನು ಸಾಧಿಸುವ ಗುರಿ ಹಾಕಿಕೊಂಡಿತ್ತು...ಹೀಗಿದ್ದರೂ ಈ ವ್ಯವಸ್ಥೆಯ ಕುಂದು ಕೊರತೆಗಳಿಂದಾಗಿ ನಿರೀಕ್ಷಿತ ಮಟ್ಟದಲ್ಲಿ ಮಹಿಳೆಯರ ಸಬಲೀಕರಣ ಇನ್ನೂ ಸಾಧ್ಯವಾಗಿಲ್ಲ. ಭಾರತದಲ್ಲಿ ಮೂಲಭೂತವಾಗಿ ಪುರುಷಪ್ರಧಾನ ಸಮಾಜ ಎಂದಿನ ರೀತಿಯಲ್ಲಿಯೇ ಮಹಿಳೆಯರ ಹಕ್ಕಿನ ಪ್ರಶ್ನೆ, ಮಹಿಳೆಯರು ಎದುರಿಸುತ್ತಿರುವ ವರದಕ್ಷಿಣೆ, ಹೆಣ್ಣು ಭ್ರೂಣಹತ್ಯೆ, ಉತ್ತರಾಧಿಕಾರ ಹಕ್ಕುಗಳ ನಿರಾಕರಣೆ, ಹೆಣ್ಣುಮಕ್ಕಳ ಮಾರಾಟ ಮತ್ತು ಕಳ್ಳಸಾಗಾಣಿಕೆ ಮುಂತಾದ ಅನೇಕ ಸವಾಲುಗಳು ಗುರಿ ಸಾಧನೆಗೆ ಅಡ್ಡಿಯಾಗಿವೆ.

ಹಾಗೆಯೇ 2001 ರಲ್ಲಿ 49,65,14,346 ಇದ್ದ ಮಹಿಳೆಯರ ಸಂಖ್ಯೆಯು 2011 ರಲ್ಲಿ 58,75,84,719 ಆಗಿದ್ದು 18.34%ರಷ್ಟು ಮಹಿಳೆಯರ ಸಂಖ್ಯೆಯಲ್ಲಿ ಹೆಚ್ಚಳ ಉಂಟಾಗಿದೆ. ಹಿಂದಿನ ವರ್ಷಗಳಿಗೆ ಹೋಲಿಸಿದಲ್ಲಿ ಇತ್ತೀಚಿನ ವರ್ಷಗಳಲ್ಲಿ ಲಿಂಗಾನುಪಾತದಲ್ಲಿ ಸುಧಾರಣೆ ಕಂಡುಬಂದಿದೆಯಾದರೂ 2020 ರಲ್ಲಿ ಪುರುಷ ಮತ್ತು ಸ್ತ್ರೀ ಅನುಪಾತವು 100 ಮಹಿಳೆಯರಿಗೆ 108.18 ಪುರುಷರಿದ್ದಾರೆ ಎಂಬ ಮಾಹಿತಿ ಇದೆ. 2021ರಲ್ಲಿ ನಡೆಯಬೇಕಿದ್ದ ಜನಗಣತಿ ಪ್ರಕ್ರಿಯೆ ಕೋವಿಡ್ ಮಹಾಮಾರಿಯಿಂದಾಗಿ ಮುಂದೂಡಲ್ಪಟ್ಟಿರುವುದರಿಂದ ಕಳೆದೊಂದು ದಶಕದಲ್ಲಿ ಆಗಿರುವ ಪ್ರಗತಿ ಕುರಿತಂತೆ ತಿಳಿಯಲು ಇನ್ನೂ ಸಮಯ ಬೇಕಾಗಬಹುದು. ಒಟ್ಟಾರೆ ಸ್ತ್ರೀ ಪುರುಷರ ಲಿಂಗಾನುಪಾತದ ಸಮಾನತೆ ದೃಷ್ಟಿಯಿಂದ ಸಾಧಿಸಬೇಕಾದದ್ದು ಇನ್ನೂ ಬಹಳಷ್ಟು ಇದೆ. ಅಂದ ಮಾತ್ರಕ್ಕೆ ಇದುವರೆಗೆ ಆಗಿರುವ ಪ್ರಗತಿಯನ್ನು ನಿರಾಕರಿಸಲು ಸಾಧ್ಯವಿಲ್ಲ. ಬದಲಿಗೆ ಆ ಕೊರತೆಗಳನ್ನು ಸರಿಪಡಿಸಿ ವ್ಯವಸ್ಥೆಯನ್ನು ಮತ್ತಷ್ಟು ಬಲಪಡಿಸುವ ಮೂಲಕ ಸ್ತ್ರೀ ಸಮಾನತೆ, ಸಬಲೀಕರಣ ಆ ಮೂಲಕ ದೇಶದ ಸರ್ವಾಂಗೀಣ ಅಭಿವೃದ್ಧಿಗೆ ಪ್ರತಿಯೊಬ್ಬರೂ ಶ್ರಮಿಸಬೇಕಿದೆ. ಇಂತಹ ಅನೇಕ ಸಮಸ್ಯೆಗಳು ಭಾರತಕ್ಕೆ ಹೊಸದಲ್ಲ. ಎಲ್ಲ ಕಾಲಕ್ಕೂ ಒಂದಲ್ಲ ಒಂದು ಪ್ರಮಾಣದಲ್ಲಿ ಇದ್ದವುಗಳೇ ಆಗಿವೆ. ಆ ಎಲ್ಲ ಸವಾಲುಗಳ ನಡುವೆಯೂ ಅನೇಕಾರು ನಮ್ಮ ವೀರಾಗ್ರಣಿಯರು ಅಪ್ರತಿಮ ಸಾಧನೆಯನ್ನು ಮೆರೆದು ಚರಿತ್ರಾರ್ಹರಾಗಿದ್ದಾರೆ ಎನ್ನುವುದನ್ನು ಇತಿಹಾಸ ನಮಗೆ ಕಲಿಸಿದೆ.ಅವರ ಆದರ್ಶ ನಮಗೆ ದಾರಿದೀಪವಾಗಬೇಕು.

ಮುಖ್ಯವಾಗಿ, ವಚನ ಚಳುವಳಿಯ ಪ್ರಧಾನ ಧಾರೆಯಲ್ಲಿದ್ದ ಸ್ವಾಭಿಮಾನಿ ಶರಣೆ, ಕನ್ನಡದ ಮೊದಲ ಬಂಡಾಯ ಕವಯತ್ರಿ, ಸ್ತ್ರೀವಾದಿ ಚಳುವಳಿಯ ನಿಜವಾದ ಪ್ರತಿಪಾದಕಿ ಹಾಗೂ ಪುರುಷ ಕೇಂದ್ರಿತ ಸಮಾಜದ ಎಲ್ಲ ದಬ್ಬಾಳಿಕೆಗಳನ್ನು ಪ್ರತಿಭಟಿಸಿ, ಸಾಮಾಜಿಕ ಬದಲಾವಣೆಗೆ ಶ್ರಮಿಸಿ ಇಂದಿಗೂ ಕನ್ನಡಿಗರಿಗೆ ಅಕ್ಕರೆಯ ಅಕ್ಕನಾಗಿರುವ ಅಕ್ಕಮಹಾದೇವಿ. ಚೌಟ ಸಾಮಂತರ ನಾಡು ಉಳ್ಳಾಲದ ರಾಣಿ ಅಬ್ಬಕ್ಕ ಸಾಹಸ, ಸಾಮರಸ್ಯದ ರೂಪಕವಾಗಿದ್ದು ಅವರು ನಮಗೆ ಮುಖ್ಯವಾಗುವುದು ಪೋರ್ಚುಗೀಸರೊಡನೆ ಹೋರಾಡಿ ನಾಡನ್ನು ರಕ್ಷಿಸಿದ್ದಕ್ಕಷ್ಟೇ ಅಲ್ಲ, ಗಂಡನ ದಬ್ಬಾಳಿಕೆಯನ್ನು ಎದುರಿಸಿ ನಿಭಾಯಿಸಿದ ಬಗೆ, ಮೂಡಿಸಿದ ಹೆಣ್ತನದ ಹೆಜ್ಜೆಗಳಿಗಾಗಿ ಆದರ್ಶರಾಗಿ ನಿಲ್ಲುವ ಅಬ್ಬಕ್ಕ. ಶಿವಲಿಂಗಸರ್ಜನ ಮರಣದ ನಂತರ ಆಗಿನ ಧಾರವಾಡದ ಕಲೆಕ್ಟರ್ ಥ್ಯಾಕರೆ ಕಿತ್ತೂರಿಗೆ ಬಂದು ದಬ್ಬಾಳಿಕೆಯಿಂದ ರಾಜಭಂಡಾರಕ್ಕೆ ಬೀಗ ಹಾಕಿದ್ದನ್ನು ಪ್ರತಿಭಟಿಸಿ, ಥ್ಯಾಕರೆ ವಿರುದ್ಧ ಯುದ್ಧ ಸಾರಿ ಬ್ರಿಟಿಷರ ವಿರುದ್ಧ ಕಿತ್ತೂರು ಸಂಸ್ಥಾನ ಜಯ ಸಾಧಿಸಿದ ವೀರರಾಣಿ ಕಿತ್ತೂರು ಚೆನ್ನಮ್ಮ, ಚಿತ್ರದುರ್ಗ ಎಂದಾಕ್ಷಣ ನೆನಪಾಗುವ ಹೈದರಾಲಿಯ ಸೈನ್ಯದೊಂದಿಗೆ ಏಕಾಂಗಿಯಾಗಿ ಹೋರಾಡಿದ ವೀರವನಿತೆ ಒನಕೆ ಓಬವ್ವಳ ಸಾಹಸಗಾಥೆ... ಇಂತಹ ನೂರಾರು ಮಹಿಳೆಯರ ಬಗ್ಗೆ ನಮ್ಮ ಇವತ್ತಿನ ಯುವ ಪೀಳಿಗೆ ಅರಿತು ಆತ್ಮವಿಶ್ವಾಸದಿಂದ ಮುನ್ನಡೆಯಬೇಕಿದೆ.

ಭಾರತದ ರಾಷ್ಟ್ರಾಧ್ಯಕ್ಷೆಯಾಗಿ ಒಬ್ಬರು, ಪ್ರಧಾನಿಯಾಗಿ ಒಬ್ಬರು, ವಿವಿಧ ರಾಜ್ಯಗಳ ಹದಿನಾರು ಮಹಿಳಾ ಮುಖ್ಯಮಂತ್ರಿಗಳು, ಕೇಂದ್ರ–ರಾಜ್ಯ ಮಂತ್ರಿಗಳು, ರಾಜ್ಯಪಾಲರು ಸೇರಿದಂತೆ ರಾಜಕೀಯ ಪಕ್ಷಗಳ ಸಾರಥ್ಯ ವಹಿಸಿ, ಆಡಳಿತ, ಶಿಕ್ಷಣ, ವೈದ್ಯಕೀಯ, ಇಂಜಿನಿಯರಿಂಗ್, ಬಾಹ್ಯಾಕಾಶ, ನ್ಯಾಯಾಂಗ, ವಿಜ್ಞಾನ, ಚಲನಚಿತ್ರ, ಸಾಹಿತ್ಯ, ಸಂಗೀತ, ಕಲೆ, ಕ್ರೀಡೆ, ವಾಣಿಜ್ಯ, ಬ್ಯಾಂಕಿಂಗ್ ಮೊದಲಾದ ಕ್ಷೇತ್ರಗಳಲ್ಲಿ ಮುಂಚೂಣಿಯಲ್ಲಿದ್ದುಕೊಂಡು ಹೊಸ ಬದಲಾವಣೆಗೆ ನಾಂದಿ ಹಾಡುತ್ತಿರುವ ನೂರಾರು ಮಹಿಳೆಯರು ತಮ್ಮ ಸಾಮರ್ಥ್ಯವನ್ನು ದೃಢಪಡಿಸಿ ಯುವ ಪೀಳಿಗೆಗೆ ಸ್ಫೂರ್ತಿಯಾಗಿದ್ದಾರೆ.

ಅಲ್ಲದೇ. ಕೋವಿಡ್ ಮಹಾಮಾರಿಯಂತಹ ಕ್ಲಿಷ್ಟಕರ ಸನ್ನಿವೇಶದಲ್ಲಿ ಯಾವುದೇ ನೋವು–ಸಾವಿಗೂ ಜಗ್ಗದೆ, ಕುಗ್ಗದೆ, ಗುಂಡಿಗೆ ಗಟ್ಟಿ ಮಾಡಿಕೊಂಡು ಕರೋನಾ ಪೀಡಿತರಿಗೆ ಲಸಿಕೆಯ ಜೀವಾಮೃತವನ್ನು ನೀಡಿದ ಕೋಟ್ಯಂತರ ಆಶಾ ಕಾರ್ಯಕರ್ತೆಯರು ಮತ್ತು ಅಂಗನವಾಡಿ ಕಾರ್ಯಕರ್ತೆಯರು ನಮಗೆ ಮಾದರಿಯಾಗಬೇಕು. ಇಂದು ನಮ್ಮ ದೇಶ ಕೋವಿಡ್–19 ಲಸಿಕೆ ಕಾರ್ಯಕ್ರಮದಲ್ಲಿ ಜಾಗತಿಕ ನಾಯಕನಾಗಿದ್ದರೆ, ಅದರ ಶ್ರೇಯಸ್ಸು ಭಾರತದಾದ್ಯಂತ ಇರುವ ಎಲ್ಲ ಆರೋಗ್ಯ, ಆಶಾ ಮತ್ತು ಅಂಗನವಾಡಿ ಕಾರ್ಯಕರ್ತೆಯರುಗಳಿಗೆ ಸಲ್ಲಬೇಕು. ಇಂತಹ ನಿಸ್ವಾರ್ಥ ಸೇವೆಯನ್ನು ಸಲ್ಲಿಸಿದ ಮಹಿಳೆಯರ ಆದರ್ಶಗಳನ್ನು ಪಾಲಿಸುವುದಲ್ಲದೆ, ವಿಭಿನ್ನ ಕ್ಷೇತ್ರಗಳಲ್ಲಿ ಅವರಿಗೆ ಹೊಸ ಹೊಸ ಅವಕಾಶ ಒದಗಿಸಿದಲ್ಲಿ ನಿಜವಾದ ಅರ್ಥದಲ್ಲಿ ಮಹಿಳಾ ದಿನಾಚರಣೆ ಸಾಧ್ಯವಾಗುತ್ತದೆ.

ಇನ್ನು 2022ರ ಸಾಲಿನ ಪದ್ಮ ಪ್ರಶಸ್ತಿ ಪುರಸ್ಕೃತರಾದ ಕನ್ನಡಿಗರಿಗೆ ಅಭಿನಂದನೆಗಳನ್ನು ಅರ್ಪಿಸುತ್ತಾ, ನಮ್ಮ ದೆಹಲಿ ಕನ್ನಡಿಗರ ಕವನಗಳು, ಬರಹಗಳ ಜೊತೆಗೆ ನಮ್ಮ ಸಂಘದ ಮಹಿಳಾ ದಿನಾಚರಣೆ, ಕ್ರಿಕೆಟ್ ಪಂದ್ಯಾವಳಿಯ ಕಾರ್ಯಕ್ರಮದ ವರದಿಯೂ ಸೇರಿದಂತೆ ಸ್ಥಳೀಯ ಸಂಘ ಸಂಸ್ಥೆಗಳ ಕಾರ್ಯ ಚಟುವಟಿಕೆಗಳ ವರದಿಯನ್ನು ಒಳಗೊಂಡ ಯುಗಾದಿಯ ಈ ವಿಶೇಷ ಸಂಚಿಕೆಯನ್ನು ನಿಮ್ಮ ಕೈಗಿಡುತ್ತಿದ್ದೇವೆ.

*ಚಂದ್ರಶೇಖರ ಎನ್.ಪಿ.*
*ಪ್ರಧಾನ ಸಂಪಾದಕರು*

# ಅಧ್ಯಕ್ಷರ ನುಡಿ

ಆತ್ಮೀಯ ಕನ್ನಡ ಬಂಧುಗಳೇ, ತಮಗೂ, ತಮ್ಮ ಕುಟುಂಬಕ್ಕೂ ಯುಗಾದಿ ಹಬ್ಬದ ಹಾರ್ದಿಕ ಶುಭಾಶಯಗಳು.

ಯುಗದ ಕವಿ ಜಗದ ಕವಿ ದ,ರಾ. ಬೇಂದ್ರೆ ಅವರ ಕವನದ ಸಾಲಿನಂತೆ, ಯುಗ ಯುಗಾದಿ ಕಳೆದರೂ, ಯುಗಾದಿ ಮರಳಿ ಬರುತಿದೆ, ಹೊಸ ವರುಷಕೆ ಹೊಸ ಹರುಷವ ಹೊಸತು ಹೊಸತು ತರುತಿದೆ. ಯುಗಾದಿಯು ತಮ್ಮೆಲ್ಲರ ಜೀವನದಲ್ಲಿ ಹೊಸ ಹರುಷವ ತರಲಿ ಎಂಬ ಆಶಿಸುತ್ತೇನೆ.

ದೆಹಲಿ ಕರ್ನಾಟಕ ಸಂಘದ ಕಾರ್ಯಕ್ರಮಗಳನ್ನು ಮಾರಕ ರೋಗ ಕೊರೊನ ಕರಿ ಛಾಯೆ ಕಳೆದ ನಂತರ ನಿರಂತರವಾಗಿ ಪ್ರತಿವಾರವೂ ಆಯೋಜನೆ ಮಾಡಲಾಗುತ್ತಿದೆ. ಆ ನಿಟ್ಟಿನಲ್ಲಿ ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆಯನ್ನು ಅರ್ಥಪೂರ್ಣವಾಗಿ ಹಾಗೂ ಅತ್ಯಂತ ಯಶಸ್ವಿಯಾಗಿ ಸಂಘದಲ್ಲಿ ಆಚರಿಸಲಾಗಿದೆ.

ದೆಹಲಿ ಕರ್ನಾಟಕ ಸಂಘದ ಅಧ್ಯಕ್ಷನಾಗಿ ನಾನು ಕಾರ್ಯ ನಿರ್ವಹಿಸುವ ಸುಯೋಗಕ್ಕೆ ಕಾರಣ ನನ್ನ ತಾಯಿ...ಹಾಗೂ ನನ್ನ ಪತ್ನಿ. ನಾನು ದೆಹಲಿಗೆ ವೃತ್ತಿ ನಿಮಿತ್ತ ಬರುವುದಕ್ಕೆ ನನ್ನ ಅತ್ತೆಯವರ ಒತ್ತಾಯವೂ ಇಲ್ಲಿ ಕಾರಣ. ದೆಹಲಿಗೆ ಆಗಮಿಸಿದ ನಂತರ ಸತತವಾಗಿ ಹದಿನೆಂಟು ವರ್ಷಗಳವರೆಗೆ ದೆಹಲಿ ಕರ್ನಾಟಕ ಸಂಘದ ಮೂಲಕ ಕನ್ನಡ–ಕನ್ನಡಿಗ–ಕರ್ನಾಟಕ ಕುರಿತಾಗಿ ಸೇವೆ ಮಾಡಲು ಕಾರಣೀಕರ್ತರಾದ ಈ ಮೂವರೂ ಮಹಿಳೆಯರನ್ನು ವಿಶ್ವ ಮಹಿಳಾ ದಿನಾಚರಣೆಯ ಈ ಸಂದರ್ಭದಲ್ಲಿ ನೆನೆಯುವುದರ ಜೊತೆಗೆ ಧನ್ಯವಾದಗಳನ್ನು ಅರ್ಪಿಸಬಯಸುತ್ತೇನೆ. ಮಹಿಳೆಯರನ್ನು ಗೌರವಿಸುವುದು ನಮ್ಮ ಧರ್ಮ. ಮಹಿಳೆ ಗೃಹಲಕ್ಷ್ಮಿ...ಸಂತಾನ ಲಕ್ಷ್ಮಿ... ಭಾಗ್ಯಲಕ್ಷ್ಮಿ... ಸಮಾಜವು ಮಹಿಳೆಯರನ್ನು ಗೌರವಿಸಿದರೆ ಅದು ನಮ್ಮನ್ನು ನಾವು ಗೌರವಿಸಿಕೊಂಡ ಹಾಗೆ.. ಸಮಾಜದಲ್ಲಿ ಮುಖ್ಯಪಾತ್ರ ಮಹಿಳೆಯರದ್ದಾಗಿದೆ ಮತ್ತು ಮಹಿಳೆಯರು ಎಲ್ಲಾ ಕ್ಷೇತ್ರದಲ್ಲೂ ಮುಂದೆ ಇದ್ದಾರೆ ಎಂದು ತಿಳಿಸಲು ಬಯಸುತ್ತೇನೆ.

ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ ಅಂಗವಾಗಿ ದೆಹಲಿ ಕರ್ನಾಟಕ ಸಂಘದಲ್ಲಿ ಇತ್ತೀಚಿಗೆ ನಡೆದ ಕಾರ್ಯಕ್ರಮದಲ್ಲಿ ದೆಹಲಿಯ ಸ್ಥಳೀಯ ಕನ್ನಡಿಗರು 'ಮಹಿಳಾ ಸಬಲೀಕರಣ ಮತ್ತು ಸಮಾಜದ ಅಭಿವೃದ್ಧಿಯಲ್ಲಿ ಮಹಿಳೆಯ ಪಾತ್ರ' ಎಂಬ ವಿಷಯದ ಕುರಿತು ವಿದ್ವತ್ಪೂರ್ಣವಾಗಿ ತಮ್ಮ ಅನಿಸಿಕೆ ಹಾಗೂ ವಿಚಾರಗಳನ್ನು ಮಂಡಿಸಿದ್ದಾರೆ. ಇವರೆಲ್ಲರಿಗೂ ಸಮಸ್ತ ದೆಹಲಿ ಕನ್ನಡಿಗರ ಪರವಾಗಿ ಅಭಿನಂದನೆ ಸಲ್ಲಿಸಬಯಸುತ್ತೇನೆ. ಈ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಭಾಗವಹಿಸಿ ಮಹಿಳಾ ಸಬಲೀಕರಣ ಕುರಿತು ಡಾ. ಸುಧಾ ಚಂದ್ರಶೇಖರ್ ಅವರೂ ಅರ್ಥಪೂರ್ಣವಾದ ವಿಚಾರಗಳನ್ನು ದೆಹಲಿ ಕನ್ನಡಿಗರಲ್ಲಿ ಹಂಚಿಕೊಂಡಿದ್ದಾರೆ ಇವರಿಗೂ ಧನ್ಯವಾದಗಳನ್ನು ತಿಳಿಸಬಯಸುತ್ತೇನೆ. ವೀರವನಿತೆಯರಾದ ಕಿತ್ತೂರು ರಾಣಿ ಚೆನ್ನಮ್ಮ, ಒನಕೆ ಓಬವ್ವ, ರಾಣಿ ಅಬ್ಬಕ್ಕ, ಝಾನ್ಸಿ ರಾಣಿ ಲಕ್ಷ್ಮೀಬಾಯಿ, ಸಾವಿತ್ರಿಬಾಯಿ ಫುಲೆ ಇನ್ನೂ ಅನೇಕ ಮಹಾನ್ ವೀರ ನಾರಿಯರು ದೇಶಕ್ಕಾಗಿ ತಮ್ಮನ್ನು ತಾವು ಸಮರ್ಪಿಸಿಕೊಂಡಿರುವ ಯಶೋಗಾಥೆಯನ್ನು ಈ ಕಾರ್ಯಕ್ರಮದ ಸಂದರ್ಭ ಸ್ಮರಿಸಿಕೊಳ್ಳಲಾಗಿದೆ.

ಆತ್ಮೀಯರೇ, ದೆಹಲಿ ಕರ್ನಾಟಕ ಸಂಘದ ಆಟೋಟ ಸ್ಪರ್ಧೆಗಳಿಗೆ ತನ್ನದೇಯಾದ ಮಹತ್ವವಿದೆ. ಪ್ರತಿ ವರ್ಷದಂತೆ ಈ ಬಾರಿ ದೆಹಲಿ ಕರ್ನಾಟಕ ಸಂಘದ ವಾರ್ಷಿಕ ಕ್ರಿಕೆಟ್ ಪಂದ್ಯಾವಳಿಯನ್ನು ದೆಹಲಿಯ ತಾಲ್ಕತೊರ ಕ್ರಿಕೆಟ್ ಮೈದಾನದಲ್ಲಿ ಆಯೋಜಿಸಲಾಗಿತ್ತು. ಈ ಕ್ರಿಕೆಟ್ ಪಂದ್ಯಾವಳಿಯಲ್ಲಿ ದೆಹಲಿ ಹಾಗೂ ದೆಹಲಿ ಸುತ್ತಮುತ್ತಲಿನ ಪ್ರದೇಶದಲ್ಲಿರುವ ಕನ್ನಡಿಗರ ಹದಿನೈದು ತಂಡಗಳು ಭಾಗವಹಿಸಿದ್ದು, ಆಟದಲ್ಲಿ ಕನ್ನಡಿಗರಿಗಿರುವ ತುಡಿತ ನಮಗೆ ಗೋಚರಿಸುತ್ತಿತ್ತು. ಭಾಗವಹಿಸಿದ ತಂಡಗಳು ಉತ್ತಮ ಪ್ರದರ್ಶನ ನೀಡಿದರು ಎಂಬುದನ್ನು ಇಲ್ಲಿ ಉಲ್ಲೇಖಿಸಲು ಹೆಮ್ಮೆ ಎನಿಸುತ್ತಿದೆ. ಆಟಗಾರರಷ್ಟೇ ಅಲ್ಲದೇ, ಈ ಪಂದ್ಯಾವಳಿಯಲ್ಲಿ ಸುಮಾರು ಮುನ್ನೂರೈವತ್ತಕ್ಕೂ ಹೆಚ್ಚು ಕನ್ನಡಿಗರು ಬಂದು, ತಮ್ಮ ನೆಚ್ಚಿನ ತಂಡವನ್ನು ಪ್ರೋತ್ಸಾಹಿಸುತ್ತಿದ್ದ ಚಿತ್ರಣ ಹಬ್ಬದ ವಾತಾವರಣದಂತೆ ಕಂಗೊಳಿಸುತ್ತಿತ್ತು. ಭಾಗವಹಿಸಿದ ಎಲ್ಲಾ ತಂಡಗಳಿಗೆ ಹಾಗೂ ಮೈದಾನಕ್ಕೆ ಬಂದು ಕ್ರಿಕೆಟ್ ಪಂದ್ಯಗಳನ್ನು ವೀಕ್ಷಿಸಿ ಪ್ರೋತ್ಸಾಹಿಸಿದ ಕನ್ನಡ ಮನಸ್ಸುಗಳಿಗೆ ಹಾಗೂ ಕ್ರೀಡಾ ಪ್ರೋತ್ಸಾಹಕರಿಗೆ ನಾನು ಧನ್ಯವಾದಗಳನ್ನು ತಿಳಿಸುತ್ತೇನೆ. ಆಟದ ಎಲ್ಲಾ ವಿಭಾಗದಲ್ಲೂ ಅತ್ಯುತ್ತಮ ಆಟದ ವೈಖರಿಯನ್ನು ಪ್ರದರ್ಶಿಸಿ ಫೈನಲ್ ತಲುಪಿ ದೆಹಲಿ ಕರ್ನಾಟಕ ಸಂಘದ ಟ್ರೋಫಿಯ ಚಾಂಪಿಯನ್ ಆದ ರಾಘವ ಶರ್ಮಾ ನಾಯಕತ್ವದ ಸೌತ್ ಕೆನರಾ ಕ್ರಿಕೆಟ್ ಕ್ಲಬ್ ತಂಡಕ್ಕೂ ಮತ್ತು ತನ್ನ ಸಾಂಘಿಕ ಆಟದ ಪ್ರದರ್ಶನ ಮೂಲಕ ರನ್ನರ್ ಅಪ್ ಆದ ನಾಗರಾಜ ಹೊಸಮನಿ ಅವರ ನಾಯಕತ್ವದ ಯುವಕರಿಂದ ಕೂಡಿದ ಕರ್ನಾಟಕ ಭವನ ತಂಡಕ್ಕೆ ಅಭಿನಂದನೆಗಳು. ಈ ವರ್ಷದ ವಾರ್ಷಿಕ ಕ್ರಿಕೆಟ್ ಪಂದ್ಯಾವಳಿ ಆಯೋಜಿಸಲು ಬೆನ್ನೆಲುಬಾಗಿ ನಿಂತು ಯಶಸ್ವಿಯಾಗಿ ನಡೆಸಿಕೊಟ್ಟ ಕ್ರೀಡಾ ಸಮಿತಿ ಅಧ್ಯಕ್ಷ ಡಾ. ಎಂ.ಎಸ್. ಶಶಿಕುಮಾರ್, ಸಂಚಾಲಕರಾದ ಶ್ರೀಮತಿ ಮಾಲಿನಿ ಪ್ರಹ್ಲಾದ್ ಹಾಗೂ ಸದಸ್ಯರಾದ ಶ್ರೀ ಸಂತೋಷ್ ಜೆ, ಶ್ರೀ ನವೀನ ಅವರಿಗೆ ಮತ್ತು ಕಾರ್ಯಕಾರಿ ಸಮಿತಿಯ ಎಲ್ಲ ಸದಸ್ಯರಿಗೂ ಸಹ ಧನ್ಯವಾದಗಳನ್ನು ತಿಳಿಸುತ್ತೇನೆ.

ಆತ್ಮೀಯ ಕನ್ನಡಿಗರೇ, ದೆಹಲಿ ಕರ್ನಾಟಕ ಸಂಘವೂ ತನ್ನ 75 ವಸಂತಗಳನ್ನು ಪೂರೈಸುತ್ತಿದೆ. ಅಮೃತ ಮಹೋತ್ಸವ ಆಚರಣೆಯ ಅಂಗವಾಗಿ ಉದ್ಘಾಟನೆ ಕಾರ್ಯಕ್ರಮವನ್ನು ಇದೇ ಏಪ್ರಿಲ್ ಮಾಹೆಯಲ್ಲಿ ಜಿಲ್ಲಾವಾರು ಉತ್ಸವಗಳೊಂದಿಗೆ ಆಯೋಜನೆ ಮಾಡಲು ಸಿದ್ಧತೆ ಮಾಡಲಾಗುತ್ತಿದೆ. ಪ್ರಪ್ರಥಮವಾಗಿ ಕೋಲಾರ ಮತ್ತು ಚಿಕ್ಕಬಳ್ಳಾಪುರ ಜಿಲ್ಲಾ ಸಾಂಸ್ಕೃತಿಕ ಉತ್ಸವ ಆಯೋಜಿಸಲಾಗುತ್ತಿದೆ. ರಾಜ್ಯದ ಸಚಿವರು, ಕೇಂದ್ರ ಸಚಿವರು, ರಾಜ್ಯವನ್ನು ಪ್ರತಿನಿಧಿಸುತ್ತಿರುವ ಸಂಸದರು, ಶಾಸಕರು, ಹಿರಿಯ ಅಧಿಕಾರಿಗಳು ಸೇರಿದಂತೆ ಗಣ್ಯಾತಿಗಣ್ಯರೂ ಭಾಗವಹಿಸುತ್ತಿದ್ದಾರೆ. ಕರ್ನಾಟಕ ಸಂಘದ ಸಭಾಂಗಣದ ಹವಾನಿಯಂತ್ರಣ ಘಟಕ ಸಮರ್ಪಕವಾಗಿ ಕಾರ್ಯ ನಿರ್ವಹಿಸದೇ ಇರುವ ಕಾರಣ ಅದರ ದುರಸ್ತಿ ಕಾಮಗಾರಿ ಈಗಾಗಲೇ ಕೈಗೆತ್ತಿಕೊಂಡಿದ್ದೇವೆ.

ಸ್ಪರ್ಧಾತ್ಮಕ ಪರೀಕ್ಷೆ ಹಾಗೂ ಉನ್ನತ ಶಿಕ್ಷಣಕ್ಕಾಗಿ ದೆಹಲಿಗೆ ಬರುವ ವಿದ್ಯಾರ್ಥಿಗಳ ಅನುಕೂಲಕ್ಕಾಗಿ ಊಟ ಹಾಗೂ ವಸತಿ ವ್ಯವಸ್ಥೆಗಾಗಿ ವಸತಿ ನಿಲಯವನ್ನು ನಿರ್ಮಾಣ ಮಾಡುವುದಕ್ಕಾಗಿ ರಾಜ್ಯ ಸರ್ಕಾರದಿಂದ ದೆಹಲಿ ಕರ್ನಾಟಕ ಸಂಘಕ್ಕೆ ಹದಿನೈದು ಕೋಟಿ ರೂಪಾಯಿಗಳ ಅನುದಾನ ಮಂಜೂರು ಮಾಡಿಸಿಕೊಡಬೇಕೆಂದು ಕರ್ನಾಟಕ ವಿಧಾನ ಪರಿಷತ್ತಿನ ಮಾನ್ಯ ಸಭಾಪತಿ ಶ್ರೀ ಬಸವರಾಜ್ ಎಸ್. ಹೊರಟ್ಟಿ ಅವರಿಗೆ ದೆಹಲಿಯಲ್ಲಿ ಈ ಹಿಂದೆ ನಡೆದ ಸಂಘದ ಕಾರ್ಯಕ್ರಮದಲ್ಲಿ ಭಾಗಿಯಾಗಿದ್ದ ಸಂದರ್ಭದಲ್ಲಿ ಮನವಿ ಸಲ್ಲಿಸಲಾಗಿತ್ತು. ಮಾನ್ಯ ಶ್ರೀ ಬಸವರಾಜ್ ಹೊರಟ್ಟಿ ಅವರ ಶಿಫಾರಸ್ಸಿನ ಪತ್ರಕ್ಕೆ ರಾಜ್ಯ ಸರ್ಕಾರದಿಂದ ಸಕಾರಾತ್ಮಕ ಸ್ಪಂದನೆ ದೊರೆತಿದೆ. ಇದಕ್ಕೆ ಸಂಬಂಧಪಟ್ಟ ರಾಜ್ಯ ಸರ್ಕಾರದ ಇಲಾಖಾ ಕಾರ್ಯದರ್ಶಿ ಅವರು ಈ ವಿಷಯಕ್ಕೆ ಪೂರಕವಾಗಿ ಅಗತ್ಯವಿರುವ ಪ್ರಸ್ತಾವನೆ ಸಲ್ಲಿಸಲು ತಿಳಿಸಿದ್ದಾರೆ. ಆದಷ್ಟು ಬೇಗ ರಾಜ್ಯ ಸರ್ಕಾರದಿಂದ ವಸತಿ ನಿಲಯವನ್ನು ನಿರ್ಮಾಣ ಮಾಡುವುದಕ್ಕಾಗಿ ರೂ. ಹದಿನೈದು ಕೋಟಿ ಸಹಾಯ ಧನ ದೆಹಲಿ ಕರ್ನಾಟಕ ಸಂಘಕ್ಕೆ ಮಂಜೂರಾಗಲೆಂದು ಆಶಿಸುತ್ತೇನೆ.

ದೆಹಲಿಯಲ್ಲಿನ ನೋಂದಣಿಯಾಗಿರುವ ಹಲವು ಸ್ಥಳೀಯ ಸಂಘ ಸಂಸ್ಥೆಗಳು ದೆಹಲಿ ಕರ್ನಾಟಕ ಸಂಘದ ಸಾಂಸ್ಕೃತಿಕ ಸಮುಚ್ಚಯ ನಿರ್ಮಾಣದ ಸಂದರ್ಭದಲ್ಲಿ ದೆಹಲಿ ಕರ್ನಾಟಕ ಸಂಘಕ್ಕೆ ಸಾಕಾರವಾಗಿ ನಿಂತಿದ್ದವು. ಮುಂಬರುವ ಅಮೃತಮಹೋತ್ಸವ ಆಚರಣೆಯ ಸಂದರ್ಭದಲ್ಲಿ ಎಲ್ಲಾ ಸಂಘ ಸಂಸ್ಥೆಗಳನ್ನು ಗಮನದಲಿಟ್ಟುಕೊಂಡು, ನೋಂದಣಿಯಾದ ಪ್ರತಿಯೊಂದು ಸ್ಥಳೀಯ ಸಂಘಗಳಿಗೆ ಅವಕಾಶ ಕಲ್ಪಿಸಿಕೊಡುವ ನಿಟ್ಟಿನಲ್ಲಿ ಯೋಜನೆ ರೂಪಿಸಲಾಗುತ್ತಿದೆ. ಅಂತಹ ಸ್ಥಳೀಯ ಸಂಘಗಳು ಕಾರ್ಯಕ್ರಮವನ್ನು ಕರ್ನಾಟಕ ಸಂಘದ ಸಹಯೋಗದೊಂದಿಗೆ ಹಮ್ಮಿಕೊಳ್ಳಲು ಅವಕಾಶ ಮಾಡಿ ಕೊಡುವ ದಿಸೆಯಲ್ಲಿ ಸಂಘದ ಕಾರ್ಯಕಾರಿ ಸಮಿತಿಯಲ್ಲಿ ಚರ್ಚಿಸಿ ಅಂತಿಮ ತೀರ್ಮಾನಕ್ಕೆ ಬರಲಾಗುವುದು.

ಇದೇ ಏಪ್ರಿಲ್ ತಿಂಗಳ 23 ಮತ್ತು 24 ರಂದು ಅಮೃತ ಮಹೋತ್ಸವದ ಉದ್ಘಾಟನಾ ಸಮಾರಂಭದಲ್ಲಿ ಮೊಟ್ಟಮೊದಲಿಗೆ ಜಿಲ್ಲಾವಾರು ಉತ್ಸವಗಳು ನಡೆಯುತ್ತಿದ್ದು ಈ ಕಾರ್ಯಕ್ರಮದಲ್ಲಿ ಅನೇಕ ಗಣ್ಯಾತಿಗಣ್ಯರು ಭಾಗವಹಿಸುತ್ತಿದ್ದು, ಜೊತೆಗೆ ಸಾಂಸ್ಕೃತಿಕ ತಂಡಗಳಿಂದ ಜಾನಪದ ಗೀತೆ, ನೃತ್ಯ ವೈಭವ ಮತ್ತು ನಾಟಕ ಮುಂತಾದ ಸಾಂಸ್ಕೃತಿಕ ಕಾರ್ಯಕ್ರಮ ಆಯೋಜಿಸಲಾಗುತ್ತಿದೆ. ದೆಹಲಿಯ ಕನ್ನಡಿಗರೆಲ್ಲರೂ ಅಪಾರ ಸಂಖ್ಯೆಯಲ್ಲಿ ಆಗಮಿಸಿ ಕಾರ್ಯಕ್ರಮದಲ್ಲಿ ಭಾಗಿಯಾಗಿ ಯಶಸ್ವಿಗೊಳಿಸಬೇಕೆಂದು ತಮ್ಮಲ್ಲಿ ಪ್ರಾರ್ಥಿಸಿಕೊಳ್ಳುತ್ತೇನೆ.

ಈ ಸಾಲಿನ ಪದ್ಮಪ್ರಶಸ್ತಿಗೆ ಭಾಜನರಾದ ಹೆಮ್ಮೆಯ ಕನ್ನಡಿಗರಾದ ದಿ. ಸಿದ್ದಲಿಂಗಯ್ಯ (ಮರಣೋತ್ತರ), ಸುಬ್ಬಣ್ಣ ಅಯ್ಯಪ್ಪನ್, ಎಚ್.ಆರ್. ಕೇಶವಮೂರ್ತಿ, ಅಬ್ದುಲ್ ಖಾದರ್ ನಾದಕಟ್ಟೀನ್ ಮತ್ತು ಅಮೈ ಮಹಾಲಿಂಗ ನಾಯ್ಕ್ ಈ ಎಲ್ಲ ಸಾಧಕರಿಗೆ ವೈಯಕ್ತಿಕವಾಗಿ ಹಾಗೂ ಸಮಸ್ತ ದೆಹಲಿ ಕನ್ನಡಿಗರ ಪರವಾಗಿ ಅಭಿನಂದನೆಗಳು. ಸಾಧಕರನ್ನು ಸನ್ಮಾನಿಸುವುದಕ್ಕಾಗಿ ದೆಹಲಿ ಕರ್ನಾಟಕ ಸಂಘಕ್ಕೆ ಆಹ್ವಾನಿಸಲಾಗಿತ್ತು. ಕಾರಣಾಂತರಗಳಿಂದ ಅವರು ಕರ್ನಾಟಕ ಸಂಘಕ್ಕೆ ಆಗಮಿಸಲಾಗಲಿಲ್ಲ. ಆದಾಗ್ಯೂ ಸಹ ಮಾನ್ಯ ಕೇಂದ್ರ ಸಚಿವರಾದ ಶೋಭಾ ಕರಂದ್ಲಾಜೆ ಅವರ ಕಚೇರಿಯಲ್ಲಿ ವೈಯಕ್ತಿಕವಾಗಿ ಪದ್ಮಪ್ರಶಸ್ತಿ ಪುರಸ್ಕೃತರನ್ನು ಭೇಟಿ ಮಾಡಿ, ದೆಹಲಿ ಕನ್ನಡಿಗರ ಪರವಾಗಿ ಅಭಿನಂದನೆಗಳನ್ನು ತಿಳಿಸಿದ್ದೇನೆ. ಮುಂಬರುವ ದಿನಗಳಲ್ಲಿ ಅವರೆಲ್ಲರನ್ನೂ ಆಹ್ವಾನಿಸಿ ದೆಹಲಿ ಕರ್ನಾಟಕ ಸಂಘದ ಮೂಲಕ ಗೌರವ ಸನ್ಮಾನ ಮಾಡಲಾಗುವುದು.

***ಸಿ.ಎಂ. ನಾಗರಾಜ***
**ಅಧ್ಯಕ್ಷರು**

## ಮುನ್ನೋಟ

ಆತ್ಮೀಯರೇ,

ದೆಹಲಿ ಕರ್ನಾಟಕ ಸಂಘ, ದೆಹಲಿ, ಎನ್.ಸಿ.ಆರ್. ನಗರ ಪ್ರದೇಶದ ಕನ್ನಡಿಗರ ಸಾಂಸ್ಕೃತಿಕ, ಸಾಮಾಜಿಕ ಬದುಕಿಗೆ ತನ್ನತನವನ್ನು ನೆನಪಿಸಿ, ಅದನ್ನು ಉಳಿಸಿ, ಬೆಳೆಸಬೇಕಾದ ಸಂಘ. ಈ ದಿಸೆಯಲ್ಲಿ ಸಂಘ ಸದಾಕಾಲ ಕಾರ್ಯಪ್ರವೃತ್ತವಾಗಿದೆ. ಆದುದರಿಂದಲೇ ನಮ್ಮೀ ಸಂಘ ಇಡೀ ಭಾರತದಲ್ಲೇ ಅತ್ಯಂತ ಸಕ್ರಿಯವಾದ ಕನ್ನಡ ಸಂಘಗಳಲ್ಲಿ ಒಂದಾಗಿದೆ. ಕಳೆದ ತಿಂಗಳು ಸಂಘ ಆಯೋಜಿಸಿದ್ದ ಕಜಕಿಸ್ತಾನದ ಕಲಾ ತಂಡಗಳಿಂದ ಭಾರತೀಯ ನೃತ್ಯ ಸಂಗೀತೋತ್ಸವ ಹಾಗೂ ಮಹಿಳಾ ದಿನಾಚರಣೆ ಸಂಭ್ರಮಗಳು ನನಗೆ ಅತ್ಯಂತ ಸಂತಸ ತಂದ ಕಾರ್ಯಕ್ರಮಗಳಾಗಿವೆ. ಏಕೆಂದರೆ, ಈ ಎರಡೂ ಕಾರ್ಯಕ್ರಮಗಳೂ ಹೊಸ ಹೊಸ ಪ್ರೇಕ್ಷಕರನ್ನು ಆಕರ್ಷಿಸಿಸಿದ್ದು ಯಾವುದೇ ಸಂಘದ ಅಸ್ತಿತ್ವವು ಅದರ ಸದಸ್ಯರ ಪಾಲ್ಗೊಳ್ಳುವಿಕೆ ಹಾಗೂ ಪಾಲುಗಾರಿಕೆಯಿಂದಲೇ ನಿರ್ಧರಿಸಲ್ಪಡುತ್ತದೆ. ಹೆಚ್ಚಿನ ಸಂಖ್ಯೆಯು ಭಾಗವಹಿಸುವಿಕೆ ಇತರರಿಗೆ ಪ್ರೋತ್ಸಾಹ ದಾಯಕವಾಗುವುದರೊಂದಿಗೆ ಆಯೋಜಕರ ಜವಾಬ್ದಾರಿಯನ್ನು ಹೆಚ್ಚಿಸುತ್ತದೆ.

ಕಾರಣಾಂತರಗಳಿಂದ ಸಂಘದ ಚಟುವಟಿಕೆಗಳಲ್ಲಿ ಭಾಗವಹಿಸುವವರ ಸರಾಸರಿ ಸಂಖ್ಯೆ 150–170ಕ್ಕೆ ಇಳಿದಿರುವುದು ಬಹಳ ಬೇಸರದ ಸಂಗತಿ. ಆದುದರಿಂದ ನಮ್ಮಗಳೆಲ್ಲರ ಪ್ರಯತ್ನ ನಮ್ಮ ಕಾರ್ಯಕ್ರಮಗಳಿಗೆ ಹೆಚ್ಚಿನ ಸದಸ್ಯರು ಭಾಗವಹಿಸಿ ಪಾಲ್ಗೊಳ್ಳುವಂತೆ ಮಾಡುವುದಾಗಿದೆ. ಈ ಪರಿಸ್ಥಿತಿಯನ್ನು ಸುಧಾರಿಸುವ ನಿಟ್ಟಿನಲ್ಲಿ ಕಾರ್ಯಪ್ರವೃತ್ತರಾಗಿರುವ ಕಾರ್ಯಕಾರಿ ಸಮಿತಿಯ, ರಾಜ್ಯದ ಎಲ್ಲಾ ಜಿಲ್ಲೆಯ ಕಲಾ ಪ್ರಕಾರಗಳನ್ನು ಸದಸ್ಯರಿಗೆ ಪರಿಚಯಿಸುವ ನಿಟ್ಟಿನಲ್ಲಿ ರಾಜ್ಯದ ಎಲ್ಲಾ ಜಿಲ್ಲೆಗಳ ಕಲಾ ಉತ್ಸವವನ್ನು ಆಯೋಜಿಸಲು ತೀರ್ಮಾನಿಸಲಾಗಿದೆ.

ತಮ್ಮಗಳ ಪ್ರೋತ್ಸಾಹ ಆಸರೆ–ಹಾರೈಕೆ ಬೇಕಿದೆ. ಮುಂದಿನ ಕಾರ್ಯಕ್ರಮಗಳಿಗೆ ಬನ್ನಿ, ಪ್ರೋತ್ಸಾಹಿಸಿ, ಪುರಸ್ಕರಿಸಿ.

*ಆರ್. ರೇಣುಕುಮಾರ್*
*ಪ್ರಧಾನ ಕಾರ್ಯದರ್ಶಿ*

## ದೆಹಲಿ ಕರ್ನಾಟಕ ಸಂಘ (ರಿ)

# ಅಮೃತ ಮಹೋತ್ಸವ

ಉದ್ಘಾಟನಾ ಸಮಾರಂಭ

**ಕೋಲಾರ ಮತ್ತು ಚಿಕ್ಕಬಳ್ಳಾಪುರ**

**ಜಿಲ್ಲಾ ಸಾಂಸ್ಕೃತಿಕ ಉತ್ಸವ**

**ಏಪ್ರಿಲ್ 23 ಶನಿವಾರ ಮತ್ತು 24 ಭಾನುವಾರ 2022**



ದಿವ್ಯ ಸಾನಿಧ್ಯ
ಪರಮಪೂಜ್ಯ ಜಗದ್ಗುರು ಶ್ರೀಶ್ರೀಶ್ರೀ
**ಡಾ|| ನಿರ್ಮಲಾನಂದನಾಥ ಮಹಾಸ್ವಾಮೀಜಿಗಳು**
ಪೀಠಾಧ್ಯಕ್ಷರು, ಶ್ರೀ ಆದಿಚುಂಚನಗಿರಿ ಮಹಾಸಂಸ್ಥಾನ ಮಠ, ಆದಿಚುಂಚನಗಿರಿ

**ವಿಚಾರ ಸಂಕಿರಣ**
ಕೋಲಾರ–ಚಿಕ್ಕಬಳ್ಳಾಪುರ ಕುರಿತು

**ಸಾಂಸ್ಕೃತಿಕ ಕಾರ್ಯಕ್ರಮಗಳು**
ಕೋಲಾರ ಚಿಕ್ಕಬಳ್ಳಾಪುರ ಸಾಕ್ಷ್ಯಚಿತ್ರ ಪ್ರದರ್ಶನ
ನಾಟಕ ಪ್ರದರ್ಶನ
ಸುಗಮ ಸಂಗೀತ
ಡೊಳ್ಳು ಕುಣಿತ
ಕಂಸಾಳೆ
ತಮಟೆ ವಾದನ
ಜ್ಞಾನಪೀಠ ಪ್ರಶಸ್ತಿ ಪುರಸ್ಕೃತ ಮಾಸ್ತಿ ವೆಂಕಟೇಶ್ ಅಯ್ಯಂಗಾರ್ ಅವರ ಸಾಹಿತ್ಯಕ್ಕೆ ಸಮೂಹ ನೃತ್ಯ
ಡಾ. ಡಿ.ವಿ.ಜಿ.ಯವರ ಸಾಹಿತ್ಯಕ್ಕೆ ನೃತ್ಯರೂಪಕ

**08** ಮೇ 2022 **2022**

## ಬಸವ ಜಯಂತಿ ಆಚರಣೆ

## ಆಧುನಿಕ ಭಗೀರಥ ಪದ್ಮಶ್ರೀ ಪುರಸ್ಕೃತ ಅಮೈ ಮಹಾಲಿಂಗ ನಾಯ್ಕ ಅವರಿಗೆ ಸನ್ಮಾನ



ಸ್ವಾವಲಂಬಿ ಜೀವನದ ಹಾದಿಯಲ್ಲಿ ಏಕಾಂಗಿಯಾಗಿ ಏಳು ಸುರಂಗಗಳನ್ನು ಕೊರೆದು ಬೋಳುಗುಡ್ಡೆಯನ್ನು ಜೀವಜಲದಿಂದ ನಂದನವನ ಗೊಳಿಸಿದ ಅದ್ಭುತ ಸಾಧಕ, ಹೆಮ್ಮೆಯ ಕೃಷಿಕ, ಆಧುನಿಕ ಭಗೀರಥನೆನಿಸಿ ಕೊಂಡ ಶ್ರೀ ಅಮೈ ಮಹಾಲಿಂಗ ನಾಯ್ಕ ಅವರು ಮಾನ್ಯ ರಾಷ್ಟ್ರಪತಿಗಳಿಂದ 2022ರ ಸಾಲಿನ ಪದ್ಮಶ್ರೀ ಪ್ರಶಸ್ತಿ ಪುರಸ್ಕೃತರಾದವರು. ಕನ್ನಡ ನಾಡಿಗೆ, ರೈತಾಪಿ ಕುಟುಂಬಕ್ಕೆ ಮುಖ್ಯವಾಗಿ ಯುವಜನತೆಗೆ ಆದರ್ಶರಾದ ಶೀಯುತರನ್ನು ದೆಹಲಿಯಲ್ಲಿರುವ ಅವರ ಹಿತೈಷಿ ಬಳಗವು ಭೇಟಿ ಮಾಡಿ ಸನ್ಮಾನಿಸಲಾಯಿತು. ಸನ್ಮಾನ ಸ್ವೀಕರಿಸಿ ಮಾತನಾಡಿದ ಅಮೈ ಮಹಾಲಿಂಗ ನಾಯ್ಕ ಅವರು ಹಳ್ಳಿಯಲ್ಲಿ ಕೃಷಿ ಮಾಡುತ್ತಿದ್ದ ಸಾಮಾನ್ಯನೊಬ್ಬನನ್ನು ದೆಹಲಿಗೆ ಕರೆಸಿ ಪ್ರಶಸ್ತಿ ನೀಡಿ ಗೌರವಿಸಿದ್ದು ಬಹಳ ಸಂತೋಷವೆನಿಸಿದೆ. ಸುಮಾರು 40–45 ವರ್ಷಗಳಿಂದ ಮಣ್ಣನ್ನೇ ನಂಬಿ ಬದುಕಿದ್ದ ನನ್ನನ್ನು ಭೂಮಿತಾಯಿ ಕೈಬಿಡಲಿಲ್ಲ. ಸುಮಾರು ಎರಡು ಎಕರೆ ಬರಡು ಭೂಮಿಯನ್ನು ಫಲವತ್ತಾಗಿ ಮಾಡಿದ ಸಾರ್ಥಕತೆಯಿದೆ. ನನ್ನ ಬದುಕು ಕಟ್ಟಿಕೊಳ್ಳಲು ಇಂತಹ ಕಾರ್ಯ ಮಾಡಿದ್ದೇನೆಯೇ ಹೊರತು ಪ್ರಶಸ್ತಿಗಾಗಿ ಅಲ್ಲ. ಹಳ್ಳಿಯನ್ನು ಬಿಟ್ಟು ಎಲ್ಲರೂ ನಗರಕ್ಕೆ ಹೋದರೆ ನಾವೆಲ್ಲರೂ ತಿನ್ನುವುದೇನು? ಪರಿಶ್ರಮಕ್ಕೆ ತಕ್ಕ ಫಲವಿದೆಯೆಂಬ ನಂಬಿಕೆಯಿಂದ ಮುನ್ನಡೆಯಬೇಕು ಎಂದು ಹೇಳಿದರು.

ಈ ಸಂದರ್ಭದಲ್ಲಿ ಡಾ. ನಿರಂಜನ್ ನಾಯ್ಕ್, ಅರವಿಂದ ಬಿಜೈ, ರಾಘವೇಂದ್ರ ನಾಯ್ಕ್, ನಾಗರಾಜ ಎಂ., ಮೋಹನ್, ಅಜಿತ್ ನಾಯ್ಕ್, ಕುಸುಮ, ಸುನೀತಾ ಬಿಜೈ, ವಾಣಿ, ಪೂರ್ಣಿಮ ಮತ್ತಿತರರು ಉಪಸ್ಥಿತರಿದ್ದರು.

**ಅರವಿಂದ ಬಿಜೈ**

# ಭಾರತ ಮತ್ತು ಕಜಕಿಸ್ತಾನ ಗಣರಾಜ್ಯಗಳ ೩೦ ನೇ ವರ್ಷದ ರಾಜತಾಂತ್ರಿಕ ಸಂಬಂಧ ಸ್ಮರಣೆಯ ಸಂಗೀತ ನೃತ್ಯೋತ್ಸವ









ಭಾರತ ಮತ್ತು ಕಜಕಿಸ್ತಾನ ನಡುವಿನ ರಾಜತಾಂತ್ರಿಕ ಸಂಬಂಧಗಳ ಸ್ಥಾಪನೆಯ 30 ನೇ ವಾರ್ಷಿಕೋತ್ಸವದ ಸ್ಮರಣಾರ್ಥ ದೆಹಲಿ ಕರ್ನಾಟಕ ಸಂಘ ಹಾಗೂ ಕಜಕಿಸ್ತಾನ ಗಣರಾಜ್ಯದ ಭಾರತದ ರಾಯಭಾರ ಕಚೇರಿ, ನವದೆಹಲಿ ಸಂಯುಕ್ತ ಆಶ್ರಯದಲ್ಲಿ ಭಾರತೀಯ ಶಾಸ್ತ್ರೀಯ ನೃತ್ಯ ಕಾರ್ಯಕ್ರಮ ದಿನಾಂಕ 12.03.2022ರಂದು ಸಂಘದ ಸಭಾಂಗಣದಲ್ಲಿ ಜರುಗಿತು.

ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ರಿಪಬ್ಲಿಕ್ ಆಫ್ ಕಜಕಿಸ್ತಾನ್ ರಾಯಭಾರ ಕಚೇರಿಯ ಇನ್ ಚಾರ್ಜ್ ಡಿ' ಅಫೇರ್ಸ್ ಶ್ರೀ ಡಾರ್ಖಾನ್ ಸೀಟೆನೋವ್ ಅವರು ಮಾತನಾಡುತ್ತಾ, ನಮ್ಮ ಎರಡು ದೇಶಗಳ ನಡುವಿನ ರಾಜತಾಂತ್ರಿಕ ಸಂಬಂಧವನ್ನು ಸ್ಮರಿಸುವ ಇಂತಹ ಆಚರಣೆಯನ್ನು ಹಲವಾರು ವರ್ಷಗಳಿಂದ ಮಾಡಿಕೊಂಡು ಬರುತ್ತಿದ್ದು ಇಂದಿನ ಕಜಕಿಸ್ತಾನದ ಗೌರವಾನ್ವಿತ ಕಲಾವಿದೆ ಅಕ್ಮರಲ್ ಕೈನಜರೋವ ತಂಡದ ಕಲಾವಿದರ ಈ ಕಾರ್ಯಕ್ರಮವನ್ನು ಭಾರತದಲ್ಲಿನ ರಾಜತಾಂತ್ರಿಕ ಸಂಬಂಧದ 30 ನೇ ವಾರ್ಷಿಕೋತ್ಸವಕ್ಕೆ ಸಮರ್ಪಿಸಲಾಗಿದೆ ಎಂದು ತಿಳಿಸಲು ನನಗೆ ತುಂಬಾ ಸಂತೋಷವಾಗುತ್ತಿದೆ ಎಂದರು. 2009 ರಲ್ಲಿ ಕಜಕಿಸ್ತಾನದ ಅಧ್ಯಕ್ಷರು ಭಾರತದ ಗಣರಾಜ್ಯೋತ್ಸವದ ಮುಖ್ಯ ಅತಿಥಿಯಾಗಿ ಭೇಟಿ ನೀಡಿದ ನಂತರ ಎರಡು ದೇಶಗಳ ನಡುವೆ ವ್ಯಾಪಾರ ಸಂಬಂಧಗಳು ವಿಸ್ತರಣೆಯಾಗಿದ್ದಲ್ಲದೆ ರಚನಾತ್ಮಕ ರಾಜಕೀಯ ಸಂಬಂಧವನ್ನು ಸ್ಥಾಪಿಸಿರುವುದಕ್ಕೆ ಇಂದಿನ ಕಾರ್ಯಕ್ರಮ ಒಂದು ನಿದರ್ಶನ ಎಂದರು. ನೃತ್ಯ ಪ್ರದರ್ಶನ ನೀಡುತ್ತಿರುವ ತಂಡಕ್ಕೂ, ಕಾರ್ಯಕ್ರಮಕ್ಕೆ ಆಹ್ವಾನಿಸಿದ ದೆಹಲಿ ಕರ್ನಾಟಕ ಸಂಘಕ್ಕೂ ಧನ್ಯವಾದಗಳನ್ನು ತಿಳಿಸಿದರು.

ಸಮಾರಂಭದಲ್ಲಿ ಗೌರವ ಉಪಸ್ಥಿತರಿದ್ದ ನವದೆಹಲಿಯ ಕರ್ನಾಟಕ ಭವನದ ನಿವಾಸಿ ಆಯುಕ್ತರಾದ ಐ.ಎ.ಎಸ್ ಅಧಿಕಾರಿ ಶ್ರೀಮತಿ ಎಂ. ಇಮ್‌ಕೊಂಗ್ಲ ಜಮೀರ್ ಅವರು ಮಾತನಾಡಿ, 1992 ರಲ್ಲಿ ಎರಡು ದೇಶಗಳ ನಡುವೆ ರಾಜತಾಂತ್ರಿಕ ಸಂಬಂಧಗಳನ್ನು ಸ್ಥಾಪಿಸುವುದಕ್ಕಿಂತ ಮೊದಲೇ ಸುಮಾರು 2000 ವರ್ಷಗಳಿಂದಲೂ ಎರಡೂ ದೇಶಗಳ ನಡುವೆ ನಾವು ಸಾಂಸ್ಕೃತಿಕ, ಐತಿಹಾಸಿಕ ಮತ್ತು ವ್ಯಾಪಾರ ಸಂಬಂಧಗಳನ್ನು ಹೊಂದಿದ್ದೇವೆ. ಅಲ್ಲದೆ ಕಜಕಿಸ್ತಾನದ ಪ್ರಥಮ ಅಧ್ಯಕ್ಷರ ಕಾರ್ಯಕಾಲದಲ್ಲಿ ನಮ್ಮ ಭಾರತದ ಪ್ರಧಾನ ಮಂತ್ರಿಗಳು ಮೊದಲ ಬಾರಿಗೆ ಭೇಟಿ ನೀಡಿದ ಸಂದರ್ಭ ಉಲ್ಲೇಖಿಸಿದರು. ಇಂದಿನ ಈ ಕಾರ್ಯಕ್ರಮ ನಮ್ಮ ಎರಡು ದೇಶಗಳೊಂದಿಗಿನ ಹಲವಾರು ವರ್ಷಗಳ ಸಂಬಂಧದ ಪರಾಕಾಷ್ಠೆಗೆ ಉದಾಹರಣೆ ಎಂದು ನಾನು ಭಾವಿಸುತ್ತೇನೆ. ಇದಲ್ಲದೆ ನಮ್ಮ ಸಂಗೀತ, ಹಿಂದಿ ಚಲನಚಿತ್ರಗಳು, ಭಾರತೀಯ ಸಂಸ್ಕೃತಿ ಕಜಕಿಸ್ತಾನ್‌ನಲ್ಲಿ ಸಾಂಸ್ಕೃತಿಕ ವಲಯದಲ್ಲಿ ಬಹಳ ಜನಪ್ರಿಯತೆ ಪಡೆದಿದೆ ಎಂದರು.

ಇದೇ ಸಂದರ್ಭ ಕರ್ನಾಟಕದ ಜೆಕ್ ರಿಪಬ್ಲಿಕ್ ಕೌನ್ಸಿಲರ್ ಆದ ಶ್ರೀ ಪ್ರಕಾಶ್‌ರವರು ವೇದಿಕೆಯಲ್ಲಿದ್ದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ದೆಹಲಿ ಕರ್ನಾಟಕ ಸಂಘದ ಅಧ್ಯಕ್ಷರಾದ ಶ್ರೀ ಸಿ.ಎಂ. ನಾಗರಾಜ ಅವರು ಮಾತನಾಡಿ ಸಂಘದಲ್ಲಿ ಕಜಕಿಸ್ತಾನದ ಜೊತೆ ನಡೆಯುತ್ತಿರುವ ಮೂರನೇ ಕಾರ್ಯಕ್ರಮ ಇದಾಗಿದ್ದು ಐದು ವರ್ಷಕ್ಕೊಮ್ಮೆ ನಡೆಯುವ ಕಾರ್ಯಕ್ರಮ ಹಿಂದೆ ನಾನು ಪ್ರಧಾನ ಕಾರ್ಯದರ್ಶಿ ಆಗಿದ್ದಾಗ ಎರಡು ಬಾರಿ ನಡೆದಿದ್ದು ನನ್ನ ಸೌಭಾಗ್ಯ ಎನ್ನುತ್ತಾ ಇಂದಿನ ಕಾರ್ಯಕ್ರಮದ ರೂವಾರಿಗಳಾದ ಶ್ರೀಮತಿ ಅರತಿ ನಾಯಕ್ ಮತ್ತು ಶ್ರೀ ಅರವಿಂದ ನಾಯಕ್ ಅವರಿಗೆ ಅಭಿನಂದನೆ ತಿಳಿಸಿದರು. ಈ ಬಾರಿಯೂ ಕಜಕಿಸ್ತಾನದಿಂದ ಕಲಾವಿದರು ಬಂದು ಸಂಘದ ವೇದಿಕೆಯಲ್ಲಿ ಪ್ರದರ್ಸನ ಮಾಡುತ್ತಿರುವುದು, ಸಂಘಕ್ಕೆ 75 ವರ್ಷ ತುಂಬುತ್ತಿರುವ ಸಂದರ್ಭದಲ್ಲಿ ಈ ಕಾರ್ಯಕ್ರಮ ನಡೆಯುತ್ತಿರುವುದು ತುಂಬಾ ಖುಷಿ ತಂದಿದೆ ಎಂದು ಹೇಳಿದರು.

ಹಾಗೆಯೇ, ಅಲ್ಮಾಟಿ–ಕಝಾಕಿಸ್ತಾನ್‌ನಲ್ಲಿರುವ ಶಾಸ್ತ್ರೀಯ ನೃತ್ಯ ಮತ್ತು ಯೋಗ ಕೇಂದ್ರವು ಗೌರವಾನ್ವಿತ ಕಲಾವಿದೆ ಅಕ್ಮರಲ್ ಕೈನಜರೋವ ಅವರ ಮಾರ್ಗದರ್ಶನದಲ್ಲಿ ಅತ್ಯುತ್ತಮವಾಗಿ ಕಾರ್ಯನಿರ್ವಹಿಸುತ್ತಿದೆ, ಅವರ ಎಲ್ಲಾ ಪ್ರದರ್ಶನಗಳಲ್ಲಿ ಯಶಸ್ಸು ಸಿಗಲೆಂದು ಶುಭ ಹಾರೈಸುತ್ತಾ. 75 ವರ್ಷಗಳ ಹಿಂದೆ ಪ್ರಾರಂಭವಾದ ದೆಹಲಿ ಕರ್ನಾಟಕ ಸಂಘದ ಅಮೃತಮಹೋತ್ಸವ ಕಾರ್ಯಕ್ರಮಗಳನ್ನು ಈ ವರ್ಷ ಆಚರಿಸಲಾಗುತ್ತಿದ್ದು ಈ ಎಲ್ಲಾ ಕಾರ್ಯಕ್ರಮಗಳಿಗೆ ಆಗಮಿಸಿ ನಮ್ಮೊಂದಿಗೆ ಸಹಕರಿಸಲು ಕಜಕಿಸ್ಥಾನದ ಗೌರವಾನ್ವಿತ ರಾಯಭಾರಿಯವರಿಗೆ ಹಾಗು ರಾಯಭಾರ ಕಚೇರಿಯ ಅಧಿಕಾರಿಗಳಿಗೆ ವಿನಂತಿಸಿಕೊಂಡರು.

ಅಕ್ಮರಲ್ ಕೈನಜರೋವ ಮತ್ತು ತಂಡದ ಕಲಾವಿದರಿಂದ ಸುಮಾರು ಎರಡುಗಂಟೆಗಳ ಕಾಲ ಪ್ರದರ್ಶನಗೊಂಡ ಭರತ ನಾಟ್ಯ, ಕಥಕ್ ಮುಂತಾದ ಭಾರತೀಯ ಶಾಸ್ತ್ರೀಯ ನೃತ್ಯಗಳು ಹಾಗು ಕಜಕ್ ನೃತ್ಯಗಳು ಸಭಾಂಗಣದಲ್ಲಿ ಅಪಾರ ಸಂಖ್ಯೆಯಲ್ಲಿ ನೆರೆದಿದ್ದ ದೆಹಲಿ ಕನ್ನಡಿಗರು, ಕಜಕಿಸ್ತಾನ ನಾಗರೀಕರು ಹಾಗು ಮತ್ತಿತರ ಮನಸೂರೆಗೊಂಡವು.

ಸಂಘದ ಉಪಾಧ್ಯಕ್ಷರಾದ ಡಾ. ಎಂ.ಎಸ್. ಶಶಿಕುಮಾರ್ ಅವರು ಅತಿಥಿಗಳಿಗೆ ಸಂಘದ ಸ್ಮರಣಿಕೆ ನೀಡಿ ಗೌರವಿಸಿದರು. ಪ್ರಧಾನ ಕಾರ್ಯದರ್ಶಿ ಶ್ರೀ ಆರ್. ರೇಣುಕುಮಾರ್ ಅವರು ಕಾರ್ಯಕ್ರಮವನ್ನು ಬಹಳ ಸುಂದರವಾಗಿ ನಿರೂಪಿಸಿ, ಕೊನೆಯಲ್ಲಿ ಎಲ್ಲರಿಗೂ ವಂದಿಸಿದರು.

**ಅಭಿಮತ ವರದಿ**

# ಜೀವನದಲ್ಲಿ ಅಸಾಧ್ಯವಾದದು ಯಾವುದೂ ಇಲ್ಲ, ಸಾಧಿಸುವ ಛಲವಿರಬೇಕು-ಡಾ. ಸುಧಾ ಚಂದ್ರಶೇಖರ್




ಮನೆ ಕಟ್ಟುವ ಮಹಿಳೆ ದೇಶ ಕಟ್ಟುವ ನಿಟ್ಟನಲ್ಲಿ ಶ್ರಮಿಸಬೇಕಿದೆ. ಜೀವನದಲ್ಲಿ ಅಸಾಧ್ಯವಾದದು ಯಾವುದೂ ಇಲ್ಲ ಸಾಧಿಸುವ ಛಲವಿರಬೇಕು. ಎಲ್ಲವನ್ನು ಸವಾಲಾಗಿ ಸ್ವೀಕರಿಸಿದಾಗ ಮಾತ್ರ ಸಾಧನೆಯ ಶಿಖರ ತಲುಪಬಹುದು ಎಂದು ಭಾರತ ಸರ್ಕಾರದ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವಾಲಯದ ರಾಷ್ಟ್ರೀಯ ಆರೋಗ್ಯ ಪ್ರಾಧಿಕಾರದ ಕಾರ್ಯನಿರ್ವಾಹಕ ನಿರ್ದೇಶಕರಾದ ಡಾ. ಸುಧಾ ಚಂದ್ರಶೇಖರ್ ಅವರು ಹೇಳಿದರು. ದೆಹಲಿ ಕರ್ನಾಟಕ ಸಂಘವು ಮಾರ್ಚ್ 20 ರಂದು ದೆಹಲಿ ಕರ್ನಾಟಕ ಸಂಘದ ಸಭಾಂಗಣದಲ್ಲಿ ಹಮ್ಮಿಕೊಳ್ಳಲಾಗಿದ್ದ ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ ಅಂಗವಾಗಿ "ಮಹಿಳಾ ಸಬಲೀಕರಣ ಹಾಗೂ ಸಮಾಜದ ಅಭಿವೃದ್ಧಿಯಲ್ಲಿ ಮಹಿಳೆಯ ಪಾತ್ರ" ಕುರಿತ ವಿಚಾರ ಸಂಕಿರಣ ಕಾರ್ಯಕ್ರಮದ ಮುಖ್ಯ ಅತಿಥಿಯಾಗಿ ಅವರು ದೀಪ ಬೆಳಗಿಸಿ ಮಾತನಾಡಿದರು.

ಸ್ವಾವಲಂಬಿ ಜೀವನ ನಿರ್ವಹಿಸುವುದರೊಂದಿಗೆ ಆತ್ಮವಿಶ್ವಾಸ ಬೆಳಸಿಕೊಂಡು ಸಮಾಜದ ಮುಖ್ಯವಾಹಿನಿಗೆ ಬರಬೇಕು. ಸ್ವಯಂ ನಿರ್ಣಯ ಕೈಗೊಳ್ಳುವ ಶಕ್ತಿ ಬೆಳಸಿಕೊಂಡು ತನ್ನ ಜೀವನದ ಪ್ರತಿ ಹಂತದಲ್ಲೂ ಸ್ವಂತ ನಿರ್ಧಾರ ತೆಗೆದುಕೊಳ್ಳಬೇಕು. ನಮಗೆ ನಾವೇ ನಿರ್ಬಂಧ ಹಾಕಿಕೊಳ್ಳದೇ ಮುನ್ನಡೆದಾಗ ಮಾತ್ರ ಓರ್ವ ಯಶಸ್ವಿ ಮಹಿಳೆಯಾಗುವುದರಲ್ಲಿ ಯಾವುದೇ ಸಂದೇಹವಿಲ್ಲ. ಉದ್ಯೋಗಶೀಲರಾಗಿ ಸ್ವಶಕ್ತಿಯ ಮೇಲೆ ಮುಖ್ಯವಾಹಿನಿಗೆ ಬರಬೇಕು. ಅದಕ್ಕೆ ಕುಟುಂಬ ಹಾಗೂ ಸಮಾಜದ ಪ್ರೋತ್ಸಾಹ ಅವಶ್ಯ. ಅನೇಕರು ಕುಟುಂಬ ಸಂಸಾರಕ್ಕಾಗಿ ತ್ಯಾಗ ಮಾಡುತ್ತಾರೆ. ಮಹಿಳೆ ವಿಕಾಸವಾದರೆ ಇಡೀ ಕುಟುಂಬದ ವಿಕಾಸವಾಗುತ್ತದೆ, ಆ ಮೂಲಕ ಸಾಮಾಜಿಕ ಬದುಕು ಕೂಡ ಸದೃಢವಾಗಲು ಸಾಧ್ಯ. ದೌರ್ಬಲ್ಯಗಳನ್ನು ಶಕ್ತಿಯಾಗಿಸಿಕೊಂಡು ಹಗಲಿರುಳು ಪ್ರಗತಿಗಾಗಿ ಚಿಂತಿಸಬೇಕು. ಈ ಸಂದರ್ಭದಲ್ಲಿ ಅವರು ತಮ್ಮ ಆಯ್ಕೆಯ ಕ್ಷೇತ್ರದ ಸಾಧನೆಗಾಗಿ ವಿಶ್ವದ ಬೇರೆ-ಬೇರೆ ದೇಶಗಳಿಗೆ ಭೇಟಿ ನೀಡಿರುವುದನ್ನು ಸ್ಮರಿಸಿಕೊಂಡರು. ಸಂಘದಲ್ಲಿ ಕನ್ನಡದ ವಾತಾವರಣವಿದೆ ಕನ್ನಡದ ಕಾರ್ಯಕ್ರಮಗಳನ್ನು ಆಯೋಜಿಸುತ್ತಿರುವುದು ಸ್ವಾಗತಾರ್ಹ. ಇದರಿಂದಾಗಿ ತಾಯ್ನಾಡು-ತಾಯ್ನುಡಿಯಿಂದ ದೂರ ಇದ್ದೇವೆಂದು ಅನಿಸದಿರುವುದು ತುಂಬಾ ಸಂತೋಷದ ವಿಚಾರ. ಈ ವೇದಿಕೆಯಲ್ಲಿ ಮಹಿಳಾ ದಿನದ ಆಚರಣೆ ಅಂಗವಾಗಿ ವಿಚಾರ ಸಂಕಿರಣದಲ್ಲಿ ಭಾಗವಹಿಸಿದ ಮಹಿಳೆಯರು ಬಹು ಅರ್ಥಪೂರ್ಣ ವಿಷಯದ ಕುರಿತು ಮಾತನಾಡಿದರು ಎಂದು ಹೇಳಿದರು.

ದೆಹಲಿ ಕರ್ನಾಟಕ ಸಂಘದ ಅಧ್ಯಕ್ಷ ಸಿ.ಎಂ. ನಾಗರಾಜ ಅವರು ಮಾತನಾಡಿ, ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆಯನ್ನು ಆಚರಿಸುತ್ತಿರುವುದು ಸಂತೋಷ. ಮೊದಲ ಮಹಿಳಾ ವೈದ್ಯೆ ಆನಂದಿಬೇನಿ, ಸಾಮಾಜಿಕ ಮತ್ತು ಮಕ್ಕಳ ಹಕ್ಕುಗಳ ಹೋರಾಟಗಾರ್ತಿ ಮೊದಲ ಶಿಕ್ಷಕಿ ಸಾವಿತ್ರಿಬಾಯಿ ಫುಲೆ, ಬ್ರಿಟೀಷರ ವಿರುದ್ಧ ಹೋರಾಡಿದ ವೀರರಾಣಿ ಕಿತ್ತೂರ ಚೆನ್ನಮ್ಮ, ಪೋರ್ಚಗೀಸರ ವಿರುದ್ಧ ಹೋರಾಡಿದ ಧೀರ ಮಹಿಳೆ ರಾಣಿ ಅಬ್ಬಕ್ಕ, ಝಾನ್ಸಿ ರಾಣಿ ಲಕ್ಷ್ಮಿಬಾಯಿ, ಒನಕೆ ಓಬವ್ವ, ಬೆಳವಾಡಿ ಮಲ್ಲಮ್ಮ ಹೀಗೆ ಹಲವಾರು ಮಹಿಳೆಯರು ಈ ದೇಶಕ್ಕೆ ಅಪಾರ ಕೊಡುಗೆ ನೀಡಿದ್ದಾರೆ ಎಂದು ಅವರ ಸಾಧನೆಯ ಗುಣಗಾನ ಮಾಡಿದರು. ದೆಹಲಿ ಕರ್ನಾಟಕ ಸಂಘ ಹಾಗೂ ದೆಹಲಿ ಕನ್ನಡ ಶಾಲೆ ಕಟ್ಟುವಲ್ಲಿ ಡಾ. ಸರೋಜಿನಿ ಮಹಿಷಿ ಅವರ ಶ್ರಮ ಅಗಾಧವಾದದ್ದು ಎಂದು ಈ ಸಂದರ್ಭದಲ್ಲಿ ಹೇಳಿದರು.

ದೆಹಲಿ ಕರ್ನಾಟಕ ಸಂಘದ ಪ್ರಧಾನ ಕಾರ್ಯದರ್ಶಿ ಆರ್. ರೇಣುಕುಮಾರ್ ಅವರು ಮಾತನಾಡಿ, ಈ ಕಾರ್ಯಕ್ರಮ ಹಾಡು ನೃತ್ಯಗಳಿಗೆ ಸೀಮಿತವಾಗದೇ, ದೆಹಲಿ ಕನ್ನಡಿಗ ಮಹಿಳೆಯರು ತಮ್ಮ ಅನಿಸಿಕೆ ಹಂಚಿಕೊಂಡಿರುವುದು ಒಳ್ಳೆಯ ಬೆಳವಣಿಗೆ. ಸಂಘವು ಈ ಅವಕಾಶ ಕಲ್ಪಿಸಿರುವದು ಹೆಗ್ಗಳಿಕೆ. ಮುಂಬರುವ ಕಾರ್ಯಕ್ರಮಗಳಲ್ಲಿ ತಮ್ಮ ಅಭಿವ್ಯಕ್ತಪಡಿಸಲು ವೇದಿಕೆ ಕಲ್ಪಿಸಿಕೊಡಲಾಗುವುದು ಎಂದರು. ಅಂತೆಯೇ 'ವಿಚಾರ ಸಂಕಿರಣ'ದಲ್ಲಿ ಹಲವು ವಿದ್ವತ್ಪೂರ್ಣ ನುಡಿಗೆ ಈ ಕಾರ್ಯಕ್ರಮ ಸಾಕ್ಷಿಯಾಯಿತು. ನಮ್ಮ ಸಂಸ್ಕೃತಿಯಲ್ಲಿ ಮಹಿಳೆಯರಿಗೆ ಅಪಾರ ಗೌರವವಿದೆ. ಸ್ತ್ರೀಯನ್ನು ಪ್ರಕೃತಿ ಮಾತೆಗೆ ಹೋಲಿಸಿ, ಕನ್ನಡದ ಮಹಾನ್ ಕವಿಗಳು ತಮ್ಮನ್ನು ತಾವು ಗೌರವಿಸಿಕೊಂಡಿದ್ದಾರೆ ಎಂದರು. ಇಲ್ಲಿ ಎಲ್ಲವನ್ನು ಒಟ್ಟುಗೂಡಿಸಿದವಳು ಮಹಿಳೆಯಾಗಿದ್ದಾಳೆ. ಇದೇ ಸಂದರ್ಭ 'ಮಹಿಳಾ ದಿನಾಚರಣೆ ಪ್ರಕೃತಿ ಆಚರಣೆ' ಎಂಬ ಸ್ವರಚಿತ ಕವನ ವಾಚಿಸಿ, ಕೊನೆಗೆ ಎಲ್ಲರಿಗೂ ವಂದನಾರ್ಪಣೆ ಸಲ್ಲಿಸಿದರು. ಸಂಘದ ಜಂಟಿ ಕಾರ್ಯದರ್ಶಿಗಳಾದ ಶ್ರೀಮತಿ ಸುಮಿತಾ ಮುರಗೋಡ ಅವರು ಪ್ರಾಸ್ತಾವಿಕ ನುಡಿಗಳನ್ನಾಡಿದರು.

ಈ ಸಂದರ್ಭದಲ್ಲಿ 2020ರ ಅವಧಿಯ 'ವಿಶಿಷ್ಟ ಕನ್ನಡಿಗ' ಪ್ರಶಸ್ತಿಯನ್ನು ಶ್ರೀಮತಿ ರಾಧಾ ಕೌಜಲಗಿ ಅವರಿಗೆ ಪ್ರದಾನ ಮಾಡಲಾಯಿತು. ದೆಹಲಿ ಕನ್ನಡಿಗ ಮಹಿಳೆಯರು ಕಾರ್ಯಕ್ರಮದ ಆರಂಭದಲ್ಲಿ ಸ್ವಾಗತ ಗೀತೆಗೆ ಧ್ವನಿಯಾದರು.

ವಿಚಾರ ಸಂಕಿರಣದಲ್ಲಿ ದೆಹಲಿ ಕನ್ನಡಿಗರಾದ ಶ್ರೀಮತಿ ನಂದಿನಿ ಮಲ್ಯ, ಶ್ರೀಮತಿ ದೀನಾ ಜಾಯ್ಸ್, ಶ್ರೀಮತಿ ಆರಾಧನ ಕೆ.ಸಿ, ಶ್ರೀಮತಿ ವೀಣಾ ಜಗದೀಶ, ಶ್ರೀಮತಿ ಪ್ರತಿಭಾ ಗೌಡ, ಶ್ರೀಮತಿ ಉಮಾ ಶ್ರೀನಿವಾಸ್, ಶ್ರೀಮತಿ ವಿನುತಾ ದಯಾನಂದ, ಶ್ರೀಮತಿ ರತ್ನಾ ಗೌಡ, ಕು. ರಮ್ಯ ಆರ್.ಎಸ್. ಮತ್ತಿತರರು ಭಾಗವಹಿಸಿ 'ಮಹಿಳಾ ಸಬಲೀಕರಣ ಹಾಗೂ ಸಮಾಜದ ಅಭಿವೃದ್ಧಿಯಲ್ಲಿ ಮಹಿಳೆಯ ಪಾತ್ರ' ವಿಷಯದ ಮೇಲೆ ಮಾತನಾಡಿದರು.

ಕಾರ್ಯಕ್ರಮವನ್ನು ಸಂಘದ ಉಪಾಧ್ಯಕ್ಷೆ ಶ್ರೀಮತಿ ಪೂಜಾ ಪಿ.ರಾವ್ ಅವರು ನಿರ್ವಹಿಸಿದರು. ಶ್ರೀಮತಿ ಅಶ್ವಿನಿ ಬಿ.ಎಸ್., ಶ್ರೀಮತಿ ಸುಮಿತಾ ಮುರಗೋಡ ಹಾಗೂ ಶ್ರೀಮತಿ ಮಾಲಿನಿ ಪ್ರಹ್ಲಾದ್ ಅವರು ವೇದಿಕೆಯಲ್ಲಿ ಉಪಸ್ಥಿತರಿದ್ದರು.

**ಗಮನ ಸೆಳೆದ ಸುಗಮ ಸಂಗೀತ ಹಾಗೂ ಸ್ಥಳೀಯ ಕಲಾವಿದರ ಸಾಂಸ್ಕೃತಿಕ ಕಾರ್ಯಕ್ರಮ:** ಬೆಂಗಳೂರು ಆಕಾಶವಾಣಿ ಮತ್ತು ದೂರದರ್ಶನ ಕೇಂದ್ರದ 'ಬಿಹೈ' ಶ್ರೇಣಿ ಅನುಮೋದಿತ ಗಾಯಕ ಪಂಚಮ್ ಹಳಿಬಂಡಿ ಅವರೊಂದಿಗೆ ಸುಗಮ ಸಂಗೀತದ ಯುವ ಗಾಯಕಿ ಮೇಘನಾ ಭಟ್ ಅವರು ಅನೇಕ ಹಾಡುಗಳನ್ನು ಹಾಡಿ ಪ್ರೇಕ್ಷಕರನ್ನು ಮಂತ್ರಮುಗ್ಧಗೊಳಿಸಿದರು.

ಸ್ಥಳೀಯ ಮಹಿಳೆಯರು (ದೆಹಲಿ ಪೊಲೀಸ್ ಕನ್ನಡಿಗರ ಕಲ್ಯಾಣ ಸಮಿತಿ, ಸ್ನೇಹಾ ದೆಹಲಿ ಕನ್ನಡ ಲೇಡೀಸ್ ಅಸೋಸಿಯೇಷನ್, ಜನಕಪುರಿ ಮಹಿಳಾ ಮಂಡಳಿ, ಶುಭಾ ದೇವಿಪ್ರಸಾದ್ ಮತ್ತು ತಂಡ, ನೇತ್ರಾಕುಮಾರ್ ಮತ್ತು ತಂಡ) ಕಾರ್ಯಕ್ರಮ ನಡೆಸಿಕೊಟ್ಟರು.

**ಅಭಿಮತ ವರದಿ**

## ವಿಚಾರ ಸಂಕಿರಣದಲ್ಲಿ ಭಾಗವಹಿಸಿದ ಮಹಿಳೆಯರು











## ಪಂಚಮ್ ಹಳಬಂಡಿ ಮತ್ತು ಮೇಘನಾ ಭಟ್ ಅವರಿಂದ ಸುಗಮ ಸಂಗೀತ











# ‘ವಿಶಿಷ್ಟ ಕನ್ನಡಿಗ’ ಪ್ರಶಸ್ತಿ ಪುರಸ್ಕೃತೆ ಶ್ರೀಮತಿ ರಾಧಾ ಕೌಜಲಗಿ ಅವರ ಸಂದರ್ಶನ

**ದೆಹಲಿಯ ‘ಕನ್ನಡ ಭಾರತಿ’ ರಂಗ ಸಂಸ್ಥೆಯೊಂದಿಗೆ ನಿಕಟ ಒಡನಾಟ ಹೊಂದಿದ್ದು ಅನೇಕ ರಂಗ ನಾಟಕಗಳಲ್ಲಿ ನಟಿಸಿ ಹೊರನಾಡ ಕನ್ನಡಿಗರ ಸಾಂಸ್ಕೃತಿಕ ಪರಿಸರದಲ್ಲಿ ತಮ್ಮದೇ ಆದ ಛಾಪು ಮೂಡಿಸಿರುವ ಶ್ರೀಮತಿ ರಾಧಾ ಕೌಜಲಗಿ ಅವರು ದೆಹಲಿ ಕರ್ನಾಟಕ ಸಂಘದ 2020 ನೇ ಸಾಲಿನ ವಿಶಿಷ್ಟ ಕನ್ನಡಿಗ ಪ್ರಶಸ್ತಿ ಪುರಸ್ಕಾರವನ್ನು ಸ್ವೀಕರಿಸಿದ ಸಂದರ್ಭದಲ್ಲಿ ಅವರ ಜೊತೆ ಅಭಿಮತ ಸಂಪಾದಕ ಮಂಡಳಿ ನಡೆಸಿದ ಸಂದರ್ಶನದ ಆಯ್ದ ಭಾಗ ನಮ್ಮ ಓದುಗರಿಗಾಗಿ....**




**ದೆಹಲಿ ಕರ್ನಾಟಕ ಸಂಘದಿಂದ ಕೊಡಮಾಡುವ 2020ನೇ ಸಾಲಿನ ‘ವಿಶಿಷ್ಟ ಕನ್ನಡಿಗ’ ಪ್ರಶಸ್ತಿಯನ್ನು ಶ್ರೀಮತಿ ರಾಧಾ ಕೌಜಲಗಿ ಅವರಿಗೆ ಮಹಿಳಾ ದಿನಾಚರಣೆ ಸಂದರ್ಭದಲ್ಲಿ ಪ್ರದಾನ ಮಾಡಲಾಯಿತು**

**ಅಭಿಮತ :** ಮೇಡಂ ನಮಸ್ಕಾರ, ವಿಶಿಷ್ಟ ಕನ್ನಡಿಗ ಪ್ರಶಸ್ತಿ ಪುರಸ್ಕೃತರಾದ ನೀವು ಈ ಪ್ರಶಸ್ತಿ ಬಗ್ಗೆ ನಿಮ್ಮ ಪ್ರತಿಕ್ರಿಯೆಯನ್ನು ತಿಳಿಸುವಿರಾ ?

**ರಾಧಾ ಕೌಜಲಗಿ :** ದೆಹಲಿ ಕರ್ನಾಟಕ ಸಂಘವು ಪ್ರತಿ ವರ್ಷ ನವೆಂಬರ್ ತಿಂಗಳಿನಲ್ಲಿ ಕನ್ನಡ ರಾಜ್ಯೋತ್ಸವವನ್ನು ಆಚರಿಸುತ್ತಾ ಬಂದಿದೆ. ಈ ಕಾರ್ಯಕ್ರಮದಲ್ಲಿ ವಿವಿಧ ಕ್ಷೇತ್ರಗಳಲ್ಲಿ ಹೊರನಾಡ ಕನ್ನಡಿಗರ ವಿಶೇಷ ಕೊಡುಗೆಗಳನ್ನು ಗುರುತಿಸಿ ಅವರಿಗೆ ‘ವಿಶಿಷ್ಟ ಕನ್ನಡಿಗ’ ಪ್ರಶಸ್ತಿಯನ್ನು ಸಂಘವು ನೀಡುತ್ತಾ ಬಂದಿದೆ.

ಕನ್ನಡ ರಂಗಭೂಮಿ ಮತ್ತು ಸಂಘಟನಾ ಕ್ಷೇತ್ರದಲ್ಲಿ ಮಾಡಿದ ನನ್ನ ಕೆಲಸವನ್ನು ಗುರುತಿಸಿ, ನವೆಂಬರ್ 2020ರ ಸಾಲಿನ ‘ವಿಶಿಷ್ಟ ಕನ್ನಡಿಗ’ ಪ್ರಶಸ್ತಿಯನ್ನು ಸಂಘವು ನೀಡಿ ನನ್ನನ್ನು ಗೌರವಿಸಿದೆ. ಈ ಪ್ರಶಸ್ತಿಯನ್ನು ನಾನು ಮನಃಪೂರ್ವಕವಾಗಿ ಗೌರವಿಸುತ್ತೇನೆ ಮತ್ತು ಆ ಅವಧಿಯಲ್ಲಿದ್ದ ಎಲ್ಲಾ ಪದಾಧಿಕಾರಿಗಳಿಗೆ ಹೃದಯ ಪೂರ್ವಕವಾಗಿ ಅಭಾರಿಯಾಗಿದ್ದೇನೆ.

**ಅಭಿಮತ :** ಮೇಡಂ ನಿಮ್ಮ ಬಾಲ್ಯ ಮತ್ತು ಪ್ರಾಥಮಿಕ ವಿದ್ಯಾಭ್ಯಾಸದ ಬಗ್ಗೆ ತಿಳಿಸಿ?

**ಕೌಜಲಗಿ :** ನಾನು ಹುಟ್ಟಿದ್ದು ವಿಜಯಪುರವಾದರೂ ನನ್ನ ಪ್ರಾಥಮಿಕ ಹಾಗೂ ಹೈಸ್ಕೂಲ್ ವಿದ್ಯಾಭ್ಯಾಸವು ಧಾರವಾಡದಲ್ಲಿ ಆಯಿತು. ನಮ್ಮ ತಂದೆಯವರು ಸರ್ಕಾರಿ ಕೆಲಸದಲ್ಲಿ ಇದ್ದುದರಿಂದ ಪ್ರತಿ ಮೂರು ವರ್ಷಕ್ಕೆ ಟ್ರಾನ್ಸ್‌ಫರ್ ಆಗುತ್ತಿತ್ತು. ಹೀಗಾಗಿ ಮುಂದಿನ ವಿದ್ಯಾಭ್ಯಾಸ ಮಂಗಳೂರು, ಚಿತ್ರದುರ್ಗದಲ್ಲಿ ಮುಂದುವರಿದು ಕಾಲೇಜು ವಿದ್ಯಾಭ್ಯಾಸ ಗದಗದಲ್ಲಿ ಮುಗಿಯಿತು.

**ಅಭಿಮತ :** ನಿಮ್ಮ ಕುಟುಂಬ ದೆಹಲಿಯಲ್ಲಿ ಎಷ್ಟು ವರ್ಷದಿಂದ ವಾಸವಿದೆ. ತಾಯ್ನಾಡಿನಿಂದ ಇಲ್ಲಿಗೆ ಬಂದಾಗ ನಿಮ್ಮ ಆರಂಭದ ದಿನಗಳು ಹೇಗಿದ್ದವು?

**ಕೌಜಲಗಿ :** ನನ್ನ ಕಾಲೇಜು ಶಿಕ್ಷಣ ಮುಗಿದ ಮರು ವರ್ಷವೇ ನನ್ನ ಮದುವೆ ಶ್ರೀ ಅರವಿಂದ ಕೌಜಲಗಿ ಅವರೊಡನೆ ನೆರವೇರಿತು. ಕೌಜಲಗಿ ಅವರು ವೃತ್ತಿಯಲ್ಲಿ Metallurgical Engineer ಆಗಿದ್ದರು. ಆಗ ಅವರು ಉತ್ತರ ಭಾರತದಲ್ಲಿ ಸೇವೆ ಸಲ್ಲಿಸುತ್ತಿದ್ದರು. ಮದುವೆ ನಂತರ ನಾನು ಕಾನ್ಪುರಕ್ಕೆ ಬರಬೇಕಾಯಿತು. ಆಗಿನ ನನ್ನ ಪರಿಸ್ಥಿತಿ ‘ಹಳ್ಳಿಯಿಂದ ದಿಲ್ಲಿಗೆ’ ಎಂಬಂತ್ತಿತ್ತು.

ಕರ್ನಾಟಕದಿಂದ ಮೊದಲ ಬಾರಿ ಹೊರನಾಡಿಗೆ ಬಂದಿದ್ದೆ. ಎಲ್ಲವೂ ಹೊಸತು. ಜನರ ನಡೆ, ನುಡಿ, ಜೀವನ ಶೈಲಿ, ಹವಾಮಾನದ ವಿಷಮ ಪರಿಸ್ಥಿತಿಗಳು, ಎಲ್ಲವನ್ನೂ ಎದುರಿಸಬೇಕಾಯಿತು. ಅಲ್ಲಿಯ ಆಡು ಭಾಷೆ ಹಿಂದಿ ಇದ್ದುದರಿಂದ ಅಷ್ಟೇನೂ ಕಷ್ಟವಾಗಲಿಲ್ಲ. ನನಗೆ ಮಾರ್ಗದರ್ಶನ ಮಾಡುವ ಯಾವ ಹಿತೈಷಿಗಳೂ ಇರಲಿಲ್ಲ. ನಾವು ಪ್ರಯತ್ನ ಪಟ್ಟು ಕಾನ್ಪುರದಲ್ಲಿ ಕನ್ನಡ ಜನರನ್ನು ಪರಿಚಯ ಮಾಡಿಕೊಂಡು ಕನ್ನಡ ಸಂಘಕ್ಕೆ ಸೇರಿದೆವು. ಕಾನ್ಪುರದಿಂದ ಲಕ್ನೋ, ನಂತರ ಅಹಮದಾಬಾದ್, ಇಂದೋರ್, ಚಂಡೀಗಢ ಮತ್ತು ಗ್ವಾಲಿಯರ್ ನಗರಗಳಲ್ಲಿ ನೆಲೆಸಿ ನಂತರ 1983ರಲ್ಲಿ ದೆಹಲಿಗೆ ಬಂದೆವು. 1983 ರಿಂದ ನಾವು ದೆಹಲಿಯಲ್ಲಿಯೇ ನೆಲೆಸಿದ್ದೇವೆ. ಮಕ್ಕಳಿಬ್ಬರ ವಿದ್ಯಾಭ್ಯಾಸ ದೆಹಲಿಯಲ್ಲಿ ಆಯಿತು. ನನ್ನ ಪತಿಯ ಕಚೇರಿ ಕೆಲಸದ ನಿಮಿತ್ತ ಪ್ರವಾಸ ಮಾಡಬೇಕಾಗುತ್ತಿದ್ದುದರಿಂದಾಗಿ ಮಕ್ಕಳ ಶಿಕ್ಷಣ ಮತ್ತು ಸಾಂಸ್ಕೃತಿಕ ಚಟುವಟಿಕೆಗಳ ಎಲ್ಲಾ ಜವಾಬ್ದಾರಿ ನನ್ನ ಮೇಲಿತ್ತು.


**ಅಭಿಮತ :** ನಿಮ್ಮ ಮತ್ತು ಹೊರನಾಡ ಕನ್ನಡ ಸಂಘ ಸಂಸ್ಥೆಗಳ ಒಡನಾಟ ಹೇಗೆ ಮತ್ತು ಎಂದಿನಿಂದ ಪ್ರಾರಂಭವಾಯಿತು?

**ಕೌಜಲಗಿ :** ನನಗೆ ಮತ್ತು ನನ್ನ ಪತಿ ಅರವಿಂದ ಕೌಜಲಗಿಯವರಿಗೆ ನಾಟಕಗಳಲ್ಲಿ ಬಹಳ ಆಸಕ್ತಿ ಇತ್ತು. ದೆಹಲಿಯಲ್ಲಿ ಕನ್ನಡ ನಾಟಕಗಳನ್ನು ನೋಡಲು ಹೋಗುತ್ತಿದ್ದೆವು. ಆಗ ನಮಗೆ ‘ಕನ್ನಡ ಭಾರತಿ’ ರಂಗ ಸಂಸ್ಥೆಯ ಸದಸ್ಯರಾದ ಶ್ರೀಯುತ ಪ್ರಭಾಕರ ರಾವ್, ಶ್ರೀಯುತ ನಾರಾಯಣ ರಾವ್ ಮತ್ತು ಶ್ರೀಯುತ ದಿ. ಎಚ್.ಎಸ್. ಕುಲಕರ್ಣಿ ಅವರ ಪರಿಚಯವಾಯಿತು. ಅವರು ನಮ್ಮನ್ನು ದೆಹಲಿ ಕರ್ನಾಟಕ ಸಂಘದೊಡನೆ ಪರಿಚಯ ಮಾಡಿಸಿದರು. ಅಂದಿನಿಂದ ಇಂದಿನವರೆಗೂ ದೆಹಲಿ ಕರ್ನಾಟಕ ಸಂಘದೊಡನೆ ನಮ್ಮ ಒಡನಾಟ ಅವಿರತವಾಗಿ ನಡೆದುಕೊಂಡು ಬಂದಿದೆ ಎಂದು ಹೇಳಲು ನನಗೆ ಅಭಿಮಾನ ಹಾಗೂ ಹೆಮ್ಮೆ ಇದೆ.

ನಾವು ದೆಹಲಿಯಲ್ಲಿ ರಾಜೇಂದ್ರನಗರದಲ್ಲಿ ನೆಲೆಸಿದ್ದೇವೆ. ‘ರಾಜೇಂದ್ರ ನಗರ ಕನ್ನಡ ಬಳಗ’ದಲ್ಲಿ ನಮ್ಮನ್ನು ತೊಡಗಿಸಿಕೊಂಡು ಎಲ್ಲಾ ಕಾರ್ಯಕ್ರಮಗಳಲ್ಲಿ ಭಾಗವಹಿಸುತ್ತಿದ್ದೆವು. ಈ ಕನ್ನಡ ಬಳಗದ ಕಾರ್ಯಕಾರಿ ಸಮಿತಿಯಲ್ಲಿ ಉಪಾಧ್ಯಕ್ಷೆಯಾಗಿ ಹಾಗೂ ಕಾರ್ಯದರ್ಶಿಯಾಗಿ ಕೆಲಸ ಮಾಡಿದ್ದೇನೆ.

ದೆಹಲಿ ಸ್ನೇಹಾ ಕನ್ನಡ ಲೇಡೀಸ್ ಅಸೋಸಿಯೇಶನ್ ಇದು ಒಂದು ಪ್ರತಿಷ್ಠಿತ ಮಹಿಳಾ ಸಂಘಟನೆ. ಸುಮಾರು 40 ವರ್ಷಗಳಿಂದ ನಡೆದು ಬಂದಿದೆ. ಇದರಲ್ಲಿ ನಾನು ಸದಸ್ಯೆಯಾಗಿ ಸೇರಿ ನಂತರದ ದಿನಗಳಲ್ಲಿ, ಜಂಟಿ ಕಾರ್ಯದರ್ಶಿಯಾಗಿ, ಖಜಾಂಚಿಯಾಗಿ, ಆರು ಬಾರಿ ಅಧ್ಯಕ್ಷೆಯಾಗಿ ಕಾರ್ಯ ನಿರ್ವಹಿಸಿದ್ದೇನೆ. ಆ ದಿನಗಳಲ್ಲಿ ದೆಹಲಿಯಲ್ಲಿರುವ ಎಲ್ಲಾ ಸಂಘ ಸಂಸ್ಥೆಗಳೊಡನೆ ನಮ್ಮ ಸೌಹಾರ್ದಯುತ ಸಂಬಂಧವಿತ್ತು, ಈಗಲೂ ಅದೇ ರೀತಿ ನಡೆದು ಬಂದಿದೆ.





1976 ರಿಂದ ನಾವು ಉತ್ತರ ಭಾರತದಲ್ಲಿ ನೆಲೆಸಿದ್ದೇವೆ. ಆದರೂ ನಾವು ಮನೆಯಲ್ಲಿ ಕಟ್ಟುನಿಟ್ಟಾಗಿ ಕನ್ನಡವನ್ನು ಮಾತನಾಡುತ್ತೇವೆ. ಮಕ್ಕಳಿಬ್ಬರಿಗೂ ಕನ್ನಡ ಬರುತ್ತದೆ. ಅದರಲ್ಲೂ ಅವರು ನಮ್ಮ ಧಾರವಾಡ ಭಾಷೆಯಲ್ಲಿಯೇ ಮಾತನಾಡುತ್ತಾರೆ. ಅವರಿಬ್ಬರೂ ವಿದೇಶದಲ್ಲಿ ನೆಲೆಸಿದ್ದರೂ ನಾವೆಲ್ಲ ಮಾತನಾಡುವುದು ಕನ್ನಡದಲ್ಲಿ ಮಾತ್ರ. ಇದು ನನಗೆ ಹೆಮ್ಮೆಯ ಸಂಗತಿ. ನಾನು ವಿದೇಶಕ್ಕೆ ಹೋದಾಗಲೆಲ್ಲಾ ಮೊಮ್ಮಕ್ಕಳಿಗೆ ಕನ್ನಡ ಕಲಿಸುತ್ತೇನೆ.

**ಅಭಿಮತ :** ನಿಮ್ಮ ಹವ್ಯಾಸಗಳನ್ನು ಕುರಿತು ಏನನ್ನಾದರೂ ಹೇಳಲಿಕ್ಕೆ ಬಯಸುತ್ತೀರಾ ಮೇಡಂ?

**ಕೌಜಲಗಿ :** ಶಾಲಾ ದಿನಗಳಿಂದಲೇ ನನಗೆ ಸಾಂಸ್ಕೃತಿಕ ಚಟುವಟಿಕೆಗಳಲ್ಲಿ ಬಹಳ ಆಸಕ್ತಿಯಿತ್ತು. ನಾಟಕ, ನಾಡು ಹಾಗೂ ನೃತ್ಯರೂಪಕಗಳಲ್ಲಿ ಭಾಗವಹಿಸುತ್ತಿದ್ದೆ. ದೆಹಲಿ ಕರ್ನಾಟಕ ಸಂಘದಲ್ಲಿ ನಮ್ಮ ಪ್ರಥಮ ನಾಟಕ ದಿ. ಶ್ರೀ ಎಚ್. ಎಸ್. ಕುಲಕರ್ಣಿ ಅವರ ನಿರ್ದೇಶನದ 'ಹುಟ್ಟಿದ ಜಾತಿ ಹುಗಿದರೂ ಹೋಗದು'–ಇದರಲ್ಲಿ ನಾವು ನಾಲ್ಕೂ ಜನ ಪಾತ್ರ ವಹಿಸಿದ್ದೆವು.

ದೆಹಲಿ ಕರ್ನಾಟಕ ಸಂಘವೂ ಪ್ರತಿ ವರ್ಷ 'ನಾಟಕೋತ್ಸವ' ಹಾಗೂ ನಾಟಕಗಳ ಪ್ರತಿಯೋಗಿತೆಯನ್ನು ಬಹಳ ಸುಂದರವಾಗಿ ನಡೆಸುತ್ತಿತ್ತು. ನಾವು ರಂಗಭೂಮಿ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡು ಎಣಿಸಲಾರದಷ್ಟು ಕನ್ನಡ ನಾಟಕಗಳನ್ನು ಮಾಡಿದೆವು. ರಂಗಭೂಮಿ ಹವ್ಯಾಸದಲ್ಲಿ ಒಂದು ಮಹತ್ತರವಾದ ಮೈಲಿಗಲ್ಲು ಎಂದರೆ 'ಕನ್ನಡ ಭಾರತಿ' ಸಂಸ್ಥೆಯ ರಜತ ಮಹೋತ್ಸವದಲ್ಲಿ ನಾವು ಭಾಗವಹಿಸುವ ಅವಕಾಶ ಸಿಕ್ಕಿದ್ದು.. ಶ್ರೀಯುತ ಎಂ.ಎಸ್. ಸತ್ಯು ಅವರ ನಿರ್ದೇಶನದ ಮುನ್ಷಿ ಪ್ರೇಮಚಂದ್ರ ವಿರಚಿತ ನಾಟಕ 'ಮೋಟೆರಾಮನ ಸತ್ಯಾಗ್ರಹ' ಇದರಲ್ಲಿ ನಾನು ಮತ್ತು ನನ್ನ ಪತಿ ಪಾತ್ರ ವಹಿಸಿದ್ದೆವು. ಇದು ನಮಗೆ ಸುವರ್ಣ ಅವಕಾಶವಾಗಿತ್ತು. ಈ ನಾಟಕದಲ್ಲಿ ನಾವಿಬ್ಬರೂ ಮುಖ್ಯ ಪಾತ್ರದಲ್ಲಿ ಅಭಿನಯಿಸಿದ್ದೆವು. ಅದೊಂದು ಮರೆಯಲಾರದ ಅನುಭವ ನಮಗೆ.

ನನ್ನ ಇನ್ನೊಂದು ಮುಖ್ಯ ಹವ್ಯಾಸವೆಂದರೆ ಆಕಾಶವಾಣಿಯ ಕನ್ನಡ ರೇಡಿಯೋ ನಾಟಕಗಳು. 1990 ರಿಂದ ನಾನು ಸಮಾಜದಲ್ಲಿ ಅರಿವು ಮೂಡಿಸುವ ಕನ್ನಡ ರೇಡಿಯೋ ನಾಟಕಗಳನ್ನು ಮಾಡಿರುವೆ ಎಂದು ನನಗೆ ಹೆಮ್ಮೆ ಇದೆ. ಸ್ನೇಹಾ ಅಸೋಸಿಯೇಶನ್ನಿನ ಎಲ್ಲಾ ಸಾಂಸ್ಕೃತಿಕ ಕಾರ್ಯಕ್ರಮಗಳು ಅದು ನಾಟಕ ಆಗಿರಬಹುದು, ಸ್ಕಿಟ್, ಸಮೂಹ ನೃತ್ಯ, ಸಮೂಹ ಗಾನ ಹೀಗೆ ಎಲ್ಲಾ ಚಟುವಟಿಕೆಗಳಲ್ಲೂ ತೊಡಗಿಸಿಕೊಂಡಿರುವೆ.

**ಅಭಿಮತ :** ನಿಮ್ಮ ಮತ್ತು ನಿಮ್ಮ ಹುಟ್ಟೂರಿನ ಜೊತೆಗಿನ ಈಗಿನ ನಂಟು ಕುರಿತು ಹೇಳುವಿರಾ?

**ಕೌಜಲಗಿ :** ನನ್ನ ಜೀವನದ ಮುಖ್ಯ ಭಾಗವಾದ 40 ವರ್ಷಗಳನ್ನು ನಾನು ನನ್ನ ಜನ್ಮಭೂಮಿಯಿಂದ ದೂರ ಉತ್ತರ ಭಾರತದಲ್ಲಿ ಕಳೆದಿರುವೆ. ಆದರೆ ಇಂದಿಗೂ ಜನ್ಮಭೂಮಿಯ ಪ್ರೀತಿಯ ಸೆಳೆತ ಕಡಿಮೆಯಾಗಿಲ್ಲ. ನಮ್ಮೂರಿಗೆ ಹೋದಾಗ ನಾನು ಕಲಿತ ಶಾಲೆ ಮತ್ತು ಕಾಲೇಜುಗಳಿಗೆ ಭೇಟಿ ಕೊಡುತ್ತೇನೆ. ಅದು ಎಂದೆಂದಿಗೂ ಮರೆಯಲಾಗದ ಅನುಭವ ಹಾಗೂ ಆ ದಿನಗಳ ಮಧುರ ಬಾಂಧವ್ಯವನ್ನು ನೆನಪಿಸಿಕೊಳ್ಳುತ್ತೇನೆ.

**ಅಭಿಮತ :** ಧನ್ಯವಾದಗಳು ಮೇಡಂ. ನಿಮಗೆ ಸಮಸ್ತ ದೆಹಲಿ ಕನ್ನಡಿಗರ ಪರವಾಗಿ ಮತ್ತೊಮ್ಮೆ ಹಾರ್ದಿಕ ಅಭಿನಂದನೆಗಳು.□

# ಸ್ನೇಹ ಕೂಟದ ಮಹಿಳಾ ದಿನಾಚರಣೆಯ ಸಂಭ್ರಮದ ಆಚರಣೆ

ನಲವತ್ತೊಂದು ವರ್ಷಗಳಿಂದ ನಡೆದು ಬರುತ್ತಿರುವ ಸ್ನೇಹ ದೆಹಲಿ ಕನ್ನಡ ಲೇಡೀಸ್ ಅಸೋಸಿಯೇಷನ್ ಪ್ರತೀ ವರ್ಷದಂತೆ ಈ ವರ್ಷವೂ ಮಾರ್ಚ್ 16 ರಂದು ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆಯನ್ನು ತಮ್ಮದೇ ಆದ ವೈಶಿಷ್ಟ್ಯಗಳೊಂದಿಗೆ ಆಚರಿಸಿತು. ಕಾರ್ಯದರ್ಶಿಯಾದ ಲಕ್ಷ್ಮೀ ಕಿಣಿ ಹಾಗೂ ಸದಸ್ಯರಾದ ರೇಖಾ ಅವರ ಪ್ರಾರ್ಥನೆ ಗೀತೆಯ ಮೂಲಕ ಕಾರ್ಯಕ್ರಮವನ್ನು ಆರಂಭಿಸಲಾಯಿತು. ಈ ಬಾರಿ ಕರ್ನಾಟಕ ಸಂಘದಲ್ಲಿ ಎಲ್ಲಾ ಸ್ನೇಹ ಬಳಗದವರು ಆಹ್ವಾನಿತ ಜನಕಪುರಿ ಮಹಿಳಾ ಮಂಡಳಿ ಸದಸ್ಯರು, ಕರ್ನಾಟಕ ಸಂಘದ ಕಾರ್ಯಕಾರಿ ಸಮಿತಿಯ ಸದಸ್ಯರು ಹಾಗೂ ಸ್ನೇಹಿತೆಯರು ಆಗಮಿಸಿ ಸೇರಿ ಆಚರಣೆಗೆ ಶೋಭೆ ತಂದಿದ್ದರು ಈ ಬಾರಿ ಮುಖ್ಯ ಅತಿಥಿಯಾಗಿದ್ದ ದ್ವಾರಕದ ಹೆಲೋ ಮೋಮೋಸ್ ಸ್ಥಾಪಕ ಅಧ್ಯಕ್ಷರಾಗಿಯೂ ಇರುವ ಶ್ರೀಮತಿ ರಾಜಲಕ್ಷ್ಮಿ ಕುರುಪ್ ನವರು ತಮ್ಮ ಪರಿಶ್ರಮ, ಸ್ಫೂರ್ತಿದಾಯಕ ಬದುಕಿನಿಂದ ಅನೇಕ ಮಹಿಳೆಯರಿಗೆ ಮಾದರಿಯಾಗಿದ್ದಾರೆ. ಗಿನ್ನಿಸ್ ಬುಕ್ ರೆಕಾರ್ಡ್ ಪುರಸ್ಕೃತರಾದ ಅವರು ಸಮಾಜಕ್ಕಾಗಿ ಹಲವಾರು ಸೇವೆಗಳನ್ನು ಸಲ್ಲಿಸಿದ್ದಾರಲ್ಲದೆ ಒಬ್ಬ ಮಹಿಳೆಯಾಗಿ ತಮ್ಮ ಮನೆ ಸಮಾಜಕ್ಕಾಗಿ ಮಾಡಬಹುದಾದ ಸಹಾಯ ಕುರಿತು ಹೇಳಿದ ಹಿತವಚನಗಳು ಮನ ಮುಟ್ಟುವಂತಿದ್ದವು. ಅವರ ಉಪಸ್ಥಿತಿ ನಮ್ಮ ಕಾರ್ಯಕ್ರಮದ ಸಂಭ್ರಮಾಚರಣೆಗೆ ಇನ್ನೂ ಹೆಚ್ಚು ಶೋಭೆ ತಂದಿತ್ತು ಮಾತ್ರವಲ್ಲ ನಮ್ಮೆಲ್ಲರಿಗೂ ಮನದುಂಬಿ ಬಂದಿತ್ತು. ಇವರು ನಮ್ಮ ಸ್ನೇಹ ಬಳಗದಲ್ಲಿ ತುಂಬಾ ಹಿರಿಯ ಮತ್ತು ಪ್ರೇರಣಾದಾಯಕರಾದ ಅನೇಕ ಮಹಿಳೆಯರು ಬಳಗದ ಸದಸ್ಯರನ್ನು ಪ್ರೋತ್ಸಾಹಿಸುತ್ತಾ ಬಂದಿದ್ದಾರೆ. ಈ ವರ್ಷದ ಸ್ನೇಹದ ವಿಶಿಷ್ಟ ಮಹಿಳೆಯಾಗಿ ಶ್ರೀಮತಿ ಮಾಲತಿ ರಾಜ್ ರವರನ್ನು ಗುರುತಿಸಿ ಅವರಿಗೆ ಶಾಲು ಹೊದಿಸಿ ಗಿಡವ ನೀಡುವ ಮೂಲಕ ಸನ್ಮಾನಿಸಲಾಯಿತು.

ಖಜಾಂಚಿ ದೀನಾ ಜಾಯ್ಸ್ ರವರು ಅತಿಥಿ ಪರಿಚಯ ಮಾಡಿದರು. ಅಧ್ಯಕ್ಷರಾದ ಸರೋಜಾ ಮಾಧವ ಅವರು ಎಲ್ಲರಿಗೂ ಸ್ವಾಗತ ಕೋರಿ ಮುಖ್ಯ ಅತಿಥಿಗಳಿಗೆ ಗಿಡವನ್ನು ಕೊಟ್ಟು ಸನ್ಮಾನಿಸಿದರು





ಹಾಗೂ ಮಹಿಳಾ ದಿನಾಚರಣೆಯ ಮಹತ್ವದ ಬಗ್ಗೆ ತುಂಬ ಅದ್ಭುತವಾಗಿ ಮಾತನಾಡಿದರು.

ಇವರ ಜೀವನದ ಪಯಣದ ಪರಿಚಯವನ್ನು ನಮ್ಮ ಮುಂದೆ ತಂದವರು ನಮ್ಮ ಸ್ನೇಹ ಬಳಗದ ಹಿರಿಯರಾದ ಡಾ. ಅಹಲ್ಯಾ ಚಿಂತಾಮಣಿಯವರು. ಅನಂತರ ಕಾರ್ಯದರ್ಶಿಯಾದ ಲಕ್ಷ್ಮೀ ಕಿಣಿಯವರು 2020–2021ರ ವರ್ಷದ ವರದಿಯನ್ನು ತುಂಬಾ ಸುಂದರವಾಗಿ ಸಭೆಗೆ ಒಪ್ಪಿಸಿದರು. ಸ್ನೇಹ ಬಳಗದ ಸ್ನೇಹಿತೆಯರು ಮಹಿಳೆಯರ ಕುರಿತಾದ ಸುಮಧುರ ಸಂಗೀತ ಹಾಡನ್ನು ಹಾಡಿ ನಮ್ಮ ಸಂಭ್ರಮಕ್ಕೆ ಇನ್ನೂ ಮೆರಗು ತಂದರು. ನಮ್ಮ ಅಧ್ಯಕ್ಷರಾದ ಸರೋಜಾ ಮಾಧವ ಅವರು ಒಂದು ಆಟವನ್ನು ಆಡಿಸಿದರು ಅದರಲ್ಲಿ ಅದೃಷ್ಟವಂತ ಮಹಿಳೆಯಾಗಿ ನಮ್ಮ ಖಜಾಂಚಿಯಾದ ದೀನಾ ಜಾಯ್ಸ್ ಅವರು ಬಹುಮಾನ ಪಡೆದರು. ಇವರೊಂದಿಗೆ ನಮ್ಮ ಮುಖ್ಯ ಅತಿಥಿ ಅವರ ಸ್ನೇಹಿತೆ ಒಬ್ಬರು ತುಂಬಾ ಅದ್ಭುತವಾಗಿ ಒಡಿಯ ಹಾಡಿಗೆ ನೃತ್ಯವನ್ನು ಪ್ರಸ್ತುತಪಡಿಸಿದರು. ಈ ಸ್ನೇಹ ಬಳಗದಲ್ಲಿ ನಾನೂ ಒಬ್ಬ ಸದಸ್ಯಳಾಗಿ ಹಿರಿಯರಿಂದ ಮತ್ತು ನನ್ನ ಸ್ನೇಹಿತೆಯರಿಂದ ಬಹಳ ಪ್ರೇರಿತಳಾಗಿದ್ದೇನೆ ಹಾಗೂ ಈ ಬಾರಿ ಸಹಕಾರ್ಯದರ್ಶಿಯಾಗಿ ಸೇವೆ ಸಲ್ಲಿಸುತ್ತಿರುವುದು ನನ್ನ ಸೌಭಾಗ್ಯ ಎಂದು ಭಾವಿಸಿದ್ದೇನೆ. ನಾವೆಲ್ಲರೂ ಸೇರಿ ಅತಿಥಿಗಳೊಂದಿಗೆ ಫೋಟೋಗಳನ್ನು ಸೆರೆ ಹಿಡಿದೆವು. ಕಾರ್ಯಕ್ರಮದ ಬಳಿಕ ರುಚಿಯಾದ ಊಟವನ್ನು ಸವಿದು ಆನಂದಿಸಲಾಯಿತು. ಎಲ್ಲರಿಗೂ ಧನ್ಯವಾದಗಳನ್ನು ಹೇಳುವ ಜವಾಬ್ದಾರಿ ನನ್ನದಾಗಿತ್ತು. ಎಲ್ಲರಿಗೂ ನನ್ನ ಹೃತ್ಪೂರ್ವಕ ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆಯ ಶುಭಾಶಯಗಳು.□

**ರತ್ನ**

# ಜನಪದ ಮಹಿಳೆ

## (ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ ವಿಶೇಷ ಲೇಖನ)

ಜಂಗಮದ ಭೂತಾಯಿ ಹೆಣ್ಣು. ಕೋಟಿ ಕೋಟಿ ವರುಷ ಭಿತ್ತಿ ಬೆಳೆಯುವ ಭೂಮಿತಾಯಿಗೆ ನಮ್ಮ ಸಂಸ್ಕೃತಿಯಲ್ಲಿ ಮಹತ್ವದ ಗೌರವವಿದೆ. ಜಲವು ಹೆಣ್ಣು. ಜೀವದಯೆ ಜಲಮೂಲ. ಭೂಮಿ, ಆಕಾಶ, ವಾಯು, ನೀರು, ಬೆಳಕು (ಸೂರ್ಯ) ಸೇರಿದರೆ ಮಾತ್ರ ಸಕಲ ಜೀವಿಗಳು ಜೀವಿಸಲು ಸಾಧ್ಯ. ಮಾನವರು, ಜೀವಸಂಕುಲಗಳ ಸೃಷ್ಟಿಯ ವಾಹಿನಿ ಚಲನಸೀಲವಾಗಿ ನಡೆಯುತ್ತದೆ. ಪ್ರೀತಿ, ಸಹನೆ, ಶಾಂತಿ, ತಾಳ್ಮೆಗೆ ನಮಗೆ ಜನುಮ ಕೊಟ್ಟತಾಯಿಗೆ ಹೋಲಿಸುತ್ತಾರೆ. ತಾಯಿ ಎಂದರೆ ಭೂಮಿ, ಭೂಮಿ ಎಂದರೆ ತಾಯಿ, ಲಕ್ಷ್ಮಿ, ಬದುಕಲು ಅನ್ನನೀಡುವವಳು ಭೂತಾಯಿ ಕೊಟ್ಟ ಶ್ರೇಷ್ಠ ವರವೆಂದರೆ ಹೆಣ್ಣು, ಗಂಡು, 'ನಾರಿಮುನಿದರೆಮಾರಿ, ಒಲಿದರೆನಾರಿ' ಎಂಬ ಗಾದೆ ಮಾತಿದೆ.

"ನಾರಿ ಬಿಲ್ಲು ಬೆನ್ನು ಭಾಗಿಸಿತು" ಎಂಬ ಮಾತಿನಲ್ಲಿ ಬಾಣ ಬಿಲ್ಲಿನ ಹೆದೆಯನ್ನು ಭಾಗಿಸುವಂತೆ ಹೆಣ್ಣು ಎಂಥ ಪುರುಷನನ್ನು ಭಾಗಿಸುತ್ತಾಳೆ ಎಂಬ ನಾಣ್ನುಡಿಯಿದೆ. ತಾನು ಉಪವಾಸವಿದ್ದರೂ ತಾನು ಹೆತ್ತಮಕ್ಕಳು ಚೆನ್ನಾಗಿರಬೇಕೆಂದು, ಮಕ್ಕಳಿಗೆ ಹೊತ್ತೊತ್ತು ಊಟ, ವಸತಿ, ಶಿಕ್ಷಣ, ಸಂಸ್ಕೃತಿ, ಸದ್ಗುಣಗಳನ್ನು ನೀಡುವವಳು ಹೆಣ್ಣು, ತಾಯಿ. ಹಾಗಾಗಿ ಆಕೆಗೆ ಎಂದೆಂದೂ ಗೌರವ ನೀಡುವುದು ಪ್ರತಿಯೊಬ್ಬ ಪುರುಷರ ಆದ್ಯ ಕರ್ತವ್ಯ. 'ತಾಯಿಗಿಂತ ಬಂಧುವಿಲ್ಲ' ನಾಯಿಗಿಂತಪ್ರಾಣಿಯಿಲ್ಲ' ಎಂಬ ಗಾದೆಮಾತಿದೆ. ಮಕ್ಕಳು, ಸಮಾಜ ಎಷ್ಟೇ ತಪ್ಪು ಮಾಡಿದರೂ ಕ್ಷಮಾಗುಣವಿರುವುದು ಹೆಣ್ಣಿಗೆ, ತಾಯಿಗೆ, ನಿಯತ್ತಿನಲ್ಲಿ ನಾಯಿ ಮೊದಲ ಸ್ಥಾನ ಪಡೆಯುತ್ತದೆ. ಒಡತಿ, ಒಡೆಯನ ರಕ್ಷಣೆ ಆ ಪ್ರಾಣಿಯ ಮೊದಲ ಆದ್ಯತೆಯಾಗಿರುತ್ತದೆ. ಇಂದು ಹೆಣ್ಣು ರಾಷ್ಟ್ರಪತಿ, ಲೋಕಸಭಾಧ್ಯಕ್ಷ, ಪ್ರಧಾನಿ, ಮುಖ್ಯಮಂತ್ರಿ, ರಾಜ್ಯಪಾಲ, ಡಾಕ್ಟರ್, ಇಂಜಿನಿಯರ್, ಪ್ರಾಧ್ಯಾಪಕಿ, ಶಿಕ್ಷಕಿ, ನ್ಯಾಯಾದೀಶೆ, ಲಾಯರ್, ಕ್ರೀಡಾಪಟು, ನೃತ್ಯಗಾರ್ತಿ, ಹಾಡುಗಾರ್ತಿ, ಆಟೋಚಾಲಕಿ, ಬಸ್‌ಡ್ರೈವರ್, ಮೆಟ್ರೋಚಾಲಕಿಯೂ, ಪೈಲಟ್, ದೇಶದ ರಕ್ಷಣಾದಳದಲ್ಲಿ ಮೇಲಾಧಿಕಾರಿಗಳಾಗಿ ಸೇವೆ ಸಲ್ಲಿಸುತ್ತಿರುವುದು, ಐ.ಎ.ಎಸ್., ಐ.ಪಿ.ಎಸ್., ಐ.ಎಫ್.ಎಸ್., ಐ.ಆರ್.ಎಸ್. ಅಧಿಕಾರಿಗಳಾಗಿ ನಮ್ಮ ಸಹೋದರಿಯರು ಭಾರತದಾದ್ಯಂತ ಸೇವೆ ಮಾಡುತ್ತಿರುವುದು ಶ್ಲಾಘನೀಯ. ಆದರೂ ಕೆಲವೆಡೆ ಅಹಿತಕರ ಘಟನೆ ಘಟಿಸಿದಾಗ, ಅವರನ್ನು ಹೆತ್ತವರು ಹೆಣ್ಣಲ್ಲವೇ ಎಂಬ ಪ್ರಶ್ನೆ ಸಹಜವಾಗಿ ಮೂಡುತ್ತದೆ. ತಾಯಿದೇವರು, ತಾಯಿ ಮನೆಯೇ ಮೊದಲ ಪಾಠಶಾಲೆ. ಜನನಿಯೇ ಮೊದಲ ಗುರು. ಹೀಗಿರುವಾಗ ಹೆಣ್ಣನ್ನು ಸಹೋದರಿ, ಅತ್ತೆ, ಸೊಸೆ, ಹೆಂಡತಿ, ಅತ್ತಿಗೆ, ಅಜ್ಜಿ, ನಾದಿನಿ, ಸಹೋದ್ಯೋಗಿ, ಸಹಪಾಠಿನಿ ಇನ್ನೂ ಮುಂತಾದ ಪಾತ್ರ ನಿರ್ವಹಿಸುವ ಸ್ಥಿತಿ ನಮ್ಮ ಸಮಾಜದಲ್ಲಿದೆ.

ಸರ್ವಜ್ಞನ ವಚನಗಳಿಗೆ ಆಧಾರ ಜನಪದ ಮಹಿಳೆಯರ ಮೂರು ಸಾಲಿನ ಹಾಡುಗಳು ಪ್ರೇರಣೆ.

"ಬೆಚ್ಚನೆ ಮನೆಯಾಗೆ ವೆಚ್ಚಕ್ಕೆಹೊನ್ನಾಗಿ
ಇಚ್ಛೆ ಅರಿಯುವ ಸತಿಯಾಗೆ, ಇವು ಮೂರು
ಸ್ವರ್ಗಕ್ಕೆ ಕಿಚ್ಚು ಹಚ್ಚೆಂದ ಸರ್ವಜ್ಞ"

ಎಂದು ಹೆಣ್ಣಿಗೆ ಮಹತ್ವದ ಸ್ಥಾನಮಾನ ನೀಡುತ್ತಾನೆ. ಮುಂದುವರೆದು

ಹೆಣ್ಣಿನಿಂದಲೇ ಇಹವು ಹೆಣ್ಣಿನಿಂದಲೇ
ಪರವು, ಹೆಣ್ಣಿನಿಂದಲೇ ಸಕಲಸಂಪದವು,
ಹೆಣ್ಣೆ ಸಕಲೈಶ್ವರ್ಯ ಸರ್ವಜ್ಞ'

ಎಂದಿದ್ದಾನೆ, ಅಲ್ಲದೇ ಜಗದಲಿ, ಸಮಾಜದಲ್ಲಿ ಹೆಣ್ಣು ಬೇಡ ಎಂದು ಹೇಳುವವರು ಯಾರಾದರೂ ಇದ್ದಾರೆಯೆ? ಎಂದು ಪ್ರಶ್ನಿಸುವ ಈತನ ಮಾತಿನಲ್ಲಿಯೇ ಅರಿಯಬೇಕು.

'ಹಣ್ಣಾದ ಮರಗಳನು ಹೆಣ್ಣಾದ ಮನಗಳನು
ಜಗದಲ್ಲಿ ಒಲ್ಲದ ಅಣ್ಣಗಳು
ಯಾರುಯಾರು ಸರ್ವಜ್ಞ ಎನ್ನುತ್ತಾನೆ.

ಹೆಣ್ಣನ್ನು ಕುರಿತು ನಮ್ಮ ಮಹಾಭಾರತ ರಾಮಾಯಣಗಳು ಹೆಣ್ಣಿನ ಬಗ್ಗೆ ಗೌರವ ಆಧಾರಗಳನ್ನು ಹೇಳುವ ನೀತಿಮಾತಾಗಿವೆ. ನಮ್ಮ ಜನಪದ ತಾಯಂದಿರು ಹಾಡು, ಹಸೆ, ವಸಗೆ, ಕೃಷಿನಾಟಿ, ಒಕ್ಕಲು, ಕಳೆತೆಗೆಯುವಾಗ ಕಟ್ಟಿದಹಾಡುಗಳು ನಮ್ಮಸಂಸ್ಕೃತಿಯ ಮಹಿಳೆಯರ ಸಂಸ್ಕೃತಿ, ಗೌರವವನ್ನು ಬಹುಎತ್ತರಕೆ ಕೊಂಡೊಯ್ಯುತ್ತವೆ.

"ತಾಯಿದ್ದರೆ ತವರ್ಹೆಚ್ಚು" ಎಂದು ಹಾಡುಕಟ್ಟುವ ವನಿತೆಯರು, ಪತಿಯನ್ನು ಸಾವಿರದ ಮಾಣಿಕ್ಯಕ್ಕೆ, ಅದಕ್ಕಿಂತಲೂ ಮಿಗಿಲೆಂದು ಹಾಡುತ್ತಾರೆ. ತವರುಮನೆಯವಂಶ "ಹೊಳೆದಂಡೆಲಿರುವ ಗರಿಕೆಯ ಕೂಡಿಹಂಗ' ಹಬ್ಬಲಿಅವರರಸಬಳ್ಳಿ, ಎಂದು ಹರಸುತ್ತಾರೆ. "ಸರದಾರ ಬರುವಾಗ ಸುರೀದಾವ ಮಲ್ಲಿಗೆ, ದೊರೆ ನನ್ನತಮ್ಮ ಬರುವಾಗ ಎಲಕ್ಕಿಗೊನೆಭಾಗಿ ನಮಿಸಾವ' ಎಂದು ಸಹೋದರಿ ಹಾಡುತ್ತಾಳೆ. ತನ್ನ ತವರಿನ ಏಳಿಗೆಯನ್ನು ಪ್ರತಿಯೊಬ್ಬ ಹೆಣ್ಣು ಬಯಸುತ್ತಾಳೆ. ಆದರೂ ಆಕೆಯ ಜನಪದ ಹಾಡಿನಲ್ಲಿ ಹೀಗೆ ಅಭಿಪ್ರಾಯಿಸುತ್ತಾರೆ.

'ಹೆಣ್ಣಾಗಿ ಹುಟ್ಟಕ್ಕಿಂತ ಮಣ್ಣಾಗಿ ಹುಟ್ಟಿದರೆ
ಮಣ್ಣಿನ್ಮೇಲೊಂದು ಮರವಾಗಿ ಹುಟ್ಟಿದರೆ
ಪುಣ್ಯವಂತರಿಗೆ ನೆರಳಾಗಿ'

ಅದರಲ್ಲಿಯೂ ಮಹಾದುಪಕಾರದ ಅತ:ಕರಣ ಮಿಡಿಯುವುದು ಹೆಣ್ಣಿನಲ್ಲಿಯೇ.

"ಹೆಣ್ಣು ಹಡೆಯಲು ಬೇಡ, ಹೆರವರೆಗೆ ಕೊಡಬೇಡ,

ಎಂದು ಸಾಂತ್ವನ ಹೇಳುವ ಆಕೆ, ಹೆಣ್ಣು ಪರಿಪರಿಯಾಗಿ ಅನುಭವಿಸುವ ಪರಿಭವಗಳನ್ನು ಜನಪದ ಹಾಡಿನ ಮೂಲಕ ಹರಿಸಿದ್ದಾಳೆ.

'ಹೆಣ್ಣು ಹುಟ್ಟಿದರೆ ಹೆರವರಿಗೆ' ಎಂಬ ಗಾದೆ ಮಾತಿದೆ. 'ಹೆಣ್ಣೆಂದರೆ ಆರತಿ, ಎಂಬ ನುಡಿಗಟ್ಟು ಇದೆ. ಅಂದರೆ ಮದುವೆ ಮಾಡಿ, ಗಂಡನ ಮನೆಗೆ ಕಳುಹಿಸುವ ದನಿ ಇದೆ. ಹೆಣ್ಣಿಲ್ಲದ ಮನೆ ಮನೆಯಲ್ಲ. ಅಂತು ಮದುವೆಯೂ ಸಾಂಗವಾಗಿ ನಡೆಯುತ್ತದೆ. ಆಗ ಹೆಣ್ಣು ಮಗಳು ಶಿವನಲ್ಲಿ ಕಂದನನ್ನು ಬೇಡುವ ಪರಿ ನಿತ್ಯನೂತನ, ನವನವೀನ.

ಕಂದನ ಕೊಡು ಶಿವನೆ, ಬಂಧಾನ ಪಡಲಾರೆ
ಬಂಜೆಂಬ ಶಬುದ ಹೊರಲಾರೆಮರ್ತ್ಯದಾಗ
ಹಂಗೀನಾ ಬಾನ ಉಣಲಾರೆ.

ಮಕ್ಕಳಿಲ್ಲದ ತಾಯಂದಿರು, ಸಹೋದರಿಯರು ಅರ್ವಾಚೀನಕಾಲದಿಂದಲೂ ನೋವಿನಲ್ಲಿಯೇ ಮಿಂದು, ನೋವನ್ನೇ ತಿಂದು, ನೋವನ್ನೇ ಹೊದ್ದಿದ್ದಾರೆ. ಅಷ್ಟೇ ಅಲ್ಲ ಮಕ್ಕಳಿಲ್ಲದವರ ಬಾಳುವೆ ಬಾಳಲ್ಲ.

"ಬಾಲಕರಿಲ್ಲದ ಬಾಲಿಧಾತರಜನ್ಮ ಬಾಡಿಗೆ ಎತ್ತುದುಡಿದಂಗ, ಬಾಳೆಲೆಯ ಹಾಸುಂಡು ಬೀಸಿವಗೆದಂಗ".

ಯಾವುದೇ ಹೆಣ್ಣುಮಗಳ ಸ್ಥಿತಿ ಮಕ್ಕಳಿಲ್ಲದೆ ಬಾಡಿಗೆ ಎತ್ತು, ಊಟಮಾಡಿದ ಬಾಳೆಲೆ ಆಗಬಾರದು. ಬಂಜೆತನ ನೀಗಿ, ಮಕ್ಕಳು ಹಡೆದು, ತಾಯ್ತನದ ಗೌರವ ಹೆಣ್ಣಿಗೆ ಬೇಕೇಬೇಕು ಎಂಬುದು ಜನಪದ ತಾಯಂದಿರ ಆಶಯ. ತಾನು ಹೆತ್ತು ಸಾಕಿದ ಮಗುವನ್ನು ಕುರಿತು ತಾಯಿ ಕಟ್ಟುವ ಹಾಡು ಹೀಗಿದೆ.

ಆಡಿಬಾ ನನಕಂದ ಅಂಗಾಲ ತೊಳೆದೇನು
ತೆಂಗಿನಕಾಯಿ ತಿಳಿನೀರ ತಕ್ಕೊಂಡು
ಬಂಗಾರ ಮೋರೆ ತೊಳೆದೇನು.

ಇದು ನಮ್ಮ ತಾಯಂದಿರ, ಜನಪದರ ಹೃದಯಸಂಪತ್ತು. ತೆಂಗಿನಕಾಯಿಯ ಎಳನೀರು ಪರಿಶುದ್ಧ. ಅದರಲ್ಲಿ ಬಂಗಾರದಂತ ಮಗುವಿನ ಮುಖ ತೊಳೆದು, ಆ ಮಗು ಲವಲವಿಕೆಯಿಂದ ಇರುವಂತೆ ಮಾಡುತ್ತಾಳೆ. ತಾಯಿಯಾದ ಹೆಣ್ಣಿಗೆ ಮಕ್ಕಳು ಅತ್ತರೆ ಬಹಳ ಆನಂದ. ಅಳುವ ಕಂದನಲ್ಲಿ ಆಕೆ ಕಾಣುವ ಕಾಣ್ಕೆ ಹೀಗಿದೆ.

ಅಳುವ ಕಂದನ ತುಟಿಯು ಹವಳದ
ಕುಡಿಯಂಗ, ಕುಡಿಹುಬ್ಬು ಬೇವಿನ
ಎಸಳು ಶಿವನ ಕೈಯಲಗು ಹೊಳೆದಂಗ.

ರಚ್ಚೆಮಾಡುವ ಮಕ್ಕಳಲ್ಲಿಯೂ ಜನಪದ ತಾಯಂದಿರು ಸುಂದರತೆಯ ಸೊಬಗು, ಹವಳದಕುಡಿ, ಬೇವಿನ ಚಿಗರು, ಶಿವನ ಕೈಯ ಕತ್ತಿಯ ಹೊಳಪನ್ನು ಕಾಣುತ್ತಾರೆ. ಮುಂದುವರೆದು,

'ನನ್ನಯ್ಯನಂತೋರು ಹನ್ನೆರಡು ಮಕ್ಕಳು
ಹೊನ್ನೆಯ ಮರದ ನೆರಳಾಗೆ ಆಡಿದರೆ
ಸನ್ಯಾಸಿಜಪವಾ ಮರೆತಾನು'

ಅನ್ನುವಲ್ಲಿ ಸಂಸಾರ ಬೇಡವೆಂದು ದೂರಾದ ಸನ್ಯಾಸಿ, ಮಕ್ಕಳ ಆಟ, ತೊದಲು ಮಾತನ್ನು ಕೇಳಿ ಮದುವೆಯಾಗಿ ಸಂಸಾರಿಯಾಗಬೇಕೆಂದು ಮನಃಪರಿವರ್ತನೆ ಪಡೆಯುತ್ತಾನೆ. ಅಂದರೆ ಹೆಣ್ಣು ಸಮಾಜದ, ಸಂಸ್ಕೃತಿಯಕಣ್ಣು. ಜನಪದರ ಊಟ, ಉಡುಗೆ, ತೊಡುಗೆ, ಸರಳ. ಆರೋಗ್ಯವಂತ ಮನಸ್ಸು, ಸಮಾಜ ಅವರದು. ಬೇಂದ್ರೆಯವರು ಹೆಣ್ಣನ್ನು ಕುರಿತು ಹೇಳುವ ಮಾತಿದು.

“ಹೆಣ್ಣುಗಂಡಿಗೆ ಚೆಲುವು, ಗಂಡುಹೆಣ್ಣಿನ ಒಲವು” ಎಂದು ಅವರ ರಚನೆಯಲ್ಲಿ ಹೆಣ್ಣಿಗೆ ಗೌರವದ ಅಭಿವ್ಯಕ್ತಿ ಇದೆ. ಆಕೆಯ ಕುಡಿನೋಟಕ್ಕೆ, ಕಾಮನಬಿಲ್ಲಿನ ಕಣ್ಣುಹುಬ್ಬಿಗೆ, ವೃತ್ತಕಾರವಾದ ಆದರಗಳಿಗೆ ಸೋಲದ ಮನುಜರು ಇಲ್ಲವೇ ಇಲ್ಲವೆಂದು ಹೇಳುತ್ತಾರೆ. ಅವರ ತಾಯಿ ಅಂಬಿಕೆ. ಅದೇ ಮುಂದೆ ಅಂಬಿಕಾತನಯದತ್ತ ಎಂದು ಪ್ರಸಿದ್ಧಿಯಾಗುತ್ತದೆ.

ಸಮಾಜದಲ್ಲಿ ದಾನ, ಧರ್ಮದ ಸಂಸ್ಕೃತಿ ಪಸರಿಸಿದ್ದು ತಾಯಂದಿರಿಂದ, ಹೆಣ್ಣುಮಕ್ಕಳಿಂದ ಮಹಿಳೆಯರಿಂದ. ಹತ್ತನೇ ಶತಮಾನದ ‘ದಾನಚಿಂತಾಮಣಿ’ ಅಭಿದಾನದ ಅತ್ತಿಮಬ್ಬೆ ಪೊನ್ನನ ‘ಶಾಂತಿಪುರಾಣದ’ ಒಂದು ಸಾವಿರ ಪ್ರತಿಗಳನ್ನು ಅಚ್ಚುಮಾಡಿಸಿ, ಒಂದು ಸಾವಿರ ಜಿನಪ್ರತಿಮೆಗಳೊಂದಿಗೆ ದಾನಮಾಡುತ್ತಾಳೆ. ಅದೇ ಸಮಯದಲ್ಲಿದ್ದ ವಿಜ್ಜಿಕ ಎಂಬ ಕವಿಯತ್ರಿ “ಅರಸಿಕರ ಮುಂದೆ ಕಾವ್ಯವನ್ನು ಓದುವ ಪರಿಸ್ಥಿತಿ ಬರಬಾರದೆಂದು” ವಿದ್ಯಾದೇವತೆ ಸರಸ್ವತಿಯನ್ನು ಬೇಡುತ್ತಾಳೆ. 12ನೇ ಶತಮಾನದ ಅಕ್ಕಮಹಾದೇವಿ, ಸಂತೆಯ ಶಬ್ದಗಳಿಗೆ, ಸಮುದ್ರದ ನೊರೆತೆರೆ, ಬೆಟ್ಟದ ಮೃಗಗಳಿಗಂಜದೇ, ಬಾಳಲ್ಲಿ ಸ್ತುತಿ ನಿಂದೆನೆಗಳು ಬಂದ ಬಳಿಕ ಸಮಾಧಾನಿಯಾಗಿರಬೇಕು ಎಂದು ಸಾಮಾಜಿಕ ಮೌಲ್ಯವನ್ನು ಎತ್ತಿಹಿಡಿದಿದ್ದಾರೆ. ಲೌಕಿಕ ವಿವಾಹ ತಿರಸ್ಕರಿಸಿ “ಹರನೇನೀನೆನಗೆ ಗಂಡನಾಗಬೇಕೆಂದು ಅನಂತಕಾಲ ತಪಸಿದ್ದೇನೋಡಾ” ಎಂದು ಚೆನ್ನಮಲ್ಲಿಕಾರ್ಜುನನ ಅಂಕಿತದಲ್ಲಿ ವಚನ ಕಟ್ಟಿದ್ದಾರೆ. ತಾಯಿಭಾಷೆ, ಸಾಹಿತ್ಯ, ಸಂಸ್ಕೃತಿ, ಮಹಿಳಾ ಪರವಾದ ದನಿ ಅವರದು. ಅದೇ ರೀತಿ ಚಿಕ್ಕದೇವರಾಜನ ಆಸ್ಥಾನದಲ್ಲಿ ಸಂಚಿಯವರಾದ ಹೊನ್ನಮ್ಮ “ನಮ್ಮನ್ನು ಹೆತ್ತತಾಯಿ ಹೆಣ್ಣಲ್ಲವೆ. ಹೆಣ್ಣುಗಳನ್ನು ಹೀಗಳೆಯಬೇಡಿ” ಎಂದು ಸಮಾಜವನ್ನು ಎಚ್ಚರಿಸಿದ್ದಾರೆ. ಸಾಂಗತ್ಯದಲ್ಲಿ ರಚನೆಯಾಗಿರುವ ಅವರ ಪದ್ಯ ನಾಲ್ಕು ಸಾಲಿನಲ್ಲಿ ಅಭಿವ್ಯಕ್ತಗೊಂಡಿದೆ. ಆಕೆ ಹೇಳುವಂತೆ

“ಪೆಣ್ಣಲ್ಲವೆ ತಮ್ಮನೆಲ್ಲ ಪಡೆದತಾಯಿ
ಪೆಣ್ಣಲ್ಲವೆ ಪೊರೆದವಳು
ಪೆಣ್ಣು ಪೆಣ್ಣೆಂದೇತಕೆ ಬೀಳುಗಳೆವರು
ಕಣ್ಣುಕಾಣದ ಗಾವಿಲರು.”

‘ಕುವರನಾದೊಡೆ ಬಂದಗುಣವೇನದರಿಂದ ಕುವರಿಯಾದೊಡೆಕುಂದೇನು’

ಎಂದು ತಮ್ಮಕೃತಿ ಹದಿಬದೆ ಧರ್ಮದಲ್ಲಿ ಪ್ರಶ್ನಿಸಿದ್ದಾರೆ. ಕರ್ನಾಟಕದಲ್ಲಿ ಕಿತ್ತೂರರಾಣಿ ಚೆನ್ನಮ್ಮ, ರಾಣಿ ಅಬ್ಬಕ್ಕ, ಒನಕೆ ಓಬ್ಬವ್ವ, ಸಾಲುಮರದ ತಿಮ್ಮಕ್ಕ, ಸೋಬಾನ ಚಿಕ್ಕಮ್ಮ ಅವರ ಸಾಧನೆ ಸಂಸ್ಕೃತಿಕ ಕೊಡುಗೆ ಅಪಾರವಾದದು. ಹೆಣ್ಣು ಎಂದೆಂದಿಗೂ ಸಮಾಜ, ಮಾತೃಭಾಷೆ, ನಾಡುನುಡಿಯ ಪರವಾಗಿ ದನಿ ಎತ್ತಿದ ಮಹಾ ಮಹಿಳೆಯರು. ಇವರಿಗೆ ಶರಣುಶರಣಾರ್ಥಿ. ಮಹಿಳೆ ಶಕ್ತಿ, ಲಕ್ಷ್ಮೀ, ವಿದ್ಯಾದಿದೇವತೆ ಅಂಥ ಸಾಮಾಜಿಕ, ಪೌರಾಣಿಕ ಮಹತ್ವಪಡೆದಿರುವುದು ಆಕೆಯಿಂದ, ಇಂಥ ಸಂದರ್ಭದಲ್ಲಿ ಮಾರ್ಚ್ 8 ರಂದು ವಿಶ್ವ ಮಹಿಳಾ ದಿನಾಚರಣೆ ಆಚರಿಸುತ್ತಿರುವುದು ನಮಗೆ ಜನ್ಮಕೊಟ್ಟ ತಾಯಿಗೆ ಸಹೋದರಿಯರಿಗೆ ನೀಡುವ ಹೃದಯಪೂರ್ವಕ ಗೌರವವೇ ಆಗಿದೆ. ಮಹಿಳೆಯರು ಸಮಾನತೆ ಭ್ರಾತೃತ್ವ, ದಯೆ ಕರುಣೆಯ ಮಮತೆ ಮಲ್ಲಿಗೆ ಮಾಲೆಗಳು ಅವರ ಬದುಕಲ್ಲಿ ಸದಾ ಬೆಳುದಿಂಗಳು ಚೆಲ್ಲಿ ಚಂದನದ ಪರಿಮಳದಂತೆ, ಗರತಿ ಹಾಡಿನಲಿ, ಗಮಗಮಿಸಲಿ. ತಾಯಿ, ಸಹೋದರಿಯರಿಗೆ ಪ್ರೀತಿಪೂರ್ವಕ ನಮನ.

***ಪ್ರೊ. ವಿಶ್ವನಾಥ***

# ಟೆನಿಸ್ ಮತ್ತು ಬ್ಯಾಡ್ಮಿಂಟನ್ ಆಟದಲ್ಲಿ ಅಪ್ರತಿಮ ಕ್ರೀಡಾ ಸಾಧನೆಯಿಂದ ನಿಬ್ಬೆರಗಾಗಿಸಿದ ಸಹೋದರಿಯರು

ಲಕ್ಷ್ಮಿ ಗೌಡ ಮತ್ತು ಅವರ ತಂಗಿ ಅನ್ವೇಶಾ ಗೌಡ ಇಬ್ಬರೂ ಕ್ರಮವಾಗಿ ಟೆನಿಸ್ ಮತ್ತು ಬ್ಯಾಡ್ಮಿಂಟನ್ ಕ್ರೀಡೆಗಳಲ್ಲಿ ಅತ್ಯಂತ ಹುರುಪು ಉತ್ಸಾಹಗಳಿಂದ ತಮ್ಮ ಕೌಶಲ್ಯ ಮೆರೆಯುತ್ತಾ ಮುನ್ನುಗ್ಗುತ್ತಿರುವ ನಮ್ಮ ಹೆಮ್ಮೆಯ ದೆಹಲಿ ಕನ್ನಡ ಕುವರಿಯರು.

16 ವರ್ಷ ವಯಸ್ಸಿನ (DOB 21.4.2005) ಟೆನಿಸ್ ಆಟಗಾರ್ತಿ ಲಕ್ಷ್ಮಿ ಗೌಡ ಅವರು ದೆಹಲಿಯ ಸಂಸ್ಕೃತಿ ಶಾಲೆಯ 12 ನೇ ತರಗತಿಯಲ್ಲಿ ಓದುತ್ತಿದ್ದಾರೆ. ಅವರು 2022 ರ ಏಪ್ರಿಲ್ 1 ರಂದು ಜಜ್ಜರ್‌ನಲ್ಲಿ ನಡೆದ ಮಹಿಳಾ ಟೆನಿಸ್ ಪಂದ್ಯಾವಳಿಯಲ್ಲಿ ಅದ್ಭುತ ಕೈಚಳಕ ಪ್ರದರ್ಶಿಸಿ 1 ಲಕ್ಷ ರೂಪಾಯಿ ಬಹುಮಾನವನ್ನು ಗೆದ್ದಿದ್ದಾರೆ.

ಅವರು U–18, ಅಖಿಲ ಭಾರತ ಶ್ರೇಯಾಂಕದಲ್ಲಿ 13 ನೇ ಸ್ಥಾನದಲ್ಲಿದ್ದಾರೆ ಮತ್ತು ಅವರ ಈ ಸಾಧನೆಯ ನಂತರ ರಾಷ್ಟ್ರೀಯ ಮಟ್ಟದ ಮಹಿಳಾ ವಿಭಾಗದಲ್ಲಿ 69 ನೇ ಸ್ಥಾನವನ್ನು ತಲುಪಿದರು. ಅಲ್ಲದೆ ಅಂತರರಾಷ್ಟ್ರೀಯ ಜೂನಿಯರ್ ಶ್ರೇಯಾಂಕದಲ್ಲಿ ಅವರು 556 ನೇ ಸ್ಥಾನದಲ್ಲಿದ್ದಾರೆ.

ಆಕೆಯ ತಂಗಿ ಅನ್ವೇಶಾ ಗೌಡ, ಬ್ಯಾಡ್ಮಿಂಟನ್ ಆಟಗಾರ್ತಿ. 13 ವರ್ಷ ವಯಸ್ಸಿನ ಅವರು ಸಂಸ್ಕೃತಿ ಶಾಲೆಯ 9 ನೇ ತರಗತಿ ವಿದ್ಯಾರ್ಥಿನಿ (DOB 6.5.2008).

26ನೇ ಮಾರ್ಚ್ 2022 ರಂದು ಟೆಲ್ ಅವಿವ್‌ನಲ್ಲಿ ಇಸ್ರೇಲ್ ಜೂನಿಯರ್ ಇಂಟರ್ ನ್ಯಾಶನಲ್ ಪಂದ್ಯಾವಳಿ ಗೆದ್ದಿದ್ದಾರೆ.

ಅನ್ವೇಶಾ ಗೌಡ ಅವರು, ಅತಿ ಹೆಚ್ಚು ಶ್ರೇಯಾಂಕದ ಪೆಟ್ರಾ ಮೈಕ್ಸ್ನರೋವಾ ಅವರನ್ನು ಫೈನಲ್‌ನಲ್ಲಿ 21–16, 21–8 ರಿಂದ ಸೋಲಿಸಿದರು.

ವಿಶ್ವ ಅಂತರಾಷ್ಟ್ರೀಯ ಜೂನಿಯರ್ ಶ್ರೇಯಾಂಕದಲ್ಲಿ ಅವರು 110 ನೇ ಸ್ಥಾನವನ್ನು ತಲುಪಿದ್ದಾರೆ.

ಇದಕ್ಕೂ ಮೊದಲು ಅವರು ಫೆಬ್ರವರಿ 2022 ರಲ್ಲಿ ಉಗಾಂಡಾ ಜೂನಿಯರ್ ಇಂಟರ್‌ನ್ಯಾಶನಲ್‌ನ ಕ್ವಾರ್ಟರ್ ಫೈನಲ್‌ಗೆ ತಲುಪಿದ್ದರು.

ಅವರು ಜನವರಿಯಲ್ಲಿ ಹರಿಯಾಣದ ಪಂಚಕುಲದಲ್ಲಿ ನಡೆದ U–15 ವಿಭಾಗದ ರಾಷ್ಟ್ರೀಯ ಫೈನಲ್‌ಗೆ ತಲುಪಿದ್ದರು. ಅವರು ಪ್ರಸ್ತುತ U–15 ಅಖಿಲ ಭಾರತ ಶ್ರೇಯಾಂಕದಲ್ಲಿ 2 ನೇ ಸ್ಥಾನದಲ್ಲಿದ್ದಾರೆ ಮತ್ತು U–17 ಅಖಿಲ ಭಾರತ ಶ್ರೇಣಿಯಲ್ಲಿ 7 ನೇ ಸ್ಥಾನದಲ್ಲಿದ್ದಾರೆ.

ನವೆಂಬರ್ 2021 ರಲ್ಲಿ ಅವರು U–15 ವಿಭಾಗದಲ್ಲಿ ದೆಹಲಿ ರಾಜ್ಯ ಬ್ಯಾಡ್ಮಿಂಟನ್ ಚಾಂಪಿಯನ್‌ಷಿಪ್ ಅನ್ನು ಗೆದ್ದಿರುತ್ತಾರೆ. U–19 ವಿಭಾಗದಲ್ಲಿ ಸೆಮಿಫೈನಲ್ ತಲುಪಿದ್ದರು ಮತ್ತು U–17 ಮತ್ತು ಮಹಿಳೆಯರ ವಿಭಾಗದಲ್ಲಿ ಕ್ವಾರ್ಟರ್ ಫೈನಲ್ ತಲುಪಿದ್ದರು.

ಈ ಇಬ್ಬರೂ ಸಹೋದರಿಯರು ದೆಹಲಿಯಲ್ಲಿ ಭ್ರಷ್ಟಾಚಾರ ನಿಗ್ರಹ ವಿಭಾಗದಲ್ಲಿ ಡಿಸಿಪಿ ಆಗಿ ಸೇವೆ ಸಲ್ಲಿಸುತ್ತಿರುವ ಕನ್ನಡಿಗ ಅಧಿಕಾರಿ ಶ್ರೀ ಬಿ.ಎಲ್. ಸುರೇಶ್ ಮತ್ತು ದೆಹಲಿಯ ಬ್ಯಾಂಕ್ ಆಫ್ ಇಂಡಿಯಾದಲ್ಲಿ ಡಿಜಿಎಂ ಆಗಿ ಸೇವೆ ಸಲ್ಲಿಸುತ್ತಿರುವ ಶ್ರೀಮತಿ ಅನಿತಾ ಮೊಹಂತಿ ಅವರ ಸುಪುತ್ರಿಯರು. ಪ್ರತಿಭಾನ್ವಿತೆಯರಾದ ಈ ಕನ್ನಡ ಕುವರಿಯರಿಬ್ಬರ ಮುಂದಿನ ಪ್ರಯತ್ನಗಳಿಗೆ ಸಮಸ್ತ ದೆಹಲಿ ಕನ್ನಡಿಗರ ಪರವಾಗಿ ನಾವು ಶುಭ ಹಾರೈಸುತ್ತೇವೆ. ಅಭಿಮತ ಸಂಪಾದಕ ಮಂಡಳಿಯಿಂದ ಹಾರ್ದಿಕ ಅಭಿನಂದನೆಗಳು.






# ದೆಹಲಿಯಲ್ಲಿ ಕರ್ನಾಟಕದ ಧ್ವನಿಯನ್ನು ಸಬಲೀಕರಿಸಲು ನಿರಂತರವಾಗಿ ಶ್ರಮಿಸಿದವರು ಡಾ. ಸರೋಜಿನಿ ಮಹಿಷಿ - ಡಾ. ಪುರುಷೋತ್ತಮ ಬಿಳಿಮಲೆ

**ಡಾ. ಸರೋಜಿನಿ ಮಹಿಷಿ ಪ್ರಶಸ್ತಿ ಪುರಸ್ಕೃತ ಜಾನಪದ ವಿದ್ವಾಂಸ ಡಾ.ಪುರುಷೋತ್ತಮ ಬಿಳಿಮಲೆ ಅವರೊಂದಿಗೆ ದೆಹಲಿ ಕನಾಟಕ ಸಂಘದ ಮುಖವಾಣಿ "ಅಭಿಮತ" ಪತ್ರಿಕೆಯು ನಡೆಸಿದ ಸಂದರ್ಶನದ ವರದಿ.**

**ಅಭಿಮತ :** ಡಾ. ಸರೋಜಿನಿ ಮಹಿಷಿ ಪ್ರಶಸ್ತಿ ಪುರಸ್ಕೃತರಾದ ತಮಗೆ ನಮ್ಮ ಅಭಿಮತ ಸಂಪಾದಕ ಮಂಡಳಿ ಹಾಗೂ ಓದುಗರ ಪರವಾಗಿ ಹೃತ್ಪೂರ್ವಕ ಅಭಿನಂದನೆಗಳು. ಸರ್, ದೆಹಲಿ ಕರ್ನಾಟಕ ಸಂಘ ಕೊಡಮಾಡುವ ಡಾ. ಸರೋಜಿನಿ ಮಹಿಷಿ ಪ್ರಶಸ್ತಿಗೆ ನೀವು ಆಯ್ಕೆಯಾಗಿರುವುದು ತಿಳಿದಾಗ ನಿಮಗೆ ಏನನ್ನಿಸಿತು ನಮ್ಮ ಓದುಗರೊಂದಿಗೆ ಹಂಚಿಕೊಳ್ಳಿ.

**ಡಾ. ಪುರುಷೋತ್ತಮ ಬಿಳಿಮಲೆ :** ದೆಹಲಿ ಕರ್ನಾಟಕ ಸಂಘವು ನಮ್ಮದು. ಇವತ್ತು ಸಂಘ ಈ ಮಟ್ಟದಲ್ಲಿ ಬೆಳೆಯಲು ಅನೇಕರು ಕಾರಣರಾಗಿದ್ದಾರೆ. ಎರಡು ಅವಧಿಗೆ ನಾನು ಅಧ್ಯಕ್ಷನಾಗಿದ್ದಾಗ (2004–2008) ಸಂಘದ ಬೆಳವಣಿಗೆಯಲ್ಲಿ ನನ್ನನ್ನು ಪ್ರಾಮಾಣಿಕವಾಗಿ ತೊಡಗಿಸಿಕೊಂಡಿದ್ದೆ. ಹೀಗೆ ನಾವೆಲ್ಲರೂ ಒಟ್ಟು ಸೇರಿ ಕಟ್ಟಿದ ಸಂಘವೊಂದರಿಂದ ನಾನು ಪ್ರಶಸ್ತಿ ಸ್ವೀಕರಿಸುವುದು ನನ್ನ ಮನಸ್ಸಿಗೊಪ್ಪದ ವಿಚಾರವಾಗಿತ್ತು. ಆದರೆ ಆಯ್ಕೆ ಸಮಿತಿಯವರು, ಅದರಲ್ಲೂ ಮುಖ್ಯವಾಗಿ ಶ್ರೀ ಕಪ್ಪಣ್ಣನವರು 'ನಾನು ಯಾಕೆ ಆ ಪ್ರಶಸ್ತಿಯನ್ನು ಸ್ವೀಕರಿಸಬೇಕೆಂಬುದನ್ನು' ಮನಸ್ಸಿಗೆ ತಾಕುವಂತೆ ವಿವರಿಸಿದರು. ಸಂಘದ ಅಧ್ಯಕ್ಷರಾದ ಶ್ರೀ ಸಿ.ಎಂ. ನಾಗರಾಜ ಅವರೂ ಮಾತಾಡಿದರು. ಹಾಗಾಗಿ ಬಹಳ ದಾಕ್ಷಿಣ್ಯದಿಂದ ಪ್ರಶಸ್ತಿಯನ್ನು ಸ್ವೀಕರಿಸಲು ಒಪ್ಪಿಕೊಂಡೆ. ಈಗಲೂ ನಾನು ಆ ಸಂಕೋಚದಿಂದ ಪೂರ್ತಿ ಪಾರಾಗಿಲ್ಲ.

**ಅಭಿಮತ :** ಡಾ. ಸರೋಜಿನಿ ಮಹಿಷಿ ಅವರು 1966 ರಿಂದ 1978 ರವರೆಗೆ ಸಂಘದ ಅಧ್ಯಕ್ಷರಾಗಿದ್ದವರು. ಆದರೂ ಕೂಡ ನೀವು ಸಂಘದ ಆಡಳಿತ ಚುಕ್ಕಾಣಿ ಹಿಡಿಯುವುದಕ್ಕೆ ಮೊದಲು ಕೆಲವು ವರ್ಷಗಳ ಕಾಲ ಸಂಘಕ್ಕೆ ಬರದೆ ಇದ್ದ ಅವರು, ನೀವು ಅಧ್ಯಕ್ಷರಾದ ಮೇಲೆ ಮತ್ತೆ ಸಂಘದ ಕಾರ್ಯಕ್ರಮಗಳಿಗೆ ಅವರು ಬರುತ್ತಿದ್ದರು ಅನ್ನೋ ಮಾತಿದೆ. ಇದರ ಬಗ್ಗೆ ಹೇಳಿ.

**ಡಾ. ಬಿಳಿಮಲೆ :** ಸಂಘದ ವರ್ಣರಂಜಿತ ಇತಿಹಾಸದಲ್ಲಿ ಡಾ. ಸರೋಜಿನಿ ಮಹಿಷಿಯವರಿಗೆ (1927–2015) ಬಹಳ ಮಹತ್ವದ ಸ್ಥಾನವೊಂದಿದೆ. ಅವರು ದೆಹಲಿಯಲ್ಲಿ ಕರ್ನಾಟಕದ ಧ್ವನಿಯನ್ನು ಸಬಲೀಕರಿಸಲು ನಿರಂತರವಾಗಿ ಶ್ರಮಿಸಿದ ಲೇಖಕಿ, ರಾಜಕಾರಣಿ ಹಾಗೂ ಕಾನೂನು ತಜ್ಞೆ, ಲೋಕಸಭಾ ಸದಸ್ಯೆ, ರಾಜ್ಯಸಭಾ ಸದಸ್ಯೆ, ಕೇಂದ್ರ ಪ್ರವಾಸೋದ್ಯಮ, ವಿಮಾನಯಾನ ಖಾತೆ, ಕಾನೂನು ಮತ್ತು ಕಂಪನಿ ವ್ಯವಹಾರಗಳ ಖಾತೆ ಸಚಿವೆಯಾಗಿ ಕೆಲಸ ಮಾಡಿ, ರಾಜಕೀಯದಿಂದ ನಿವೃತ್ತರಾದ ಮೇಲೆ, ಆಟೋದಲ್ಲಿ ಓಡಾಡಿಕೊಂಡು, ಫರಿದಾಬಾದಿನ ಪುಟ್ಟ ಕೊಠಡಿಯಲ್ಲಿ ಸ್ವಾಭಿಮಾನದಿಂದ ಬದುಕುತ್ತಾ ಕೊನೆಯುಸಿರೆಳೆದವರು. ಕನ್ನಡ, ಸಂಸ್ಕೃತ, ಹಿಂದಿ, ಮರಾಠಿ ಭಾಷೆಗಳಲ್ಲಿ ಅವರಿಗೆ ಅಪಾರ ಹಿಡಿತವಿತ್ತು. 'ಮಂಕುತಿಮ್ಮನ ಕಗ್ಗ' ಮತ್ತು 'ರಾಮಾಯಣ ದರ್ಶನಂ' ಅನ್ನು ಹಿಂದಿಗೆ ಅನುವಾದಿಸಿದ್ದರು. 'ಸ್ಥಳೀಯರಿಗೆ ಉದ್ಯೋಗ' ಎಂಬ ನೀತಿಯನ್ನು ಪ್ರತಿಪಾದಿಸಿದ ಅವರ ವರದಿ 'ಸರೋಜಿನಿ ಮಹಿಷಿ ವರದಿ' ಎಂದೇ ಪ್ರಸಿದ್ಧವಾಗಿದೆ.ಅನೇಕ ಮಹಿಳಾ ಸಂಘಟನೆಗಳಲ್ಲಿ ಕೆಲಸ ಮಾಡಿದ್ದ ಅವರು 'ವನಿತಾ ಸೇವಾ ಸಮಾಜ', ಹೆಣ್ಣು ಮಕ್ಕಳಿಗಾಗಿ ಪ್ರಾಥಮಿಕ ಶಾಲೆ, ಪ್ರೌಢ ಶಾಲೆ ಮತ್ತು ತರಬೇತಿ ಕಾಲೇಜು ಸ್ಥಾಪಿಸಿದ್ದಾರೆ.

1966 ರಲ್ಲಿ ಕೇಂದ್ರ ಸಚಿವೆಯಾಗಿದ್ದಾಗ ಡಾ. ಮಹಿಷಿಯವರು ದೆಹಲಿ ಕರ್ನಾಟಕ ಸಂಘಕ್ಕೆ ಭೂಮಿ ಮಂಜೂರು ಮಾಡಿಸಿಕೊಂಡು,ಮುಂದೆ ಬಹಳ ಶ್ರಮವಹಿಸಿ 1977ರಲ್ಲಿ ಸಂಘಕ್ಕೊಂದು ಕಟ್ಟಡವನ್ನೂ ಕಟ್ಟಿದರು. ಆದರೆ ಮುಂದಿನ ಕೆಲವು ಅನಿವಾರ್ಯ ಘಟನೆಗಳಿಂದಾಗಿ ಅವರು 1983ರಿಂದ ಸಂಘದಿಂದ ದೂರವೇ ಉಳಿಯಬೇಕಾಯಿತು. ಅದರ ಬಗ್ಗೆ ಹೆಚ್ಚು ವಿವರಗಳನ್ನು ನೀಡಲು ನನಗೀಗ ಮನಸ್ಸಿಲ್ಲ. ನಾನು ದೆಹಲಿ ಕರ್ನಾಟಕ ಸಂಘದ ಅಧ್ಯಕ್ಷನಾಗಿ 2004ರಲ್ಲಿ ಕೆಲಸ ಶುರು ಮಾಡಿದಾಗ ಸಂಘಕ್ಕೊಂದು ಸ್ಥಳ ಪಡೆದು ಕಟ್ಟಡವನ್ನೂ ಕಟ್ಟಿದ್ದ ಮಹಿಷಿಯವರು ಸಂಘಕ್ಕೆ ಬಾರದಿರುವುದು ನನ್ನನ್ನು ಮತ್ತು ನನ್ನ ಜೊತೆಗಿದ್ದವರನ್ನು ಅಸ್ವಸ್ಥಗೊಳಿಸುತ್ತಿತ್ತು. ಕೊನೆಗೆ 2005ರ ಏಪ್ರಿಲ್ ತಿಂಗಳಲ್ಲಿ ಸಂಘದ ಹೊಸ ಕಟ್ಟಡದ ಉದ್ಘಾಟನಾ ಕಾರ್ಯಕ್ರಮದ ಸಮಾರೋಪಕ್ಕೆ ಅವರನ್ನು ಕರೆಯಲು ನಾವು ಕೆಲವರು ಶ್ರೀ ಸಂಜೀವ ದೇಶಪಾಂಡೆಯವರ ನೇತೃತ್ವದಲ್ಲಿ ಹೋದೆವು.ಅವರು ಸಿಟ್ಟು ಇಳಿಯುವಷ್ಟು ಕಾಲ ಬೈದರು.ಆಮೇಲೆ ಕಣ್ಣೀರು ಹಾಕಿದರು. ಕೊನೆಗೆ ಸಮಾರೋಪ ಕಾರ್ಯಕ್ರಮಕ್ಕೆ ಬಂದು ಅತ್ಯುತ್ತಮವಾಗಿ ಮಾತಾಡಿ ಹಗುರವಾದರು. ಆಮೇಲೆ ಸಂಘದಲ್ಲಿ ನಡೆದ ಕಾರ್ಯಕ್ರಮಗಳಿಗೆ ನಾವು ಕರೆದಾಗಲೆಲ್ಲ ಬರುತ್ತಿದ್ದರು.ಕನ್ನಡ ಸಾಹಿತ್ಯದ ಕುರಿತಾದ ಅವರ ಆಳವಾದ ಜ್ಞಾನಕ್ಕೆ ನಾನು ಮರುಳಾಗಿದ್ದೆ.ಅವರ ಕನ್ನಡ ಪ್ರೇಮ ನಮಗೆಲ್ಲ ಮಾದರಿಯಾಗಬೇಕು.

**ಅಭಿಮತ:** ದೆಹಲಿಯಲ್ಲಿ ಕರ್ನಾಟಕದ ಸಾಂಸ್ಕೃತಿಕ ರಾಯಭಾರಿಯಂತಿರುವ ಕರ್ನಾಟಕ ಸಂಘದ ಸಾರಥ್ಯವನ್ನು ವಹಿಸಿ ಎರಡು ಅವಧಿಗೆ ಅಧ್ಯಕ್ಷರಾಗಿದ್ದಾಗಿನ ಸಂಘದ ಸಾಧನೆ ಮತ್ತು ಕೊಡುಗೆಗಳ ಬಗ್ಗೆ ತಿಳಿಸಿ.

**ಡಾ. ಬಿಳಿಮಲೆ :** ಈ ಕುರಿತು ಬೇರೆ ಯಾರಾದರೂ ಹೇಳುವುದೇ ಚಂದ. ಸಂಘದ ಕುರಿತಾದ ನನ್ನ ಅನುಭವಗಳನ್ನು ನನ್ನ ಈಚಿನ ಪುಸ್ತಕ 'ಕಾಗೆ



ಮುಟ್ಟಿದ ನೀರಿ'ನಲ್ಲಿ ವಿವರವಾಗಿ ಬರೆದಿದ್ದೇನೆ. ಆಗ ಮಾಡಿದ ಕೆಲಸಗಳಲ್ಲಿ ಮುಖ್ಯವಾದ ಕೆಲವನ್ನು ಇಲ್ಲಿ ದಾಖಲಿಸುವುದಾರೆ– 1. ಶ್ರೀ ಕೆ.ಆರ್. ನಾಗರಾಜರ ನೇತೃತ್ವದಲ್ಲಿ ಆರಂಭಗೊಂಡ ಸಂಘದ ಹೊಸ ಕಟ್ಟಡದ ಕೆಲಸಗಳನ್ನು ನಿಗದಿತ ಅವಧಿಯೊಳಗೆ ಪೂರ್ಣಗೊಳಿಸಿದ್ದು. ಅದಕ್ಕಾಗಿ ಧನ ಸಂಗ್ರಹ ಮಾಡಲು ಹೆಣಗಾಡಿದ್ದು. ಪ್ರತಿಯೊಬ್ಬ ಕನ್ನಡಿಗನೂ ಕಟ್ಟಡಕ್ಕಾಗಿ ಒಂದು ರೂಪಾಯಿಯಾದರೂ ದೇಣಿಗೆ ನೀಡಬೇಕೆಂದು ಅಂಗಲಾಚಿದ್ದು.

2. ಗ್ರಂಥಾಲಯವನ್ನು ಬೆಳೆಸಿದ್ದು.

3. ಕರ್ನಾಟಕ ಸಂಘವನ್ನು ವಿವಿಧ ಚಟುವಟಿಗೆಗಳ ಒಂದು ರಾಷ್ಟ್ರೀಯ ವೇದಿಕೆಯಾಗಿ ಪರಿವರ್ತಿಸಲು ಕೆಲಸ ಮಾಡಿದ್ದು. ಮುಖ್ಯವಾಗಿ, ತಮಿಳು, ತೆಲುಗು ಮತ್ತು ಕನ್ನಡ ವಿಶ್ವವಿದ್ಯಾಲಯಗಳನ್ನು ಒಟ್ಟು ಸೇರಿಸಿ–ಕನ್ನಡಕ್ಕೆ ಅಭಿಜಾತ (ಶಾಸ್ತ್ರೀಯ) ಸಾಹಿತ್ಯದ ಮನ್ನಣೆ ದೊರಕಿಸಲು ಹೋರಾಡಿದ್ದು. ರಾಜಧಾನಿಯಲ್ಲಿ ಕರ್ನಾಟಕ, ಕನ್ನಡ ಸಾಹಿತ್ಯ ಮತ್ತು ಮಹಿಳೆ, ದಕ್ಷಿಣ ಭಾರತದ ಮೌಖಿಕ ಪರಂಪರೆ, ಭಾರತದ ಸಾಮಾಜಿಕ ನ್ಯಾಯ ವ್ಯವಸ್ಥೆಗೆ ಕರ್ನಾಟಕದ ಕೊಡುಗೆ, ಮೊದಲಾದ ಮಹತ್ವದ ವಿಚಾರ ಸಂಕಿರಣಗಳು ನಡೆದುವು. ಅವುಗಳಲ್ಲಿ ಕೆಲವು ಪುಸ್ತಕಗಳಾಗಿಯೂ ಪ್ರಕಟವಾದುವು. ಆ ಹೊತ್ತಿಗೆ ಸಂಘಕ್ಕೆ ವಿಶ್ವವಿದ್ಯಾಲಯವೊಂದರ ಆಯಾಮ ಲಭಿಸಿತ್ತು.

4. ಕಾರಣಾಂತರದಿಂದ ಸಂಘದಿಂದ ದೂರ ಉಳಿದಿದ್ದ ಸರೋಜಿನಿ ಮಹಿಷಿಯವರೇ ಮೊದಲಾದ ಹಲವರು ಮತ್ತೆ ಸಂಘದ ಕಡೆ ಬರುವಂತೆ ಮಾಡಿದ್ದು. ದೆಹಲಿಗೆ ಯಾವ ಲೇಖಕ ಬಂದರೂ ಸಂಘದ ಕಡೆ ಬಾರದೇ ಹೋಗುತ್ತಿರಲಿಲ್ಲ.

5. ಸಂಘದ ಆಡಳಿತದಲ್ಲಿ ಪಾರದರ್ಶಕತೆಯನ್ನು ತಂದದ್ದು.

6. ಅಭಿಮತಕ್ಕೆ ಹೊಸ ರೂಪ ಕೊಟ್ಟದ್ದು. ಸಂಘದ ಕಟ್ಟಡದ ಉದ್ಘಾಟನೆಯ ಸಂದರ್ಭದಲ್ಲಿ ಹೊರತಲಾದ ಅಭಿಮತದ ವಿಶೇಷ ಸಂಚಿಕೆಗೆ 22 ಲಕ್ಷ ರೂಪಾಯಿಗಳ ಜಾಹೀರಾತನ್ನು ಸಂಗ್ರಹಿಸಿದ್ದು.

ಈ ಎಲ್ಲಾ ಕೆಲಸಗಳಲ್ಲಿ ಕೈಜೋಡಿಸಿದ್ದ ಹಿರಿಯರ, ಕಿರಿಯರ ಹೆಸರಿನ ಪಟ್ಟಿ ಬಹಳ ದೊಡ್ಡದು. ಅದರಲ್ಲಿ ಕೆಲವರು ಇವತ್ತು ನಮ್ಮೊಡನೆ ಇಲ್ಲ. ಅವರೆಲ್ಲರನ್ನೂ ಸ್ಮರಿಸಿಕೊಳ್ಳುತ್ತಿದ್ದೇನೆ.

**ಅಭಿಮತ :** ಈಗಿನ ಇಪ್ಪತ್ತೊಂದನೇ ಶತಮಾನದ ಮೂರನೇ ದಶಕದಲ್ಲಿರುವ ನಾವು ಹೊರನಾಡಿನಲ್ಲಿ ಕರ್ನಾಟಕದ ಭಾಷೆ, ಸಂಸ್ಕೃತಿ, ಪರಂಪರೆಯ ಕುರಿತು ಮಾಡಬೇಕಾದ ಅತ್ಯಗತ್ಯ ಕೆಲಸಗಳು ಮತ್ತು ಜವಾಬ್ದಾರಿಗಳ ಬಗ್ಗೆ ನಿಮ್ಮ ಸಲಹೆ ಏನು ?

**ಡಾ. ಬಿಳಿಮಲೆ :** ಇದೊಂದು ಮಹತ್ವದ ಪ್ರಶ್ನೆ. ಇದಕ್ಕೆ ಉತ್ತರ ನೀಡಲು ಹೊರನಾಡಿನಲ್ಲಿರುವ ನಾವು ಬಿಡಿ, ಒಳನಾಡಿನಲ್ಲಿರುವ ಕನ್ನಡಿಗರೂ ಅಸಮರ್ಥರಾಗಿದ್ದಾರೆ.ಜಾಗತೀಕರಣದ ಇಂದಿನ ಸಂದರ್ಭದಲ್ಲಿ ಆಳುವ ಶಕ್ತಿಶಾಲೀ ಭಾಷೆಯಾಗಿ ಇಂಗ್ಲಿಷ್ ಹೊರಹೊಮ್ಮಿದೆ. 'ಇಂಗ್ಲಿಷ್ ಭಾಷೆ ಕಲಿತರೆ ಆರ್ಥಿಕವಾಗಿ ಅಭಿವೃದ್ಧಿ ಹೊಂದಬಹುದು' ಎಂಬ ನಂಬಿಕೆಯ ಹಿನ್ನೆಲೆಯಲ್ಲಿ ಜಗತ್ತಿನ ಅನೇಕ ದೇಶಗಳು ಈ ಬೆಳವಣಿಗೆಯನ್ನು ಒಪ್ಪಿಕೊಂಡಿವೆ. ಸರಿಯೋ ತಪ್ಪೋ ಹೊಸ ತಲೆಮಾರಿನ ಜನರು ಇಂಗ್ಲಿಷನ್ನು ಅನ್ನದ ಭಾಷೆಯಾಗಿ ಗ್ರಹಿಸಿದ್ದಾರೆ. ಇದರಿಂದಾಗುತ್ತಿರುವ ಬಹಳ ದೊಡ್ಡ ತೊಂದರೆ ಎಂದರೆ, ಜಗತ್ತಿನಾದ್ಯಂತ ಸಜೀವವಾಗಿರುವ ಸಾವಿರಾರು ಸಣ್ಣ ಭಾಷೆಗಳು ಸಾಯುತ್ತಿರುವುದು. ಅಧಿಕಾರಿಗಳು ಮತ್ತು ಸರಕಾರಗಳು ದೇಶೀ ಭಾಷೆಗಳ ಕುರಿತು ತೋರುತ್ತಿರುವ ನಿರ್ಲಕ್ಷ್ಯವು ಅವುಗಳನ್ನು ಅವಸಾನದ ಅಂಚಿಗೆ ತಂದು ನಿಲ್ಲಿಸಿವೆ. ಭಾರತದಲ್ಲಿ ಈ ಸಮಸ್ಯೆ ಇನ್ನೂ ತೀವ್ರತರವಾಗಿದೆ. ಯೂನೆಸ್ಕೋವು ಸಿದ್ಧಪಡಿಸಿದ 'ಭಾಷೆಗಳ ಜಾಗತಿಕ ಭೂಪಟ'ವು ಭಾರತದಲ್ಲಿನ 172 ಭಾಷೆಗಳನ್ನು ಅಪಾಯದ ಅಂಚಿನಲ್ಲಿರುವ ಭಾಷೆಗಳೆಂದೂ, 101 ಭಾಷೆಗಳನ್ನು ಅತೀವ ಅಪಾಯದಲ್ಲಿರುವ ಭಾಷೆಗಳೆಂದೂ, 71 ಭಾಷೆಗಳನ್ನು ಎಲ್ಲ ಬಗೆಯ ಅಪಾಯಗಳಿಗೆ ಬಲಿಯಾಗುತ್ತಿರುವ ಭಾಷೆಗಳೆಂದೂ ಗುರುತಿಸಿದೆ. ಆಶ್ಚರ್ಯವೆಂದರೆ, ಇಷ್ಟೊಂದು ಸಮಸ್ಯೆಗಳಿದ್ದರೂ ನಮ್ಮ ಸರಕಾರಗಳು ಅದರ ಕಡೆಗೆ ಗಂಭೀರವಾಗಿ ಗಮನ ಕೊಡದಿರುವುದು. ಜಗತ್ತಿನ ಅರ್ಧದಷ್ಟು ಭಾಷೆಗಳನ್ನು ಹೊಂದಿರುವ ಭಾರತಕ್ಕೆ ಒಂದು ಸಮರ್ಪಕವಾದ ಭಾಷಾ ನೀತಿಯೇ ಇಲ್ಲ. ಈ ನಡುವೆ ಉನ್ನತ ಶಿಕ್ಷಣದ ಅಂತಾರಾಷ್ಟ್ರೀಕರಣವೂ ಜೋರಾಗಿ ನಡೆಯುತ್ತಿದೆ. ಕಳೆದ ಶತಮಾನದ ಕೊನೆಯ ದಶಕದಲ್ಲಿ ನಡೆದ ಜಾಗತೀಕರಣ ಪ್ರಕ್ರಿಯೆಯು ಜಗತ್ತಿನ ಭಾಷೆಗಳ ವ್ಯಾಕರಣವನ್ನು ಏಕರೂಪಿಯಾಗಿ ಮಾರ್ಪಡಿಸಿದೆ. ಖಾಸಗೀಕರಣ, ವ್ಯಾಪಾರೀಕರಣ ಹಾಗೂ ಮಾರುಕಟ್ಟೆಯ ನೀತಿಗಳು ಶಿಕ್ಷಣದ ಪರಿಕಲ್ಪನೆಯನ್ನು ಅಮೂಲಾಗ್ರವಾಗಿ ಬದಲಾಯಿಸಿದವು. ಇದು ಸಾಮಾಜಿಕ ನ್ಯಾಯದ ಪ್ರಶ್ನೆಯನ್ನು ಹಿಂದಕ್ಕೆ ಸರಿಸಿದೆ. ಇಂಥ ಸಂದರ್ಭದಲ್ಲಿ ದೆಹಲಿ ಕರ್ನಾಟಕ ಸಂಘವು ಜನರಲ್ಲಿ ಅರಿವು ಹುಟ್ಟಿಸುವ ಕೆಲಸ ಮಾಡಬೇಕಾಗುತ್ತದೆ. ಅದು ದೆಹಲಿಯಲ್ಲಿ ಇರುವುದರಿಂದ ಅದಕ್ಕೆ ಅಂಥ ಕೆಲಸಗಳನ್ನು ಮಾಡಲು ಸಾಧ್ಯ ಇದೆ.


**ಅಭಿಮತ:** ರಾಷ್ಟ್ರರಾಜಧಾನಿಯಲ್ಲಿ ಕನ್ನಡ ಹಾಗೂ ಕರ್ನಾಟಕದ ಸಮಗ್ರ ಪ್ರತಿನಿಧಿತ್ವದ ಬಗ್ಗೆ ನಿಮ್ಮ ಅನಿಸಿಕೆ ಏನು?

**ಡಾ. ಬಿಳಿಮಲೆ :** ಕರ್ನಾಟಕದ ಪ್ರತಿನಿಧೀಕರಣ ಅತ್ಯಂತ ದುರ್ಬಲವಾಗಿದೆ. ಒಂದು ಕಾಲಕ್ಕೆ ಶಿವರಾಮ ಕಾರಂತ, ಗಿರೀಶ್ ಕಾರ್ನಾಡ್, ಯು.ಆರ್. ಅನಂತಮೂರ್ತಿ, ಬಿ.ವಿ. ಕಾರಂತ, ಪ್ರಸನ್ನ, ಷೆಟ್ಟರ್ ಮೊದಲಾದವರು ದೆಹಲಿಯಲ್ಲಿ ಓಡಾಡುತ್ತಿದ್ದಾಗ ಕರ್ನಾಟಕದ ಹೆಸರು ಎಲ್ಲೆಡೆಯೂ ಕೇಳಿಬರುತ್ತಿತ್ತು. ಈಗ ಅಂತವರ ಸಂಖ್ಯೆ ಕಡಿಮೆಯಾಗಿದೆ.ರಾಜ್ಯದ ಬಗ್ಗೆ ಚೆನ್ನಾಗಿ ತಿಳಿದುಕೊಂಡು ಅಂಕಿ ಅಂಶಗಳ ಮೂಲಕ ಮಾತಾಡಿ ರಾಜ್ಯಕ್ಕೆ ನ್ಯಾಯ ಒದಗಿಸಬಲ್ಲಂತ ರಾಜಕಾರಣಿಗಳೂ ಕಡಿಮೆಯಾಗುತ್ತಿದ್ದಾರೆ. ಜನರ ಆದ್ಯತೆಗಳೇ ಬದಲಾಗಿರುವಾಗ, ಭಾಷೆ, ಸಾಹಿತ್ಯ, ಸಂಸ್ಕೃತಿ ಯಾರಿಗೆ ಬೇಕು ಹೇಳಿ?

**ಅಭಿಮತ:** ನೀವು ಕನ್ನಡೇತರರಿಗೆ ಕನ್ನಡ ಕಲಿಸುವ ಮೂಲಕ ಕನ್ನಡ ಭಾಷೆ, ಸಾಹಿತ್ಯಗಳ ಬಗೆಗೆ ದೇಶ, ವಿದೇಶಗಳ ವಿದ್ಯಾರ್ಥಿಗಳು ಕರ್ನಾಟಕದ ಬಗೆಗೆ ಅರಿತುಕೊಳ್ಳಲು ನೆರವಾಗಿದ್ದೀರಿ. ಹಾಗೆ ನೋಡಿದರೆ ಎಷ್ಟು ಜನ ಕನ್ನಡೇತರರಿಗೆ ನೀವು ಕನ್ನಡ ಕಲಿಸಿದೀರಿ. ಇಂತಹ ಕೆಲಸವನ್ನು ಮುಂದುವರೆಸಲು ಇತರೆ ಕನ್ನಡಿಗರಿಗೆ ನಿಮ್ಮ ಸಲಹೆ, ಸಂದೇಶ ಏನು?

**ಡಾ. ಬಿಳಿಮಲೆ :** ಇವತ್ತು ಶಿಕ್ಷಣದ ಪರಿಕಲ್ಪನೆಗಳು ಬದಲಾಗುತ್ತಿವೆ. ಕಳೆದ ಶತಮಾದ ಕೊನೆಯಲ್ಲಿ ಸಂಭವಿಸಿದ ಕೆಲವು ಘಟನೆಗಳು ಶಿಕ್ಷಣವನ್ನು ಬದಲಾಯಿಸಿದೆ. ಗುಣಾಂಕಗಳ ಸಿದ್ಧತೆ ಮತ್ತು ಹಂಚುವಿಕೆಯು ಜಾಗತೀಕರಣ ಪ್ರಕ್ರಿಯೆಗಳಿಗೆ ಅನುಗುಣವಾಗಿರಬೇಕು ಎಂದು ಹೇಳಲಾಗುತ್ತಿದೆ.ಶಿಕ್ಷಣ ಕ್ಷೇತ್ರದಲ್ಲಿ ಅಂತಾರಾಷ್ಟ್ರೀಯ ವಿದ್ಯಾರ್ಥಿಗಳ ಹಾಜರಾತಿ, ದೇಶೀಯ ಮತ್ತು






ವಿದೇಶೀಯ ವಿಶ್ವವಿದ್ಯಾಲಯಗಳು ಒಟ್ಟಿಗೆ ಕೆಲಸ ಮಾಡುವ ಅವಳಿ ಕಾರ್ಯಕ್ರಮಗಳು ಹಾಗೂ ವಿದ್ಯಾರ್ಥಿ ವಿನಿಮಯ ಕಾರ್ಯಕ್ರಮಗಳು ಇವತ್ತು ಜಾರಿಗೆ ಬರುತ್ತಿವೆ. ಪಠ್ಯಕ್ರಮಗಳನ್ನು ಎರಡೂ ದೇಶಗಳ ಶಿಕ್ಷಣ ಸಂಸ್ಥೆಗಳು ಜಂಟಿಯಾಗಿ ರೂಪಿಸುತ್ತಿವೆ. ಪರಿಣಾಮವಾಗಿ ಇಂದು ಶಿಕ್ಷಣವು ಒಂದು ದೇಶದ ರಾಜಕೀಯ ಗಡಿಗಳಿಗೆ ಸೀಮಿತವಾಗಿರದೆ ಅದು ಸೀಮಾತೀತವಾಗಿದೆ. ಇಂಥ ಸಂದರ್ಭದಲ್ಲಿ ಕನ್ನಡ ಭಾಷೆಯಲ್ಲಿ ಕೆಲಸ ಮಾಡುತ್ತಿರುವವರು ತಮ್ಮ ತಮ್ಮ ಜವಾಬ್ದಾರಿಗಳ ಬಗ್ಗೆ ಹೊಸದಾಗಿ ಯೋಚಿಸಬೇಕಾಗಿದೆ.

ನಾನು ಜೆ.ಎನ್.ಯು.ನಲ್ಲಿದ್ದಾಗ ಅಲ್ಲಿನ ಬೇರೆ ಬೇರೆ ವಿಭಾಗಗಳ ಮತ್ತು ಬೇರೆ ಭಾಷೆಯ ವಿದ್ಯಾರ್ಥಿಗಳು ಕನ್ನಡ ಕಲಿಯಲು ಬರುತ್ತಿದ್ದರು. ಅದಕ್ಕಾಗಿ ನಾನು ಉಚಿತ ಕನ್ನಡ ತರಗತಿಗಳನ್ನು ಶುರು ಮಾಡಿದೆ. ಮೂರು ವರ್ಷಗಳಲ್ಲಿ ಸುಮಾರು 60 ವಿದ್ಯಾರ್ಥಿಗಳು ಕನ್ನಡ ಕಲಿತರು.ಅವರ ಉಪಯೋಗಕ್ಕಾಗಿ www.kannadakalike.org ಎಂಬ ಜಾಲತಾಣವನ್ನೂ ಸಿದ್ಧಪಡಿಸಿದೆ. ಈ ಜಾಲತಾಣದಲ್ಲಿ ಭಾಷಾ ಕಲಿಕೆಯ ನಾಲ್ಕು ಪ್ರಮುಖ ಕೌಶಲ್ಯಗಳಾದ ಆಲಿಸುವಿಕೆ, ಮಾತಾಡುವಿಕೆ, ಓದುವಿಕೆ ಮತ್ತು ಬರೆಯುವಿಕೆಯನ್ನು ಪ್ರೋತ್ಸಾಹಿಸಲು ವ್ಯಾಕರಣ ಪಠ್ಯಗಳನ್ನೂ, ಸಹಜ ಸಂದರ್ಭದಲ್ಲಿ ದಾಖಲಿಸಿದ 30 ವೀಡಿಯೋಗಳನ್ನು ಪಠ್ಯವಾಗಿ ಅಳವಡಿಸಲಾಗಿದೆ. ಆಸಕ್ತರು ಮೊದಲು ವೀಡಿಯೋವನ್ನು ಧ್ಯಾನಿಸಿ ನೋಡಬಹುದು. ಆನಂತರ ವೀಡಿಯೋದಲ್ಲಿ ಬಳಕೆಯಾದ ಪಠ್ಯವನ್ನು ಓದಬಹುದು. ಅಗತ್ಯ ಬಿದ್ದರೆ ಸುಲಭವಾಗಿ ಅದನ್ನು ಪುನರಾವರ್ತಿಸಿಕೊಳ್ಳಬಹುದು.ಈ ಹಂತದಲ್ಲಿ ಅದು ಅರ್ಥವಾಗದಿದ್ದರೆ ಅದರ ಇಂಗ್ಲಿಷ್ ಅನುವಾದವನ್ನೂ ಗಮನಿಸಬಹುದು.ವೀಡಿಯೋದಲ್ಲಿ ಬಳಕೆಯಾದ ಮುಖ್ಯ ಪದಗಳ ಪಟ್ಟಿಯನ್ನು ಆಂಗ್ಲಾನುವಾದದ ಸಹಿತ ನೀಡಲಾಗಿದೆ. ವ್ಯಾಕರಣ ರೂಪಗಳನ್ನೂ ಕೊಡಲಾಗಿದೆ. ಇದನ್ನು ತಯಾರಿಸುವಾಗ ಭಾಷಾ ಕಲಿಸುವಿಕೆಯಲ್ಲಿ ಅಂತಾರಾಷ್ಟ್ರೀಯವಾಗಿ ಅನುಸರಿಸಲಾಗುತ್ತಿರುವ ಸಂವಹನ, ಸಂಸ್ಕೃತಿ, ಸಂಪರ್ಕ, ಹೋಲಿಕೆ ಮತ್ತು ಸಮುದಾಯದ ಮಾದರಿಗಳನ್ನು ಗಮನದಲ್ಲಿರಿಸಿಕೊಳ್ಳಲಾಗಿದೆ. ಈ ವಿಧಾನದಲ್ಲಿ ಅನ್ಯಭಾಷಾ ಪರಿಸರದಲ್ಲಿ ಕನ್ನಡವು ಸಂವಹನಗೊಳ್ಳಬೇಕಾದ ರೀತಿ, ಭಿನ್ನ ಸಂಸ್ಕೃತಿಗಳ ನಡುವೆ ಕನ್ನಡವು ಅನುಷ್ಠಾನಗೊಳ್ಳಬೇಕಾದ ಬಗೆ, ಬೇರೆ ಭಾಷೆಯವರೊಡನೆ ಕನ್ನಡವು ಸಂಪರ್ಕ ಸಾಧಿಸಲು ತಯಾರಾಗಬೇಕಾದ ರೀತಿ, ಭಾಷಾ ಕಲಿಕೆಯಲ್ಲಿ ಸಹಜವಾಗಿ ಏರ್ಪಡುವ ತೌಲನಿಕ ದೃಷ್ಟಿಕೋನ ಹಾಗೂ ಯಾವ ಸಮುದಾಯಕ್ಕೆ ಕನ್ನಡವನ್ನು ಹೇಳಿಕೊಡಲಾಗುವುದು ಎಂಬ ಪ್ರಜ್ಞೆ ಇವಿಷ್ಟನ್ನೂ ಗಮನದಲ್ಲಿರಿಸಿಕೊಳ್ಳಲಾಗಿದೆ. ಇದನ್ನು ವಿಶ್ವದಾದ್ಯಂತ ಇವತ್ತೂ ಜನರು ಬಳಸುತ್ತಿರುವುದು ನನಗೆ ಸಮಾಧಾನ ತಂದಿದೆ.ಹೊಸ ಕಾಲಕ್ಕೆ ಕನ್ನಡವನ್ನು ಸಜ್ಜುಗೊಳಿಸುವ ಕೆಲಸವನ್ನು ಇವತ್ತು ಎಲ್ಲರೂ ಮಾಡಬೇಕಾಗಿದೆ.

**ಅಭಿಮತ:** ನೀವು ಅಮೇರಿಕನ್ ಇನ್ಸ್ಟಿಟ್ಯೂಟ್‌ನಲ್ಲಿ ಕೂಡ ಕೆಲಸ ಮಾಡಿದಿರಿ. ಕರ್ನಾಟಕ ಸಂಸ್ಕೃತಿ ಮತ್ತು ಕಲೆಯ ಬಗೆಗೆ ಹೊರದೇಶಗಳಲ್ಲಿ ಯಾವ ಬಗೆಯ ಅಭಿಪ್ರಾಯ ಇದೆ, ಇದರ ಬಗ್ಗೆ ನಾಲ್ಕು ಮಾತುಗಳನ್ನು ಹೇಳ್ತೀರಾ ?

**ಡಾ. ಬಿಳಿಮಲೆ :** ಹಿಂದಿ, ಬಂಗಾಳಿ, ತೆಲುಗು ಮತ್ತು ತಮಿಳು ಭಾಷೆಗಳಿಗೆ ಹೋಲಿಸಿದರೆ ಕನ್ನಡದ ಬಗ್ಗೆ ವಿದೇಶೀಯರಿಗೆ ತಿಳುವಳಿಕೆ ಬಹಳ ಕಡಿಮೆ ಇದೆ. 20ಕ್ಕೂ ಹೆಚ್ಚು ವಿದೇಶೀ ವಿಶ್ವವಿದ್ಯಾಲಯಗಳಲ್ಲಿ ತಮಿಳು ಭಾಷೆಯನ್ನು ಕಲಿಯಲು ಅವಕಾಶವಿದೆ. ಆದರೆ ಜರ್ಮನಿಯಲ್ಲಿ ಒಂದು ಕಡೆ ಬಿಟ್ಟರೆ ಕನ್ನಡ ಬೇರೆಲ್ಲಿಯೂ ಇಲ್ಲ. ಕನ್ನಡದ ಮಹತ್ವದ ಕೃತಿಗಳು ಇಂಗ್ಲಿಷಿಗೆ ಅನುವಾದವಾಗಿಲ್ಲವಾದ್ದರಿಂದ ವಿದೇಶಗಳಲ್ಲಿ ಕನ್ನಡದ ಬಗ್ಗೆ ವಿಶೇಷ ಆಸಕ್ತಿ ಹುಟ್ಟುತ್ತಿಲ್ಲ. ಕರ್ನಾಟಕದ ಅನನ್ಯ ಗುಣಗಳನ್ನು ಕನ್ನಡೇತರರಿಗೆ ತಿಳಿಸುವಲ್ಲಿ ನಾವು ವಿಫಲರಾಗಿದ್ದೇವೆ.

**ಅಭಿಮತ :** ನಿಮ್ಮ ಆತ್ಮಕತೆ ಹಾಗೂ ನಿಮ್ಮ ಇತ್ತೀಚಿನ ಬರವಣಿಗೆಗಳ ಕುರಿತು ಹೇಳಿ.

**ಡಾ. ಬಿಳಿಮಲೆ :** 2020ರಲ್ಲಿ ನಾನು ಜೆ.ಎನ್.ಯು.ವಿನಿಂದ ನಿವೃತ್ತನಾದ ಮೇಲೆ ಓದಲು ಮತ್ತು ಬರೆಯಲು ನನಗೆ ಹೆಚ್ಚು ಸಮಯ ದೊರೆಯಿತು. ಹಾಗಾಗಿ ಕಳೆದ ಎರಡು ವರ್ಷಗಳಲ್ಲಿ ನನ್ನ ಮೂರು ಪುಸ್ತಕಗಳು ಪ್ರಕಟವಾದುವು. ಮೊದಲನೆಯದಾದ, 'ಕನ್ನಡ ಕಥನ'ವು ಗಂಭೀರ ಸಂಶೋಧನೆಯಲ್ಲಿ ತೊಡಗಿದವರ ಮೆಚ್ಚುಗೆಗೆ ಪಾತ್ರವಾಯಿತು. ಎರಡನೆಯದಾದ 'ಕಾಗೆ ಮುಟ್ಟಿದ ನೀರು' ಆತ್ಮಕತೆಯು ಪ್ರಕಟವಾಗಿ ಒಂದು ವರ್ಷ ಕಳೆಯುವ ಹೊತ್ತಿಗೆ ಮೂರನೇ ಮುದ್ರಣ ಕಂಡಿತು. ಕೋವಿಡ್ನ ಎರಡು ಅಲೆಗಳ ಹೊಡೆತಕ್ಕೆ ಸಿಕ್ಕ ಮನುಕುಲವು ಸಾವು ನೋವುಗಳ ನಡುವೆ ಅಪಾರವಾಗಿ ನರಳುತ್ತಿದ್ದ ಸಮಯದಲ್ಲೂ ಜನರು ಈ ಪುಸ್ತಕವನ್ನು ಕೊಂಡು ಓದಿದ್ದು ನನಗಂತೂ ಅಚ್ಚರಿಯನ್ನುಂಟು ಮಾಡಿದೆ.ಬಹಳ ಮುಖ್ಯವಾಗಿ ಯುವಜನರು ಈ ಆತ್ಮಕತೆಯಿಂದ ಸಾಕಷ್ಟು ಪ್ರೇರಣೆ ಪಡೆದಿದ್ದಾರೆ.ಮೂರನೆಯದಾದ 'ಅಮರ ಸುಳ್ಯದ ರೈತ ಹೋರಾಟ' ಕೃತಿಯು 1834–37ರ ನಡುವೆ ನಡೆದ ರೈತ ಹೋರಾಟದ ಕುರಿತಾಗಿದ್ದು, ಅದೀಗ ಇಂಗ್ಲಿಷಿನಲ್ಲಿ ಪ್ರಕಟವಾಗುತ್ತಿದೆ. 1790ರಷ್ಟು ಹಿಂದೆ ಕರ್ನಾಟದಲ್ಲಿ ಕೆಲಸ ಮಾಡಿದ್ದ ಲೆ.ಕ ಮೆಕೆಂಜಿಯ ಕುರಿತಾದ ಪುಸ್ತಕವನ್ನು ಕನ್ನಡ ವಿಶ್ವವಿದ್ಯಾಲಯ ಪ್ರಕಟಿಸುತ್ತಿದೆ.

'ವರ್ತಮಾನದ ಭಾರತ' ಹೆಸರಿನ ಪುಸ್ತಕ ಈ ವರ್ಷದ ಕೊನೆಯಲ್ಲಿ ಪ್ರಕಟವಾಗಲಿದೆ.

**ಅಬಿಮತ:** ನಿಮ್ಮೊಡನೆ ಮಾತಾಡಿ ತುಂಬ ಸಂತೋಷವಾಯಿತು.ಪ್ರಶಸ್ತಿಯ ನೆಪದಲ್ಲಿ ಮುದುಡಿ ಕುಳಿತಿದ್ದ ಅನೇಕ ನೆನಪುಗಳು ಹೊರಬರುವಂತೆ ಮಾಡಿದ ನಿಮಗೆ ಧನ್ಯವಾದಗಳು. ◻

# ನಗೆಹನಿ

ಎಲ್ಲರಿಗೂ ತಿಳಿದ ಹಾಗೆ ದೆಹಲಿಯಲ್ಲಿ ದಕ್ಷಿಣ ಭಾರತದ ಚೆನ್ನೈ, ಕರ್ನಾಟಕ, ಕೇರಳ ಹಾಗೂ ಆಂಧ್ರಪ್ರದೇಶದ ವಾಸಿಗಳು ತಮ್ಮ ಕಛೇರಿಗಳಲ್ಲಿ ಕೆಲಸ ಮಾಡಿಕೊಂಡಿದ್ದಾರೆ. ಕೆಲವರಿಗೆ ದೆಹಲಿಯ ಹಿಂದಿ ಚೆನ್ನಾಗಿ ತಿಳಿದ್ದಿದ್ದರೆ ಎಷ್ಟೋ ಜನರಿಗೆ ಪಾಪ, ಹಿಂದಿ ಅಷ್ಟು ಚೆನ್ನಾಗಿ ಬರುವುದಿಲ್ಲ. ಇಂತಹ ಪರಿಸ್ಥಿತಿಯಲ್ಲಿ ನನ್ನ ಜೊತೆ ಕೆಲಸ ಮಾಡಿಕೊಂಡಿರುವ ಸ್ವಾಮಿ ನಾಥನ್ (ಹೆಸರು ಬದಲಾಯಿಸಿದೆ) ಒಬ್ಬರು. ಸ್ವಾಮಿ ನಾಥನ್‌ಗೆ ಹಿಂದಿ ಸ್ವಲ್ಪವೂ ಬರುತ್ತಿರಲಿಲ್ಲ. ಆದರೂ ಹೇಗೊ ಪಾಪಾ, ಮಾತನಾಡಿ ತನ್ನ ಜೀವನವನ್ನು ಹಿಂಸೆಯಿಂದ ನಡೆಸಿಕೊಂಡಿದ್ದ.

ಆತನ ಜೊತೆ ಹಿಂದಿ ಮಾತನಾಡುವುದೇ ದೆಹಲಿಯ ಜನಗಳಿಗೊಂದು ತಮಾಷೆ. ಸುಮಾರು ಆರು–ಏಳು ತಿಂಗಳು ಹಾಗೂ ಹೀಗು ಜರುಗಿದವು. ಒಂದು ದಿನ ನಾನು ಮತ್ತು ನನ್ನ ದೆಹಲಿಯ ಸ್ನೇಹಿತರು ಒಂದು ಮೀಟಿಂಗ್ ಮಾಡುತ್ತಿದ್ದಾಗ ಸ್ವಾಮಿ ನಾಥನ್ ಸಹ ಹಾಜರಿದ್ದ. ಆದರೆ ಸ್ವಾಮಿನಾಥನ್ ಹಿಂದಿ ಭಾಷೆಯಲ್ಲಿ ನಡೆಯುತ್ತಿದ್ದ ಸಂಭಾಷಣೆಯಲ್ಲಿ ಮೂಖನಂತೆ ಎಲ್ಲರ ಮುಖ ನೋಡುತ್ತಿದ್ದ. ಇದನ್ನು ಗಮನಿಸಿದ ನನಗೆ, ಸ್ವಾಮಿ ನಾಥನ್ ಇನ್ನೂ ಹಿಂದಿ ಮಾತನಾಡಲು ಪಡುತ್ತಿದ್ದ ಕಷ್ಟದ ಅರಿವಾದಾಗ, ನನ್ನ ಮತ್ತು ಸ್ವಾಮಿನಾಥನ್ ನಡುವೆ ನಡೆದ ಸಂಭಾಷಣೆ ಈ ರೀತಿ ಇತ್ತು.

ನಾನು: ವಾಟ್ ಸ್ವಾಮಿನಾಥನ್, ಯು ಸ್ಟಿಲ್ ಕೆನಾಟ್ ಸ್ಪೀಕ್ ಹಿಂದಿ?

ಸ್ವಾಮಿ ನಾಥನ್: ಎಸ್ ಸಾರ್..ಅ ಯಾಮ್ ಟ್ರೈಯಿಂಗ್ ಟು ಲರ್ನ್ ಹಿಂದಿ ಸಾರ್..

ನಾನು: ಹೌ ಮೆನಿ ಮಂತ್ಸ್ ಯು ಹೇವ್ ಕಂಪ್ಲೀಟೆಡ್ ಇನ್ ಡೆಲ್ಲಿ?

ಸ್ವಾಮಿ ನಾಥನ್ : ಅರೌಂಡ್ ಸಿಕ್ಸ್ ಮಂತ್ಸ್ ಸಾರ್..

ನಾನು : ಹೇವ್ ಯು ಸೀನ್ ಎನಿ ಹಿಂದಿ ಮೂವಿ, ಇನ್ ಡೆಲ್ಲಿ, ಸೋ ಫಾರ್?

ಸ್ವಾಮಿ ನಾಥನ್ : ಎಸ್. ಸಾರ್ ಎಸ್ ಸಾರ್. . ಒನ್ ಹಿಂದೀ ಮೂವೀ ಐ ಹೇವ್ ಸೀನ್ ಸಾರ್...

ನಾನು: ವಿಚ್ ಹಿಂದಿ ಮೂವಿ ಯು ಹೇವ್ ಸೀನ್?

ಸ್ವಾಮಿ ನಾಥನ್: ಮೊಂಬತ್ತಿ ಸಾರ್.

ಎಲ್ಲಾ: ಆಶ್ಚರ್ಯದಿಂದ ಮೊಂಬತ್ತಿ ಮೊಂಬತ್ತಿ

ನಾವೆಲ್ಲ ಆಶ್ಚರ್ಯಕರವಾಗಿ ಕೇಳಿದೆವು...

ಸ್ವಾಮಿ ನಾಥನ್: ಎಸ್ ಸಾರ್. ಮೊಂಬತ್ತಿ... ಸಾರ್..

ನಾನು (ಇತರರೊಡನೆ): ಕ್ಯಾ ಯಾರ್.. ಮೊಂಬತ್ತಿ ಕೆ ನಾಮ್ ಸೇ ಕೋಯಿ ಮೂವಿ ಹೇ ಹಿಂದಿ ಮೇ?

ಎಲ್ಲಾ: ಪತಾ ನಹೀ ಸಾರ್. ಹಮ್ ತೋ ಪೆಹಲೀ ಬಾರ್ ನಾಮ್ ಸುನೆ ಹೇ....

ನಾನು: ವಿಚ್ ಈಸ್ ದಟ್ ಮೂವೀ ಸ್ವಾಮಿ ನಾಥನ್?

ಸ್ವಾಮಿ ನಾಥನ್: ಸಾರ್. ಮೊಂಬತ್ತಿ ಸಾರ್... ಅಮಿತಾಭ್ ಬಚ್ಚನ್, ಐಶ್ವರ್ಯ ರಾಯ್ ಶಾರೂಖಾನ್...ಸಾರ್.. ಮೊಂಬತ್ತಿ ...ಸಾರ್...

ಆಗ ನಮಗೆ ಅರ್ಥವಾಯಿತು ಅದು ಮೊಂಬತ್ತಿಯಲ್ಲ ..ಮೊಹೋಬತೇ ಅಂತಾ...◻

*ವೀಣೇಶ್*

# ದೆಹಲಿ ಕರ್ನಾಟಕ ಸಂಘದ ವಾರ್ಷಿಕ ಕ್ರಿಕೆಟ್ ಪಂದ್ಯಾವಳಿ





ದೆಹಲಿ ಕರ್ನಾಟಕ ಸಂಘದ ಕ್ರಿಕೆಟ್ ಪಂದ್ಯಾವಳಿಯನ್ನು ತಾಲ್ಕತೋರ ಕ್ರಿಕೆಟ್ ಮೈದಾನದಲ್ಲಿ ಮಾರ್ಚ್ 26 ಶನಿವಾರ ಮತ್ತು 27 ಭಾನುವಾರ ಎರಡು ದಿನಗಳು ಆಯೋಜಿಸಲಾಗಿತ್ತು. ಮಾನ್ಯ ಶ್ರೀ ಬಿ. ಎಲ್. ಸುರೇಶ್, ಉಪ ಪೊಲೀಸ್ ಆಯುಕ್ತರು, ಭ್ರಷ್ಟಾಚಾರ ನಿಗ್ರಹ ದಳ, ನವದೆಹಲಿ ಅವರು ಉದ್ಘಾಟಿಸುವ ಮೂಲಕ ಪಂದ್ಯಾವಳಿ ಆರಂಭವಾಯಿತು.

ನಮ್ಮ ದೆಹಲಿ ಕನ್ನಡಿಗರ 15 ತಂಡಗಳು ಭಾಗವಹಿಸಿದ್ದವು. ಕನ್ನಡ ಸಿರಿ ದೆಹಲಿ, ಕನ್ನಡ ಸಿರಿ–ಎ, ಶಿವ ಸಾಯಿ ಗ್ರೂಪ್–ಎ, ಶಿವ ಸಾಯಿ ಗ್ರೂಪ್–ಬಿ, ಕನ್ನಡ ಗೆಳೆಯರು, ಬಿಳಿಗಿರಿ ಬೈಸನ್, ಗಣೇಶ ಮಿತ್ರಮಂಡಳಿ, ಕರ್ನಾಟಕ ಭವನ, ಕರ್ನಾಟಕ ಕಮಾಡೋಂಸ್, ಹೊಯ್ಸಳ ಕ್ರಿಕೆಟರ್ಸ್ ಗುರುಗಾಂವ್, ನಾಡಪ್ರಭು ಕೆಂಪೇಗೌಡ ಫೌಂಡೇಶನ್, ಸೌತ್ ಕೆನರಾ ಕ್ರಿಕೆಟ್ ಕ್ಲಬ್, ಕರ್ನಾಟಕ ಅಡ್ವೋಕೇಟ್ಸ್, ದೆಹಲಿ ಕನ್ನಡ ಸ್ಕೂಲ್ ಮತ್ತು ಜನಕಪುರಿ ಕನ್ನಡ ಕೂಟ ಕ್ರಿಕೆಟ್ ಕ್ಲಬ್. ಎಲ್ಲಾ ತಂಡಗಳನ್ನು ಒಳಗೊಂಡ ಪಂದ್ಯಾವಳಿಯಲ್ಲಿ ನಡೆದ 13 ಪಂದ್ಯದಲ್ಲಿ ಕರ್ನಾಟಕ ಭವನ ಮತ್ತು ಸೌತ್ ಕೆನರಾ ಕ್ರಿಕೆಟ್ ಕ್ಲಬ್ ಫೈನಲ್ ಪ್ರವೇಶಿಸಿವೆ. ಈ ಪಂದ್ಯಾವಳಿಯಲ್ಲಿ ಕ್ರೀಡಾ ಸ್ಪೂರ್ತಿಯನ್ನು ತೋರಿ ಸ್ನೇಹಪೂರ್ವಕವಾಗಿ ಆಟವಾಡಿದ ಆಟಗಾರರಿಗೆ ಮತ್ತು 350ಕ್ಕೂ ಹೆಚ್ಚು ಪ್ರೇಕ್ಷಕರು ಬಂದು ಆಟಗಾರರಿಗೆ ಪ್ರೋತ್ಸಾಹಿಸಿದ ದೆಹಲಿ ಕನ್ನಡಿಗರಿಗೆ ಧನ್ಯವಾದಗಳು.

26.03.2022ರಂದು ಮೊದಲ ಪಂದ್ಯವು ಗಣೇಶ ಮಿತ್ರ ಮಂಡಳಿ ಮತ್ತು ಕನ್ನಡ ಸಿರಿ ದೆಹಲಿ ತಂಡಗಳ ನಡುವೆ ನಡೆಯಿತು. ಮೊದಲು ಬ್ಯಾಟಿಂಗ್ ಮಾಡಿದ ಕನ್ನಡ ಸಿರಿ ದೆಹಲಿ ತಂಡವು 214ರನ್ ಗಳನ್ನು ಒಟ್ಟು ಗೂಡಿಸಿತು. ಗಣೇಶ ಮಿತ್ರ ಮಂಡಳಿಯು ಈ ಗುರಿಯನ್ನು ಮುಟ್ಟುವಲ್ಲಿ ವಿಫಲವಾಯಿತು. ಅತ್ಯಧಿಕ 120 ರನ್ ಗಳಿಸಿದ ಕನ್ನಡ ಸಿರಿ ದೆಹಲಿ ತಂಡದ ಬಿ.ಎಲ್. ಬಿರಾದಾರ ಅವರು ಪಂದ್ಯ ಪುರುಷೋತ್ತಮರಾದರು.

ಎರಡನೇ ಪಂದ್ಯವು ಬಿಳಿಗಿರಿ ಬೈಸನ್ ಮತ್ತು ಹೊಯ್ಸಳ ಕ್ರಿಕೆಟರ್ಸ್ ಗುರುಗಾಂವ್ ತಂಡಗಳ ನಡುವೆ ನಡೆಯಿತು. ಮೊದಲು ಬ್ಯಾಟಿಂಗ್ ಮಾಡಿದ ಹೊಯ್ಸಳ ಕ್ರಿಕೆಟ್ ತಂಡವು 12 ಓವರ್ ಗಳಲ್ಲಿ 96 ರನ್ ಗಳನ್ನು ಗಳಿಸಿತು. ಬಿಳಿಗಿರಿ ಬೈಸನ್ 12 ಓವರ್ ಗಳಲ್ಲಿ ಈ ಗುರಿಯನ್ನು ಮುಟ್ಟುವಲ್ಲಿ ವಿಫಲವಾಯಿತು. ಹೊಯ್ಸಳ ಕ್ರಿಕೆಟರ್ಸ್ ಗುರುಗಾಂವ್ ತಂಡವು 42 ರನ್‌ಗಳಿಂದ ಜಯಗಳಿಸಿದರು. ಅತ್ಯುತ್ತಮ ಬೌಲಿಂಗ್ ಪ್ರದರ್ಶನ ನೀಡಿದ ಸಂತೋಷ ಜೆ. ಅವರು ಪಂದ್ಯ ಪುರುಷೋತ್ತಮರಾದರು.

ಮೂರನೇ ಪಂದ್ಯವು ಕನ್ನಡ ಗೆಳೆಯರು ಮತ್ತು ಕರ್ನಾಟಕ ಅಡ್ವೋಕೇಟ್ಸ್ ನಡುವೆ ನಡೆಯಿತು. ಮೊದಲು ಬ್ಯಾಟಿಂಗ್ ಮಾಡಿದ ಅಡ್ವೋಕೇಟ್ಸ್ ತಂಡವು 12 ಓವರ್‌ಗಳಲ್ಲಿ ಕನ್ನಡ ಗೆಳೆಯರು ತಂಡಕ್ಕೆ 84 ರನ್ ಗಳ ಗುರಿಯನ್ನು ನೀಡಿತು. ಕನ್ನಡ ಗೆಳೆಯರು ತಂಡವು 9 ವಿಕೆಟ್‌ಗಳಿಂದ ಜಯಗಳಿಸಿತು. ಅತ್ಯುತ್ತಮ ಬ್ಯಾಟಿಂಗ್ ಪ್ರದರ್ಶನ ನೀಡಿದ ಮಹಾದೇವ್ ಅವರು ಪಂದ್ಯ ಪುರುಷೋತ್ತಮರಾದರು.

ನಾಲ್ಕನೇ ಪಂದ್ಯವು ಜನಕಪುರಿ ಕನ್ನಡ ಕೂಟ ಕ್ರಿಕೆಟ್ ಕ್ಲಬ್ ಮತ್ತು ಕರ್ನಾಟಕ ಕಮಾಂಡೋಸ್ ತಂಡಗಳ ನಡುವೆ ನಡೆಯಿತು. ಕರ್ನಾಟಕ ಕಮಾಂಡೋಸ್ 7 ವಿಕೆಟ್‌ಗಳಿಂದ ಜಯಗಳಿಸಿತು. ಕರ್ನಾಟಕ ಕಮಾಂಡೋಸ್ ತಂಡದ ವಿನೋದ್ ಕೈಕಾಡೆ ಅವರು ಪಂದ್ಯ ಪುರುಷೋತ್ತಮರೆನಿಸಿಕೊಂಡರು.

ಐದನೇ ಪಂದ್ಯವು ಕರ್ನಾಟಕ ಭವನ ಮತ್ತು ಶಿವಸಾಯಿ ಗ್ರೂಪ್ (ಟೀಮ್–ಎ) ತಂಡಗಳ ನಡುವೆ ನಡೆಯಿತು. ಟಾಸ್ ಗೆದ್ದ ಕರ್ನಾಟಕ ಭವನ ತಂಡವು ಫೀಲ್ಡಿಂಗ್ ಆಯ್ಕೆ ಮಾಡಿಕೊಂಡಿತು. ಕರ್ನಾಟಕ ಭವನ ತಂಡವು 9 ವಿಕೆಟ್ ಗಳಿಂದ ಜಯ ಗಳಿಸಿತು. 48 ರನ್ ಗಳಿಸಿದ ಕಳಿಂಗಪ್ಪ ದೊಡ್ಡಮಣಿ ಅವರು ಪಂದ್ಯ ಪುರುಷೋತ್ತಮರೆನಿಸಿಕೊಂಡರು.

ಆರನೇ ಪಂದ್ಯವು ದೆಹಲಿ ಕನ್ನಡ ಸ್ಕೂಲ್ ಮತ್ತು ಸೌತ್ ಕೆನರಾ ಕ್ರಿಕೆಟ್ ಕ್ಲಬ್ ತಂಡಗಳ ನಡುವೆ ನಡೆಯಿತು. ಮೊದಲು ಬ್ಯಾಟಿಂಗ್ ಮಾಡಿದ ಸೌತ್ ಕೆನರಾ ಕ್ರಿಕೆಟ್ ಕ್ಲಬ್ ತಂಡವು 12 ಓವರ್‌ಗಳಲ್ಲಿ ಐದು ವಿಕೆಟ್‌ಗಳ ನಷ್ಟಕ್ಕೆ 151 ರನ್ ಗಳನ್ನು ಗಳಿಸಿತು. ದೆಹಲಿ ಕನ್ನಡ ಸ್ಕೂಲ್ ಈ ಮೊತ್ತವನ್ನು ಸಾಧಿಸುವಲ್ಲಿ ವಿಫಲವಾಯಿತು. ಸೌತ್ ಕೆನರಾ ಕ್ರಿಕೆಟ್ ಕ್ಲಬ್ ನ ಮಂಜೇಶ್ ಅವರು ಪಂದ್ಯ ಪುರುಷೋತ್ತಮರಾದರು.

ಏಳನೇ ಪಂದ್ಯವು ಶಿವಸಾಯಿ ಗ್ರೂಪ್ (ಟೀಮ್–ಬಿ) ಮತ್ತು ನಾಡಪ್ರಭು ಕೆಂಪೇಗೌಡ ಫೌಂಡೇಶನ್ ತಂಡಗಳ ನಡುವೆ ನಡಯಿತು. ಶಿವಸಾಯಿ ಗ್ರೂಪ್ (ಟೀಮ್–ಬಿ) ತಂಡವು 12 ಓವರ್‌ಗಳಲ್ಲಿ 8 ವಿಕಟ್ ಗಳ ನಷ್ಟಕ್ಕೆ 99 ರನ್ ಗಳನ್ನು ಗಳಿಸಿತು. ನಾಡಪ್ರಭು ಕೆಂಪೇಗೌಡ ಫೌಂಡೇಶನ್ ತಂಡವು ಈ ಮೊತ್ತವನ್ನು ಬಹಳ ಸುಲಭವಾಗಿ ಬೆನ್ನಟ್ಟಿತು. ಹರೀಶ್ ಅವರು ಪಂದ್ಯ ಪುರುಷೋತ್ತಮರಾದರು.

27.03.2022 ರಂದು ನಡೆದ ಮೊದಲ ಕ್ವಾರ್ಟರ್ ಫೈನಲ್ ಕನ್ನಡ ಸಿರಿ ದೆಹಲಿ ಮತ್ತು ಕನ್ನಡ ಗೆಳೆಯರು ತಂಡಗಳ ನಡುವೆ ನಡೆಯಿತು. ಕನ್ನಡ ಸಿರಿ ದೆಹಲಿ ತಂಡವು 10 ಓವರ್ ಗಳಲ್ಲಿ 7 ವಿಕೆಟ್ ಗಳ ನಷ್ಟಕ್ಕೆ 92 ರನ್ ಗಳಿಸಿತು. ಕನ್ನಡ ಗೆಳೆಯರು ತಂಡವು ಈ ಗುರಿಯನ್ನು ತಲುಪುವಲ್ಲಿ ವಿಫಲವಾಯಿತು. ಹುಲ್ಗೇಶ್ ಪಂದ್ಯ ಪುರುಷೋತ್ತರಾದರು. ಕನ್ನಡ ಸಿರಿ ದೆಹಲಿ ತಂಡವು ಸೆಮಿಫೈನಲ್ ತಲುಪಿತು.

ಎರಡನೇ ಕ್ವಾರ್ಟರ್ ಫೈನಲ್ ಕರ್ನಾಟಕ



ವಿನ್ನರ್– ಸೌತ್ ಕೆನರಾ ಕ್ರಿಕೆಟ್ ಕ್ಲಬ್ ತಂಡ



ರನ್ನರ್ ಅಪ್–ಕರ್ನಾಟಕ ಭವನ ತಂಡ

ಕಮಾಂಡೋಸ್ ಮತ್ತು ಹೊಯ್ಸಳ ಕ್ರಿಕೆಟರ್ಸ್ ಗುರುಗಾಂವ್ ತಂಡಗಳ ನಡುವೆ ನಡೆಯಿತು. ಮೊದಲು ಬ್ಯಾಟಿಂಗ್ ಮಾಡಿದ ಹೊಯ್ಸಳ ಕ್ರಿಕೆಟರ್ಸ್ ಗುರುಗಾಂವ್ ತಂಡವು 10 ಓವರ್ ಗಳಲ್ಲಿ 56 ರನ್ ಗಳನ್ನು ಗಳಿಸಿತು. ಕರ್ನಾಟಕ ಕಮಾಂಡೋಸ್ ತಂಡವು 9 ವಿಕೆಟ್‌ಗಳಿಂದ ಜಯ ಗಳಿಸಿತು. ವಿನೋದ್ ಕೈಕಾಡೆ ಪಂದ್ಯ ಪುರುಷೋತ್ತಮರಾದರು.

ಮೂರನೇ ಕ್ವಾರ್ಟರ್ ಫೈನಲ್ ಪಂದ್ಯವು ಕರ್ನಾಟಕ ಭವನ ಮತ್ತು ಕನ್ನಡ ಸಿರಿ (ಟೀಮ್–ಬಿ) ತಂಡಗಳ ನಡುವೆ ನಡೆಯಿತು. ಕನ್ನಡ ಸಿರಿ (ಟೀಮ್–ಬಿ) ತಂಡವು ಟಾಸ್ ಗೆದ್ದು ಫೀಲ್ಡಿಂಗ್ ಆಯ್ಕೆ ಮಾಡಿಕೊಂಡಿತು. ಮೊದಲು ಬ್ಯಾಟಿಂಗ್ ಮಾಡಿದ ಕರ್ನಾಟಕ ಭವನ ತಂಡವು 10 ಓವರ್ ಗಳಲ್ಲಿ 3 ವಿಕೆಟ್ ಕಳೆದುಕೊಂಡು 133 ರನ್ ಗಳಿಸಿತು. ಕನ್ನಡ ಸಿರಿ (ಟೀಮ್–ಬಿ) ತಂಡವು ಈ ಗುರಿ ಸಾಧಿಸುವಲ್ಲಿ ವಿಫಲವಾಯಿತು. ಕರ್ನಾಟಕ ಭವನದ ಜಗನ್ನಾಥ ಪೂಜಾರಿ ಪಂದ್ಯ ಪುರುಷೋತ್ತರಾದರು.

ನಾಲ್ಕನೇ ಕ್ವಾರ್ಟರ್ ಫೈನಲ್ ಪಂದ್ಯವು ನಾಡಪ್ರಭು ಕೆಂಪೇಗೌಡ ಫೌಂಡೇಷನ್ ಮತ್ತು ಸೌತ್ ಕೆನರಾ ಕ್ರಿಕೆಟ್ ಕ್ಲಬ್ ತಂಡಗಳ ನಡುವೆ ನಡೆಯಿತು. ನಾಡಪ್ರಭು ಕೆಂಪೇಗೌಡ ಫೌಂಡೇಷನ್ ತಂಡವು ಟಾಸ್ ಗೆದ್ದು ಫೀಲ್ಡಿಂಗ್ ಆಯ್ಕೆ ಮಾಡಿಕೊಂಡಿತು. ಮೊದಲು ಬ್ಯಾಟಿಂಗ್ ಮಾಡಿದ ಸೌತ್ ಕೆನರಾ ಕ್ರಿಕೆಟ್ ಕ್ಲಬ್ ತಂಡವು 10 ಓವರ್ ಗಳಲ್ಲಿ 6 ವಿಕೆಟ್ ಗಳ ನಷ್ಟಕ್ಕೆ 104 ರನ್ ಗಳಿಸಿತು. ಕೆಂಪೇಗೌಡ ಫೌಂಡೇಷನ್ ಈ ಗುರಿಯನ್ನು ಸಾಧಿಸುವಲ್ಲಿ ವಿಫಲವಾಯಿತು. ಶ್ರೀನಿಕೇತನ್ ಪಂದ್ಯ ಪುರುಷೋತ್ತಮರಾದರು.

ಮೊದಲ ಸೆಮಿಫೈನಲ್ ಪಂದ್ಯವು ಕನ್ನಡ ಸಿರಿ ದೆಹಲಿ ಮತ್ತು ಕರ್ನಾಟಕ ಭವನ ತಂಡಗಳ ನಡುವೆ ನಡೆಯಿತು. ಮೊದಲು ಬ್ಯಾಟಿಂಗ್ ಮಾಡಿದ ಕನ್ನಡ ಸಿರಿ ತಂಡವು 10 ಓವರ್ ಗಳಲ್ಲಿ 6 ವಿಕೆಟ್ ಗಳ ನಷ್ಟಕ್ಕೆ 80 ರನ್ ಗಳನ್ನು ಗಳಿಸಿತು. ಕರ್ನಾಟಕ ಭವನ ತಂಡವು ಈ ಮೊತ್ತವನ್ನು 8.5 ಓವರ್ ಗಳಲ್ಲಿ ಮುಟ್ಟುವಲ್ಲಿ ಸಫಲವಾಯಿತು. ಕರ್ನಾಟಕ ಭವನ ಮೂರು ವಿಕೆಟ್ ಗಳಿಂದ ಜಯಗಳಿಸಿ ಫೈನಲ್ ಹಂತವನ್ನು ಪ್ರವೇಶಿಸಿತು. ಆರ್. ಧರ್ಮರಾಜ್ ಪಂದ್ಯ ಪುರುಷೋತ್ತಮರಾದರು.

ಎರಡನೇ ಸೆಮಿಫೈನಲ್ ಕರ್ನಾಟಕ ಕಮಾಂಡೋಸ್ ಮತ್ತು ಸೌತ್ ಕೆನರಾ ಕ್ರಿಕೆಟ್ ಕ್ಲಬ್ ತಂಡಗಳ ನಡುವೆ ನಡೆಯಿತು. ಕರ್ನಾಟಕ ಕಮಾಂಡೋಸ್ ತಂಡವು 10 ಓವರ್‌ಗಳಲ್ಲಿ 8 ವಿಕೆಟ್‌ಗಳ ನಷ್ಟಕ್ಕೆ 60 ರನ್ ಗಳಿಸಿತು. ಸೌತ್ ಕೆನರಾ ಕ್ರಿಕೆಟ್ ಕ್ಲಬ್ ತಂಡವು ಈ ಗುರಿಯನ್ನು ಬೆನ್ನಟ್ಟುವಲ್ಲಿ ಸಫಲವಾಯಿತು. ಸಚಿತ್ ಶೆಟ್ಟಿ ಅವರು ಪಂದ್ಯ ಪುರುಷೋತ್ತಮರಾದರು. ಸೌತ್ ಕೆನರಾ ಕ್ರಿಕೆಟ್ ಕ್ಲಬ್ ತಂಡವು ಫೈನಲ್ ಹಂತವನ್ನು ಪ್ರವೇಶಿಸಿತು.

ಫೈನಲ್ ಪಂದ್ಯವು 02.04.2022 ರಂದು ಮಧ್ಯಾಹ್ನ 3 ಗಂಟೆಗೆ ಯುಗಾದಿ ಹಬ್ಬದ ದಿನ ದೆಹಲಿಯ ಡಿಟಿಇಎ ಕ್ರಿಕೆಟ್ ಮೈದಾನದಲ್ಲಿ ಸೌತ್ ಕೆನರಾ ಕ್ರಿಕೆಟ್ ಕ್ಲಬ್ ಮತ್ತು ಕರ್ನಾಟಕ ಭವನ ತಂಡದ ನಡುವೆ ಆರಂಭವಾಯಿತು ಕುತೂಹಲ ಘಟ್ಟದ ಈ ಪಂದ್ಯದಲ್ಲಿ ಸೌತ್ ಕೆನರಾ ಕ್ರಿಕೆಟ್ ಕ್ಲಬ್ ತಂಡವು ಟಾಸ್ ಗೆದ್ದು ಫೀಲ್ಡಿಂಗ್ ಆಯ್ದುಕೊಂಡು, ಕರ್ನಾಟಕ ಭವನ ತಂಡಕ್ಕೆ ಬ್ಯಾಟಿಂಗ್ ನೀಡಿತು. ಕರ್ನಾಟಕ ಭವನ ತಂಡವು ನಿಗದಿತ 15 ಒವರಿನಲ್ಲಿ ಒಂಭತ್ತು ವಿಕೆಟ್ ನಷ್ಟಕ್ಕೆ 76 ರನ್ ಗಳಿಸಿತು.

ಸೌತ್ ಕೆನರಾ ಕ್ರಿಕೆಟ್ ಕ್ಲಬ್ ತಂಡವು ತನ್ನ ಮೂರು ವಿಕೆಟ್ ಕಳೆದುಕೊಂಡು ನಿಗದಿತ ಗುರಿ ತಲುಪಿತು. ತಂಡದ ಮೂರನೇ ಕ್ರಮಾಂಕದ ಬ್ಯಾಟ್ಸಮನ್ ಆಗಿ ಕಣಕ್ಕಿಳಿದ ಮಂಜೇಶ್ ಅವರು ಎರಡು ಸಿಕ್ಸರ್, ಎರಡು ಬೌಂಡರಿಗಳ ನೆರವಿನಿಂದ ಅಜೇಯ 30 ರನ್‌ಗಳ ಕೊಡುಗೆ ನೀಡಿ, ಪಂದ್ಯ ಪುರುಷೋತ್ತಮರಾದರು.

ಕರ್ನಾಟಕ ಸಂಘದ ಅಧ್ಯಕ್ಷ ಸಿ.ಎಂ. ನಾಗರಾಜ್, ಪ್ರಧಾನ ಕಾರ್ಯದರ್ಶಿ ಆರ್. ರೇಣುಕುಮಾರ್, ಕ್ರೀಡಾ ಸಮಿತಿಯ ಅಧ್ಯಕ್ಷ ಡಾ. ಎಂ.ಎಸ್. ಶಶಿಕುಮಾರ್ , ಸಂಚಾಲಕರಾದ ಮಾಲಿನಿ ಪ್ರಹ್ಲಾದ್, ಸಂಘದ ಪದಾಧಿಕಾರಿಗಳು ಮತ್ತು ಕಾರ್ಯಕಾರಿ ಸಮಿತಿ ಸದಸ್ಯರ ಉಪಸ್ಥಿತಿಯಲ್ಲಿ ದೆಹಲಿ ಕರ್ನಾಟಕ ಸಂಘದ ಟ್ರೋಫಿಗಳನ್ನು ನೀಡಲಾಯಿತು. ಸಂಘದ ಅಧ್ಯಕ್ಷರು ಹಾಗೂ ಕಾರ್ಯದರ್ಶಿಗಳು ನೆರದಿದ್ದ ಕ್ರೀಡಾ ಅಭಿಮಾನಿಗಳು ಹಾಗೂ ಭಾಗವಹಿಸಿದ ಆಟಗಾರರಿಗೆ ಧನ್ಯವಾದ ತಿಳಿಸಿದರು ಸದಸ್ಯರಾದ ಸಂತೋಷ ಜೆ ಅವರು ಪ್ರತಿಭಾರಿ ಭಾಗವಹಿಸುತ್ತಿದ್ದ ಜೆ.ಎಸ್.ಎಸ್. ತಂಡ ಈ ಬಾರಿ ಕಾರಣಾಂತರದಿಂದ ಭಾಗವಹಿಸಲಿಲ್ಲ ಎಂದು ತಿಳಿಸಿ ಮುಂದಿನ ದಿನಗಳಲ್ಲಿ 20ಕ್ಕೂ ಹೆಚ್ಚು ತಂಡಗಳು ಭಾಗವಹಿಸಬೇಕು ಎಂದು ಹೇಳುವ ಮೂಲಕ ಧನ್ಯವಾದ ತಿಳಿಸಿದರು. ▢

***ಸಂತೋಷ ಜೆ.***

## ಆಗಾಗ್ಗೆ ಕಾಡುವ 'ಅಕವಿತೆ'ಯ ಪಂಕ್ತಿಗಳು

ಕೆಲವೊಮ್ಮೆ ಕಠೋರವಾಗಿ
ಕೆಲವೊಮ್ಮೆ ಮಧುರವಾಗಿ
ಉಳಿದಿವೆ ನೆನಪುಗಳು
ಮನದಾಳದಲ್ಲಿ !
ಅದೋ ಬರುತಲಿದೆ ಯುಗಾದಿ
ಆಗಲದು ಸಂತಸದ ಬುನಾದಿ!
**ಶು**ಭ್ರ ಕೇಜಿಯನೇರಿ ದಿನಕರನು
**ಭ**ರದಿಂದ ಬಂದು ಹಿಂದೆಂದೋ
**ಕೃ**ಷಿ ಮಾಡಿದ ಹದವಾದ
**ತ**ರುಲತೆಗಳು ನಳನಳಿಸುತಿರೆ ನವವರುಷ
**ನಾ**ಮೆ ಸಂವತ್ಸರದ ಕಹಳೆ ಗೂಂಜಿಡುತ್ತಿರಲು
**ಮ**ನವು ಮುದಗೊಂಡು
**ಸಂ**ತೋಷ ಸಮಾಧಾನ ಸಹನೆ ಸಂತೃಪ್ತಿಯಿಂದ
**ವ**ರದಾಯಕ ವಿನಾಯಕನನ್ನು ಪ್ರಾರ್ಥಿಸುತ್ತಾ ಉ
**ತ್ಸ**ವೋತ್ಸಾಹದಿಂದ ಧರ್ಮೋ
**ರ**ಕ್ಷತಿ ರಕ್ಷಿತಿಹ ಎಂದು ಹಾಡುತ್ತಾ
ಸಿಹಿ ಕಹಿಗಳನ್ನು ಆಸ್ವಾದಿಸುತ್ತಾ
ಬಾಳು ಬೆಳಗಲಿ ಬದುಕು ಹಸನಾಗಲಿ
ಎಂದು ಶುಭ ಹಾರೈಕೆಗಳನ್ನು ಬೇಡುತ್ತಾ
ಅನಾದಿ ಕಾಲದಿಂದಲೂ ಆಚರಿಸುತ್ತಿರುವ
ನವ ವರುಷವನ್ನು ಹರುಷದಿಂದ ಸ್ವಾಗತಿಸುವ
ಆಸೆ ನನಗೆ,

*ಡಾ. ಅಹಲ್ಯಾ ಚಿಂತಾಮಣಿ ಮತ್ತು ಪರಿವಾರ*

## ವಸಂತ ಸಂಭ್ರಮ

ಮೂಡಣ ತೆರೆದು ನೇಸರ ನಗುತ
ಮುಂಜಾವು ಮೂಡಿ ಹುಂಜಾವು ಕೂಗುತ
ಬೆಳ್ಳಿಯ ಬೆಳಕಿಗೆ ಮೊಗ್ಗೆಲ್ಲ ಅರಳುತ
ಮಾವಿನ ಮರದಾಗೆ ಕೋಗಿಲೆ ಹಾಡುತ
ಮರ-ಗಿಡಕೆಲ್ಲ ಚಿಗುರುಡುಗೆ ತೊಡಿಸುತ
ಹೊಸ ವರುಷವ ತಂದಾ ವಸಂತ

ಮಾವಿನ ಹಸಿರು ಬಾಗಿಲಿಗೆ ತೋರಣವು
ಬಣ್ಣದ ರಂಗೋಲಿ ಅಂಗಳಕೆ
ಚೆಂದಾದ ಚಿತ್ತಾರವು
ಬೇವು-ಬೆಲ್ಲದ ರುಚಿ ಜೀವನದ ಪಾಠವು
ಬೆಲ್ಲದ ಹೂರಣ ಹಬ್ಬದ ಭೋಜನವು
ವರುಷ ಉರುಳಿ ಹೊಸ ವರ್ಷದ ಆರಂಭವು
ಉಗಾದಿ ತರುವ ಹೊಸ ವರ್ಷದ ಸಂಭ್ರಮವು

*ಹರಿಪ್ರಿಯ ಎಸ್*

## ಒಬ್ಬನೇ ಸೂರ್ಯನಿಗೆ

ವರುಷಕೊಮ್ಮೆ ನಿನ್ನ ಸುತ್ತು । ಲೋಕಕೆಲ್ಲಾ ಶಕ್ತಿ ಬಿತ್ತು ।
ಮರಳಿ ಮರಳಿ ನಿನ್ನಾ ಸುತ್ತು । ನನಗೊಂದು ಲೆಕ್ಕ ಬಂತು ।
ಎಷ್ಟು ಹೇಳೋಲ್ಲಾ ।

ನಿನ್ನಂತ ನೀನು ಒಬ್ಬನೇನು । ತಜ್ಞರ ಲೆಕ್ಕ ಬೇರೆಯೇನು ।
ನೂರು ಸಾವಿರ ಚುಕ್ಕೆಭಾನು । ಭಾನು ತುಂಬಿತಲ್ಲಾ ಭಾನು
ಹೌದೋಗೊತ್ತಿಲ್ಲಾ ।

ಸೂರ್ಯ ನೀನು ಸ್ವಯಂಪ್ರಭನು । ನೀನೆ ಜಗಕೆ ಶಕ್ತಿ ಪ್ರಭುವು
ಉಳಿದ ಸೂರ್ಯರ ಲೆಕ್ಕವೇಕೆ । ನೀನೇ ಮಾತ್ರ ನಮ್ಮ ಹರವು
ಮತ್ತೆ ಗೊತ್ತಿಲ್ಲಾ ।

ವರುಷಕ್ಕೊಮ್ಮೆ ಸ್ತುತಿ ಬರುವಿ
ದಣಿಯದೇನೋ ಬಹಳಾ ತಿರುವಿ ।
ಮೂಡು ಕಡಲ ಪಡುವ ಕಡಲು ।
ಕಲ್ಪನೆಗಳಲಿ ಸುತ್ತೋ ತೆವಲು ।
ಗತಿಯ ನೀನು ಕಡಿಮೆ ಮಾಡು ।
ದಣಿವ ನೀನು ಅರಗಿಕೊಡು ।
ಯಾಕೆ ಹೇಳೋಲ್ಲ ।

*ರಾಜೇಶ್ವರಿ ಭಟ್*

## ಓ ಹೆಣ್ಣೇ ನಿನಗೆ ಸಪ್ರೇಮ ವಂದನೆ

ಮಹಿಳಾ ದಿನಾಚರಣೆ-ಪ್ರಕೃತಿಯ ಆಚರಣೆ
ಮಹಿಳೆಯ ಕಾಣದ ಜಗವಿಲ್ಲ
ಮಹಿಳೆಯನರಿಯದ ಮನಸಿಲ್ಲ
ತಾಯಿ-ತಂಗಿ ಸ್ನೇಹಿತೆಯಾಗಿ
ಮಡದಿ-ಅಕ್ಕ-ಗೃಹಿಣಿಯಾಗಿ
ಹಲವು ಮುಖದ ರೂಪದರ್ಶಿಯಾಗಿ
ಪುರುಷರ ಮನಗೆದ್ದ-ಮಹಿಳೆ

ರವಿ ಬೆಳಗುವ ಜಗದ ಶಶಿಯಂತೆ ನೀನು
ನೀ ಬೆಳಗುವ ಮನೆ ಮನಕೆ ಸ್ವಯಂ
ರವಿಯೇ ನೀನು
ಪ್ರಖರತೆಯ ಪ್ರತಿಬಿಂಬ ಶಶಿಯಂತೆ ನೀನು
ನಾ ಕಂಡ ಶಶಿಯಂದದ ಪ್ರಕೃತಿಯೇ ನೀನು
ಪ್ರಕೃತಿಯ ಪ್ರತಿಬಿಂಬ
ಓ ಹೆಣ್ಣೇ

ನಿನಗೆ ಸಪ್ರೇಮ ವಂದನೆ
ನಿನಗೆ ನನ್ನ ಗೌರವ ಸಮರ್ಪಣೆ
ನಿನಗೆ ಗೌರವ ನೀಡುವುದೇ
ನಿಜವಾದ ಮಹಿಳಾ ದಿನಾಚರಣೆ

*ಆರ್. ರೇಣುಕುಮಾರ್*

## ಮತ್ತೆ ಮರಳಿದೆ ಬದುಕು

ಕಳೆದೆವು ನಿರ್ಬಂಧದ ದಿನಗಳು
ತೆರೆದಿದೆ ಮುಚ್ಚಿದ ಕದಗಳು
ಬಿದಿಗೆ ಇಳಿದಿವೆ ಕಾರು-ಬಸ್ಸುಗಳು
ಮೊಳಗಿದೆ ಗುಡಿಯ ಘಂಟೆ ಸದ್ದುಗಳು
ಮತ್ತೆ ಮರಳಿದೆ ಮಾನವ ಬದುಕು

ಓಡಿವೆ ಕಾಡಿದ ಕರೋನಾ ವೈರಾಣುಗಳು
ಚಿಗುರಿವೆ ಮತ್ತೆ ಕಳೆದ ಕನಸುಗಳ
ಗರಿಗೆದರಿವೆ ಹೊಸ ಬರವಸೆಗಳು
ಬಂಧಿ-ಖಾನೆಯಿಂದ
ಬಿಡುಗಡೆಗೊಂಡಿವೆ ನಿರೀಕ್ಷೆಗಳು
ಮತ್ತೆ ಮರಳಿದೆ ಮಾನವ ಬದುಕು

ವೈರಾಣು ವೈರಿಯು ಕಲಿಸಿದ ಪಾಠ
ಜಗವು ಸಕಲ ಜೀವರಾಶಿಗಳ ಕೂಟ
ನಿಸರ್ಗವ ಕಾಡಿದರೆ ಜೀವಕ್ಕೆ ಕಾಟ
ಪರಿಸರದಿಂದ ಉಳಿಯಲಿ ಎಲ್ಲಾ ಪ್ರಾಣ
ಮತ್ತೆ ಮರಳಿದೆ ಮಾನವ ಬದುಕು

*ಅಶ್ವಿನಿ ಬಿ.ಎಸ್.*

## ಹೆತ್ತವರು...

ಬಡತನದ ಬೇಗುದಿಯಲ್ಲಿ ಬೆಂದು
ಬಸವಳಿದರು ತುತ್ತು ಅನ್ನವ
ಹೊರೆಯಲು ಹೊರೆ ತುಂಬಿಸುವ ಸಂಕಟ
ಪಟ್ಟ ಪಡಿಪಾಟಲು ಅಷ್ಟಿಷ್ಟಲ್ಲ...
ಅಪ್ಪನದ್ದು ಹರಿದ ಅಂಗಿ
ತೂತು ಬಿದ್ದು ಮಾಸಿದ ಧೋತರ
ಬಿರು ಬಿಸಲಿಗೆ ಹೊಂದಿಕೊಂಡ
ಕಾಲುಗಳ ಅಪಾರ ನೋವು
ಎಲ್ಲವೂ ಸಹಿಸುತ ಅನುದಿನವು
ಭರವಸೆಯ ಹೊಸ ಬೆಳಕಿನ ಹುಡುಕಾಟದಲ್ಲಿ
ಸವೆಸಿದ ಸಂವತ್ಸರ ಹಲವು.

ಬದುಕಿಗೆ ಬರಲೇ ಇಲ್ಲ ಸುಖದ ಗಳಿಗೆ,
ಸವಿಯೂಟ ಉಣಿಸಲಿಲ್ಲ ತನ್ನ ಕಂದಮ್ಮಳಿಗೆ...
ಇನ್ನೂ...ಅವ್ವ ತನ್ನ ಕುಡಿಗಳು ಅರೆ ಹೊಟ್ಟೆಯುಂಡು
ನಿದ್ರಿಸುವದ ನೋಡಿ
ಮಮ್ಮಲ ಮರುಗಿ ಮರುಕಪಟ್ಟವಳು
ಎಷ್ಟೋ ಉಪವಾಸ ಗೈದವಳೆಂದು
ಲೆಕ್ಕವಿಟ್ಟವರಾರು ತಿಳಿಯದು
ಒದ್ದಾಡುವ ಮನಸು ಮನಸನ್ನೆ
ಪ್ರಶ್ನಿಸುತಾ ಒಳಗೊಳಗೆ ಕೊರಗಿದರು
ಮಕ್ಕಳ ಮುಖವ ನೋಡಿ ನಸುನಗುತಾ
ಕಷ್ಟದೊಳಗೂ ಸುಖವ ಕಂಡವರು.

ತನಗೇ ತಾನು ಹಿಡಿ ಶಾಪ ಹಾಕುತ
ನನ್ನ ಹೊಟ್ಟೆಯಲ್ಲಿ ಹುಟ್ಟಬಾರದಿತ್ತು ನೀವು ಎನ್ನುತ
ಎಂದೊಮ್ಮೆ ಕಣ್ಣಾಲೆಯಲ್ಲಿ ನೀರು
ತುಂಬಿಕೊಂಡರೂ ಕಡೆಗಣಿಸಿದವಳು?
ದುಃಖಪಟ್ಟು ಕಣ್ಣೀರಗರೆದವಳು...
ಯಾಕೀ ಕಡು ಕಷ್ಟದ ಬದುಕೆಂದು
ತನ್ನಲ್ಲಿಯೇ ಮಮ್ಮಲ ಮರುಗಿದವಳು
ತೋರಿಕೊಂಡರೆ ಅಪಹಾಸ್ಯ ಮಾಡಿಯಾರೆಂಬ
ಸ್ವಾಭಿಮಾನಿ
ಅಪ್ಪನಿಗೆ ಹೆಗಲುಕೊಟ್ಟು
ಸಂಸಾರದ ನೊಗ ಹೊತ್ತು ಸಾಗಿಸಿಹಳು
ಅರ್ಧಾಂಗಿ ಹೊರೆ ನಿಭಾಯಿಸಿದವಳು
ಹಗಲಿರುಳು ದುಡಿದು
ದಣಿವಿನ ಖುಷಿಪಟ್ಟವಳು
ಪಟ್ಟ ಕಷ್ಟ ಅಷ್ಟಿಷ್ಟಲ್ಲ ಎಂದು ಕೊರಗುವ
ಅವರಿಬ್ಬರಿಗೂ ಸುಖದ ಕನಸಿನ
ಬಿಸಿಲ್ಗುದುರೆ ಕೊನೆಗೂ ಕೈಗೆ ಸಿಗಲೇ ಇಲ್ಲ...

***ಅಮರೇಶ***

# ಯುಗಾದಿ ಹಬ್ಬದ ಆಚರಣೆ ಮತ್ತು ಮಹತ್ವ



ಹಬ್ಬಗಳಲ್ಲಿ ಶ್ರೇಷ್ಠವಾದ, ಪ್ರಸಿದ್ಧವಾದ ಯುಗಾದಿ ಹಬ್ಬ ಚೈತ್ರ ಮಾಸದ ಶುಕ್ಲ ಪಕ್ಷದ ಪಾಡ್ಯದಂದು ಬರುತ್ತದೆ.

ಯುಗಾದಿ ಹಬ್ಬವು ಹಿಂದೂಗಳ ದೃಷ್ಟಿಯಲ್ಲಿ ವರ್ಷಾರಂಭದ ಪವಿತ್ರ ದಿನ. ಯುಗಾದಿ ಎಂಬ ಶಬ್ದ ಸಂಸ್ಕೃತದ ಯುಗ ಮತ್ತು ಆದಿ ಎಂಬ ಎರಡು ಶಬ್ದಗಳಿಂದ ಕೂಡಿದೆ.

ಯುಗವೆಂದರೆ–ಸೃಷ್ಟಿಯ ಕಾಲಮಾನ, ಅರ್ಥಾತ್ ಹೊಸ ವರ್ಷ. ಆದಿ ಎಂದರೆ ಆರಂಭ. ಯುಗಾದಿ ಹಬ್ಬವು ಪೌರಾಣಿಕ ಹಾಗೂ ಐತಿಹಾಸಿಕ ವಿಶೇಷತೆಗಳ ದಿನವಾಗಿದೆ.

ಇದು ಬ್ರಹ್ಮದೇವನ ಸೃಷ್ಟಿಯ ದಿನ. ಅಂದರೆ ಚೈತ್ರ ಶುದ್ಧ ಪಾಡ್ಯದಂದು ಸುರ್ಯೋದಯ ವಾಗುತ್ತಿರುವಾಗ ಬ್ರಹ್ಮನು ವಿಶ್ವವನ್ನು ಸೃಷ್ಟಿಸಿದ ನೆಂದೂ, ಅಂದಿನಿಂದ ಕಾಲಗಣನೆಗಾಗಿ–ಗ್ರಹ, ನಕ್ಷತ್ರ,ಮಾಸ, ಋತು ವರ್ಷ ಇವುಗಳನ್ನು ಏರ್ಪಡಿಸಿದನೆಂದೂ ಪುರಾಣಗಳಲ್ಲಿ ಉಲ್ಲೇಖವಿದೆ. ಪಂಚಾಂಗಗಳು ಕೂಡ ಇದನ್ನೇ ಹೇಳುತ್ತವೆ.

ಎಲ್ಲಾ ಶಾಸ್ತ್ರ ಗ್ರಂಥಗಳಲ್ಲಿ ಯುಗಾದಿಯನ್ನು ಕುರಿತಾಗಿ–ಶ್ರೀರಾಮನು, ರಾವಣನನ್ನು ಸಂಹರಿಸಿ ಬಂದಾಗ ಅಯೋಧ್ಯೆಯಲ್ಲಿ ಶ್ರೀರಾಮಚಂದ್ರನ ಪಟ್ಟಾಭಿಷೇಕವಾದ ದಿನ. ಅಂದರೆ ಪಂಚಾಂಗ ಮತ್ತು ಶಾಸ್ತ್ರಧ ಪ್ರಕಾರ–ವರ್ಷದ ಶುಭ ದಿನವಾದ ಯುಗಾದಿ ಮಂಗಳ ಕಾರ್ಯವನ್ನು ಮಾಡಲು ಯೋಗ್ಯ ದಿನವೆಂದು ಹೇಳುವರು.

ಯುಗಾದಿಯನ್ನು ಚಂದ್ರಮಾನ–ಸೌರಮಾನ ಎಂದು ಎರಡು ಬಗೆಯಲ್ಲಿ ಆಚರಿಸುವ ಪದ್ಧತಿ ಇದೆ. ಚಂದ್ರನ ಚಲನೆಯನ್ನು ಗುರುತಿಸಿ ಮಾಡುವ ಪದ್ಧತಿಗೆ ಚಂದ್ರಮಾನ ಯುಗಾದಿ ಎನ್ನುವರು. ಹಾಗೆ ಸೂರ್ಯ ಮೇಷ ರಾಶಿಗೆ ಬಂದಾಗ ಸೌರಮಾನ ಯುಗಾದಿಯನ್ನು ಆಚರಿಸಲಾಗುತ್ತದೆ.

ಕರ್ನಾಟಕದಲ್ಲಿ ಚಂದ್ರಮಾನ ಯುಗಾದಿ ಆಚರಿಸುವರು. ಹೊಸ ವರ್ಷದ ಪ್ರಾರಂಭದ ಸಂಕೇತವಾದ ಯುಗಾದಿಯನ್ನು ಬಡವ–ಬಲ್ಲಿದರೆಂದು ತಾರತಮ್ಯವಿಲ್ಲದೆ ಎಲ್ಲಾ ಹಿಂದೂಗಳು ಆಚರಿಸುತ್ತಾರೆ.

ಅಂದು ರೈತರು ತಮ್ಮ ಎತ್ತುಗಳನ್ನು ಸಿಂಗರಿಸಿ ಸಂಭ್ರಮದಿಂದ ಆಚರಿಸಿದರೆ, ವ್ಯಾಪಾರಿಗಳು ಹಾಗೂ ಇನ್ನಿತರರು ಕೂಡ ಅಂದಿನ ದಿನವೇ ಶುಭಕಾರ್ಯಗಳನ್ನು ಮಾಡುತ್ತಾರೆ.

ಯುಗಾದಿ ಬಂತೆಂದರೆ ಎಲ್ಲೆಡೆಯೂ ಸಂಭ್ರಮ ಸಂತೋಷ ತುಂಬಿ ತುಳುಕುತ್ತಿರುತ್ತದೆ. ಚೈತ್ರ ಮಾಸದಿಂದ–ವಸಂತ ಋತು ಶುರುವಾಗುತ್ತದೆ. ವನಗಳೆಲ್ಲ ಹೂ ಬಿಟ್ಟು ಯುಗಾದಿ ಹರ್ಷವನ್ನು ಬೀರುವವು.

**ಯುಗಾದಿ ಹಬ್ಬದ ಆಚರಣೆಗಳೆಂದರೆ :–**

ಸೂರ್ಯ ನಮಸ್ಕಾರ, ಪಂಚಾಂಗ ಪೂಜೆ, ಬೇವು ಬೆಲ್ಲ ಸೇವನೆ ನಾವು ಸರ್ವೇ ಸಾಮಾನ್ಯವಾಗಿ ನೋಡುತ್ತೇವೆ. ಬೇವು ಬೆಲ್ಲ–ಸುಖ ದುಃಖ, ರಾತ್ರಿ ಹಗಲುಗಳ ಸಂಕೇತಗಳಾಗಿವೆ.

ಮಾನವರ ಬದುಕಿನಲ್ಲಿ ಸುಖ ದುಃಖಗಳು ಅವಿಭಾಜ್ಯ ಅಂಶಗಳಾಗಿವೆ. ಇವುಗಳೊಂದಿಗೆ ಸಮತೋಲನ ಕಾಯ್ದು ಕೊಂಡೇ ಮನುಷ್ಯ ಬದುಕಬೇಕು. ಎರಡನ್ನೂ ಸಮ ದೃಷ್ಟಿಯಿಂದ ಸವಿಯುವುದನ್ನು ಕಲಿಯಲೆಂದೇ ಯುಗಾದಿಯಂದು ಬೇವು ಬೆಲ್ಲ ವನ್ನು ತಿನ್ನಿಸುವರು. ನಾವು ಬೇವಿನ ಸಮಾನವಾದ ದುಃಖ ಅಶಾಂತಿಯ ಪ್ರಪಂಚದಲ್ಲಿದ್ದರೂ ಬೆಲ್ಲದ ಸಮಾನವಾದ ಶಾಂತಿ ಆತ್ಮೀಯತೆ, ಸ್ನೇಹ ಎಂಬ ನಿಜ ಅರ್ಥವಾಗಿದೆ.

ಹೀಗೆ ಯುಗಾದಿಯು ಭಕ್ತರಿಗಾಗಿ, ವಿಶಾಲ ಹೃದಯದ ಭಕ್ತರಿಗೆ, ಮುಕ್ತಿ ಬಯಸುವ ಆರಾಧಕರಿಗಾಗಿ, ಶಿವನು ಭಕ್ತರ ಕರೆಗೆ ಓಗೊಟ್ಟು ಅವರ ಭಕ್ತಿಯ ಫಲವನ್ನು ನೀಡಲು ಧರೆಗೆ ಬಂದಿದ್ದಾನೆ ಎಂಬ ಪರಮ ಸಂದೇಶವನ್ನು ನೀಡುವ ಮಹಾನ್ ಪರ್ವವಾಗಿದೆ.

ಯುಗ ಯುಗಾದಿ ಕಳೆದರೂ
ಯುಗಾದಿ ಮರಳಿ ಬರುತಿದೆ
ಹೊಸ ವರುಷಕೆ ಹೊಸ ಹರುಷವ
ಹೊಸತು ಹೊಸತು ತರುವ
ಯುಗಾದಿಯ ನಿಜ ಅರ್ಥ ತಿಳಿದು ಆಚರಿಸೋಣ.


***ಸುಜಾತ ಶಾಂತಕುಮಾರ ನಿಂಬಾಳ್***

# ಆತ್ಮನಿರ್ಭರತೆಗಾಗಿ ಹೋರಾಟದ ಮೂಲ ಹನ್ನೆರಡನೆಯ ಶತಮಾನದ ಶರಣೆಯರ ವಚನಗಳಲ್ಲಿಯೇ ಇದೆ-ಡಾ. ಶೀಲಾದೇವಿ ಮಳೀಮಠ

ಇಂದು ನಾವು ಯಾವ ಆತ್ಮನಿರ್ಭರತೆ ಎನ್ನುವ ಕೂಗಿಗಾಗಿ ಹೋರಾಟ ಮಾಡುತಿದ್ದೇವೆಯೋ ಅದು ಹನ್ನೆರಡನೆಯ ಶತಮಾನದಲ್ಲಿ ನಡೆದಿತ್ತು ಎಂಬುದಾಗಿ ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತು ಮತ್ತು ಕದಳಿ ಮಹಿಳಾ ವೇದಿಕೆ ದೆಹಲಿ ಘಟಕವು 25.03.2022 ರಂದು ಹಮ್ಮಿಕೊಂಡಿದ್ದ 16ನೇ ಆನ್‌ಲೈನ್ ಉಪನ್ಯಾಸ ಮಾಲಿಕೆಯಲ್ಲಿ "ಆತ್ಮನಿರ್ಭರತೆಯ ನೆಲೆಯಲ್ಲಿ ವಚನಕಾರ್ತಿಯರು" ಎನ್ನುವ ವಿಷಯ ಕುರಿತು ವಿಚಾರ ಮಂಡನೆ ಮಾಡಿದ ಸಾಹಿತ್ಯ ಚಿಂತಕರು, ಬೆಂಗಳೂರಿನ ಬಿ.ಎಂ.ಎಸ್. ಮಹಾವಿದ್ಯಾಲಯದ ಕನ್ನಡ ಪ್ರಾಧ್ಯಾಪಕರಾದ ಡಾ. ಶೀಲಾದೇವಿ ಮಳಿಮಠ ಮೇಡಂ ಅಭಿಪ್ರಾಯ ಪಟ್ಟರು.

'ಹಸಿವಾದೆಡೆ ಭಿಕ್ಷಾನ್ನಗಳೆಂಟು'– 'ಬೆಟ್ಟದೊಳಗೊಂದು ಮನೆಯ ಮಾಡಿ ಮೃಗಗಳಿಗೆ ಅಂಜಿದೊಡೆಂತಯ್ಯ' ಮೊದಲಾದ ಅಕ್ಕಮಹಾದೇವಿ ಹಾಗೂ ಇನ್ನೂ ಅನೇಕ ಮಹಿಳಾ ವಚನಕಾರರ ರಚನೆಗಳನ್ನು ಉದಾಹರಿಸಿ ವಿಸ್ತಾರವಾಗಿ ವಿವರಿಸಿದರು. ನಾನು ನನ್ನಲಿರುವುದು ನಿನಗೆ ಕೊಡುತ್ತೇನೆ ನೀನು ನಿನ್ನಲ್ಲಿರುವುದು ನನಗೆ ಕೊಡುವುದರ ಮೂಲಕ ನಾವೆಲ್ಲರೂ ಒಂದೇ ಎಂಬ ಭಾವನೆ ಮೂಡಿದಾಗ ಆತ್ಮನಿರ್ಭರತೆ ಕನಸು ನನಸಾಗುತ್ತದೆ. 12ನೇಯ ಶತಮಾನದ ವಚನಕಾರ್ತಿಯರ ವಚನಗಳು ನಮ್ಮ ಭಾವವನ್ನು ಶುದ್ಧಿಗೊಳಿಸಲು ಇರುವಂತಹವು ಎಂಬುದನ್ನ ಹೇಳಿದರು. ಅತ್ಯಂತ ಸರಳವಾಗಿ ಮತ್ತು ಸ್ಪಷ್ಟವಾಗಿ 12ನೇಯ ಶತಮಾನದ ಶರಣೆಯರ ಜೀವನದ ಸಂಪೂರ್ಣ ಚಿತ್ರಣವನ್ನು ಕಣ್ಮುಂದೆ ತಂದು ಇಡುವುದಲ್ಲದೆ ಜೊತೆಗೆ ಇಂದಿನ ಎಲ್ಲಾ ಮಹಿಳೆಯರೂ ಸ್ವಾವಲಂಬಿಯಾಗಿ, ಆತ್ಮನಿರ್ಭರತೆಯಿಂದ ಹೇಗೆ ಬದುಕಬೇಕು ಎನ್ನುವುದನ್ನ ಅಕ್ಕನ ವಚನಗಳ ಉದಾಹರಣೆ ಯೊಂದಿಗೆ ಎಳೆ ಎಳೆಯಾಗಿ ಬಿಚ್ಚಿಟ್ಟು ಎಲ್ಲರ ಮನ ಮುಟ್ಟುವಂತೆ ಮಾತನಾಡಿದರು. ಈ ಸಮ ಸಮಾಜದ ನಿರ್ಮಾಣದಲ್ಲಿ ಮಹಿಳಾ ಸಮಾನತೆ ಮಹಿಳಾ ಸಶಕ್ತೀಕರಣ, ಮಹಿಳಾ ಸ್ವಾವಲಂಬನೆ ಮುಖ್ಯವಾದವು ಎಂದು ಮನಗೊಂಡ ಶರಣರು ಮಹಿಳೆಯರ ಪ್ರಜ್ಞಾ ಪ್ರವಾಹಕ್ಕೆ ಮುಂದಾದರು. ಎಂದು ಹೇಳಿದರು. ಕಾರ್ಯಕ್ರಮದ ಮುಖ್ಯ ಅತಿಥಿಯಾಗಿದ್ದ ಡಾ. ಕೆ. ರಾಮೇಶ್ವರಪ್ಪ ಅವರು ವಚನ ಪ್ರಾರ್ಥನೆಯ ಮೂಲಕ ಕಾರ್ಯಕ್ರಮದ ಶುಭಾರಂಭ ಮಾಡಿಕೊಟ್ಟು ಅನಂತರ ಮಹಿಳಾ ದಿನಾಚರಣೆಯ ಕುರಿತು ತಮ್ಮ ಅನಿಸಿಕೆಗಳನ್ನು, ಅಭಿಪ್ರಾಯಗಳನ್ನು ತುಂಬಾ ಚೆನ್ನಾಗಿ ವ್ಯಕ್ತಪಡಿಸಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಶ್ರೀಮತಿ ಸುಜಾತ ನಿಂಬಾಳ್ ಅವರು ಮಾತನಾಡಿ ಸಮಾಜದ ಕಟ್ಟು ಪಾಡುಗಳಂತೆ ಮಹಿಳೆಯರನ್ನು ಕೇವಲವಾಗಿ ಕಂಡು – ಗಂಡ, ಮನೆ, ಮಕ್ಕಳ ಚಾಕರಿಗೆ ಮಾತ್ರ ಮೀಸಲೆಂದು ಪರಿಗಣಿಸಿದ್ದ ಸಮಾಜದಲ್ಲಿ, 12 ನೇ ಶತಮಾನದ ಮಹಿಳೆಯರು ತಮ್ಮ ಧ್ವನಿ ಎತ್ತಿ, ತಮ್ಮ ಅಸ್ತಿತ್ವವನ್ನು ಕಂಡುಕೊಂಡು ಸಮಾಜದ ಮೌಢ್ಯವನ್ನು ನಿರಾಕರಿಸಿ, ಸಮಾಜವನ್ನು ತಿದ್ದುತ್ತಾ ತೀಡುತ್ತಾ ನವ ಸಮಾಜದ ಕಲ್ಪನೆ ಸಾಕಾರಗೊಳ್ಳುವಲ್ಲಿ ಸಕ್ರಿಯವಾಗಿ ಭಾಗಿಯಾದರು ಎನ್ನುವುದನ್ನು ಗಂಡ ಮಾರಯ್ಯನ ಕಾಯಕ ಪ್ರಜ್ಞೆಯನ್ನು ಹಾಗೂ ಆತನ ಆಸೆಯ ಮನಸ್ಸನ್ನ ಪ್ರಶ್ನಿಸುವ ಆಯ್ದಕ್ಕಿ ಲಕ್ಕಮ್ಮ ಮೊದಲಾದ




ವಚನಕಾರ್ತಿಯರ ವಚನಗಳ ಉದಾಹರಣೆಯಿಂದ ಸ್ಪಷ್ಟ ಪಡಿಸಿದರು.

ಕಾರ್ಯಕ್ರಮದಲ್ಲಿ ಮಹಿಳಾ ದಿನಾಚರಣೆಯ ಮಹತ್ವದ ಕುರಿತು ಮಾತನಾಡಿದ ಹೊರನಾಡು ಮಹಿಳಾ ಕನ್ನಡಿಗರಾದ ಶ್ರೀಮತಿ ರಾಧಾ ಕೌಜಲಗಿ, ಡಾ. ಸುಮನ್ ಸಾಲಿಮಠ, ಡಾ. ದೀಪಾ ಅರುಣ್, ಡಾ. ಅನು ಪ್ರಸಾದ್, ರಾಜಶ್ರೀ ಶಶಿಕುಮಾರ್, ಮಾಲಿನಿ ಪ್ರಹ್ಲಾದ್, ಶೋಭಾ ನಾಗರಾಜ್, ಶಾಂತಲಾ ಕಿರಣ್, ಶೃತಿಕೈಕಾಡೆ ಮತ್ತು ಲಲಿತಾಂಬಾ ರಾಜೇಶ್ ಅವರು ತಮ್ಮ ಅನಿಸಿಕೆಗಳನ್ನು ಹಂಚಿಕೊಂಡರು. ಶ್ರೀಮತಿ ಆರಾಧನಾ ಕೆ.ಸಿ., ದೀಪಾ ಶಿವಪ್ಪಾ, ಕನಕ ಸಂತೋಷ, ಶಕುಂತಲ ಚಂದ್ರಶೇಖರ್ ಹಾಗೂ ಪುಟಾಣಿಗಳಾದ ಶ್ರೇಯ ಪ್ರಭಾಕರ್, ನೂತನ್ ಕೈಕಾಡೆ, ಮಹಮ್ಮದ್ ಸಾಹಿಲ್, ಕುಮಾರಿ ಜೈನಾಬ್ ಮತ್ತು ಸಹನಾ ತಿಮ್ಮಪ್ಪ ಅವರು ವಚನ ವಾಚನ ಮಾಡಿದರು.

ಸುಮಾರು ಮೂರು ಗಂಟೆಗಳ ಕಾಲ ಮೂಡಿ ಬಂದ ಕಾರ್ಯಕ್ರಮದಲ್ಲಿ ಹೊರನಾಡಿನ ಕನ್ನಡಿಗರು ವಿಶೇಷವಾಗಿ ಮಹಿಳೆಯರು ಭಾಗವಹಿಸಿದ್ದರು. ಶರಣ ಸಾಹಿತ್ಯ ಪರಿಷತ್ತಿನ ದೆಹಲಿ ಘಟಕದ ಅಧ್ಯಕ್ಷರಾದ ಎನ್.ಪಿ. ಚಂದ್ರಶೇಖರ ಅವರು ಕಾರ್ಯಕ್ರಮವನ್ನು ಸುಂದರವಾಗಿ ಸಂಯೋಜಿಸಿ, ಖಜಾಂಚಿ ಶಿವಪ್ಪ ಎಂ ಅವರು ಕಾರ್ಯಕ್ರಮದ ನಿರೂಪಣೆಯನ್ನು ನಡೆಸಿಕೊಟ್ಟರು. ಕದಳಿ ಮಹಿಳಾ ವೇದಿಕೆಯ ಅಧ್ಯಕ್ಷರಾದ ಜಯಶ್ರೀ ಬಸವರಾಜು ಅವರು ಸ್ವಾಗತಿಸಿದರು, ಪರಿಷತ್ತಿನ ಸದಸ್ಯರಾದ ಹೇಮಶ್ರೀ ಚಂದ್ರಶೇಖರ್ ಮತ್ತು ಯಲ್ಲಾಲಿಂಗ ಕೊಪ್ಪದ ಅವರು ಮುಖ್ಯ ಅತಿಥಿಗಳ ಪರಿಚಯ ಮಾಡಿಕೊಟ್ಟರು. ಕದಳಿ ಮಹಿಳಾ ವೇದಿಕೆಯ ಸದಸ್ಯರಾದ ಶ್ರೀಮತಿ ದೀನಾ ಜಾಯ್ಸ್ ಅವರು ವಂದನಾರ್ಪಣೆ ಮಾಡಿದರು.

***ಶಿವಪ್ಪ ಎಂ.***

## ಅಭಿಮತ ಓದುಗರ ಅನಿಸಿಕೆ




ಈ ಸಲದ ಅಭಿಮತದಲ್ಲಿ ಮಕ್ಕಳ ಸಂದರ್ಶನ ಮಾಡಿದ್ದು ಒಳಿತಾಯಿತು. ಹೀಗೆ ಮಾಡುವುದರ ಮೂಲಕ ಹೊಸ ತಲೆಮಾರಿನ ಕನ್ನಡ ಮಕ್ಕಳು ಕರ್ನಾಟಕ ಸಂಘದ ಕಡೆಗೆ ಆಗೊಮ್ಮೆ ಈಗೊಮ್ಮೆ ಬರುವಂತಾಗಲಿ.

***ಡಾ. ಪುರುಷೋತ್ತಮ ಬಿಳಿಮಲೆ***

ಅಭಿಮತ ಮಾಸಿಕ ಸಾಹಿತ್ಯ, ಸಂಸ್ಕೃತಿ, ಸಾಧನೆ, ಸಾಧಕರಿಗೆ ಮನ್ನಣೆ, ಕನ್ನಡ ಕಟ್ಟಿದವರ ಸವಿನೆನಪು, ಜಾನಪದ ಗಾಯನದ ರಸದೂಟ, ವಚನ ಸಾಹಿತ್ಯದ ಪರಿಮಳ, ನಿವೃತ್ತಿ ಆದವರಿಗೆ ಸಮ್ಮಾನ, ಕನ್ನಡ ಕವಿಗಳಿಗೆ ನಮನ, ಜಂಗಮದ ಶ್ರೀ ಗಳಿಗೆ, ಕನ್ನಡ ಸಾಹಿತ್ಯ ದಲ್ಲಿ ಸೇವೆ ಮಾಡುತ್ತಿರುವ ಪ್ರೊ. ಬಿಳಿಮಲೆ ಅವರಿಗೆ ಪ್ರಶಸ್ತಿ ಪ್ರದಾನ ಸಮಾರಂಭದ ಚಿತ್ರಗಳು ಮನಕ್ಕೆ ಮುದ ನೀಡಿದವು. ಅಂತರ ರಾಷ್ಟ್ರೀಯ ತಾಯಿ ಭಾಷೆ ದಿನದ ಸಂಗೋಷ್ಠಿ ಹರ್ಷ ದಾಯಕ. ದೆಹಲಿ ಕರ್ನಾಟಕ ಸಂಘಕ್ಕೆ, ಮಾನ್ಯ ಸಂಪಾದಕರಿಗೆ ನಮನಗಳು. ಮಾರ್ಚ್ 2022ರ ಅಭಿಮತ ಮಾಸಿಕ ಓದುಗರ ಮನಮುಟ್ಟಿದೆ, ವಂದನೆಗಳು.

***ಪ್ರೊ. ವಿಶ್ವನಾಥ,*** ಜೆ.ಎನ್.ಯು., ನವದೆಹಲಿ

# ದೆಹಲಿ ಕನ್ನಡ ಶಾಲೆಯ ಕಾರ್ಯಕ್ರಮಗಳು

## ಕವಿ ಚೆನ್ನವೀರ ಕಣವಿ ನುಡಿನಮನ

ಇತ್ತೀಚೆಗೆ ಅಗಲಿದ ಹಿರಿಯ ಸಾಹಿತಿ, ಜೀವನ್ಮುಖಿ, ಭಾವಜೀವಿ ಬದುಕಿನ ಬಗ್ಗೆ ಸದಾಶಯ ಸಕಾರಾತ್ಮಕವಾದ ನಿಲುವನ್ನೇ ಹೊಂದಿದ ಚೆಂಬೆಳಕಿನ ಕವಿ ಎಂದೇ ಪ್ರಸಿದ್ಧರಾದ, ನಾಡೋಜ ಚೆನ್ನವೀರ ಕಣವಿ ಅವರಿಗೆ ಮಾರ್ಚ್ 08, 2022ರಂದು ದೆಹಲಿ ಕನ್ನಡ ಹಿರಿಯ ಮಾಧ್ಯಮಿಕ ಶಾಲೆಯ ವತಿಯಿಂದ 'ಕಣವಿ ನುಡಿನಮನ' ಕಾರ್ಯಕ್ರಮ ಆನ್ ಲೈನ್ ಮೂಲಕ ಆಯೋಜಿಸಲಾಗಿತ್ತು. ಮುಖ್ಯ ಅತಿಥಿ ಸಾಹಿತಿ ಹಾಗೂ ಪ್ರಸಿದ್ಧ ನಾಟಕಕಾರರಾದ ಡಾ. ಕೆ. ವೈ. ನಾರಾಯಣಸ್ವಾಮಿ ಅವರು ಮಾತನಾಡಿ, 'ಸಮನ್ವಯ ಕವಿ' ಎಂದೇ ಕರೆಯಲ್ಪಡುತ್ತಿದ್ದ ಚೆನ್ನವೀರ ಕಣವಿಯವರು ಮೃದುಮಾತಿನ, ಸ್ನೇಹಭಾವದ ಸರಳ ಸಜ್ಜನಿಕೆಯ ವ್ಯಕ್ತಿತ್ವ ಹೊಂದಿದವರು. ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ಪಂಪ ಪ್ರಶಸ್ತಿ, ನಾಡೋಜ ಪ್ರಶಸ್ತಿ ಸೇರಿದಂತೆ, ಹಲವಾರು ಪ್ರಶಸ್ತಿಗೆ ಪುರಸ್ಕೃತರಾಗಿದ್ದ ಕಣವಿಯವರು ಅನೇಕ ಯುವ ಬರಹಗಾರರಿಗೆ ಸದಾ ಸ್ಫೂರ್ತಿ ಹಾಗೂ ಮಾರ್ಗದರ್ಶಕರಾಗಿದ್ದರು. ನವೋದಯ ಸಾಹಿತ್ಯ ಚಳುವಳಿ ಸಂದರ್ಭದಲ್ಲಿ ಬರವಣಿಗೆ ಆರಂಭಿಸಿದ ಇವರು ಪ್ರಗತಿಶೀಲ, ನವ್ಯ, ದಲಿತ ಬಂಡಾಯ ಸಾಹಿತ್ಯ ಚಳುವಳಿಗಳ ಸಂದರ್ಭದಲ್ಲೂ ಸಮನ್ವಯ ಕವಿಯಾಗಿ ಜನಮಾನಸದ ಪ್ರತಿಮೆ, ರೂಪಕಗಳನ್ನು ಬಳಸಿ ಒಡಲಾಳದ ಸಂಗತಿಗಳನ್ನು ಮರೆಮಾಚದೆ ಕಾವ್ಯದ ಮೂಲಕ ತಿಳಿಸಿದ ಧ್ಯಾನಸ್ಥ ಕವಿ. ಸಾಹಿತ್ಯ ವಲಯದಲ್ಲಿದ್ದೂ ಎಲ್ಲರೊಂದಿಗೆ ಸಾಮರಸ್ಯ ಮತ್ತು ಸಮನ್ವಯ ಸಾಧಿಸಿ ಕಾಲ ಉರುಳಿದಂತೆ ಈ ಸಮನ್ವಯತೆಯ ಆಶಯಗಳನ್ನು ಗಟ್ಟಿಗೂಡಿಸಿಕೊಂಡ ಕಣವಿಯವರ ಕಾವ್ಯ ಮತ್ತು ಬದುಕು ಇವೆರಡನ್ನೂ ಪ್ರತ್ಯೇಕಿಸಿ ನೋಡಲು ಸಾಧ್ಯವಿಲ್ಲ ಎಂದು ನಾರಾಯಣಸ್ವಾಮಿ ಹೇಳಿದರು.

ಶಾಲಾ ಶಿಕ್ಷಕಿಯರು ಕಣವಿ ಅವರ ಭಾವಗೀತೆಗಳಿಗೆ ಹಾಗೂ ಅವರ ಕವಿತೆ ಪ್ರಸ್ತುತಪಡಿಸಿದರು.

ದೆಹಲಿ ಕನ್ನಡ ಹಿರಿಯ ಮಾಧ್ಯಮಿಕ ಶಾಲೆಯ ಗೌರವ ವ್ಯವಸ್ಥಾಪಕರಾದ ಡಾ. ಎಂ. ಎಸ್. ಶಶಿಕುಮಾರ್ ಪ್ರಾಸ್ತಾವಿಕ ನುಡಿಗಳನ್ನಾಡಿದರು. ಪ್ರಾಂಶುಪಾಲ ಪ್ರಶಾಂತ ಕುಮಾರ್ ಸ್ವಾಗತಿಸಿದರು. ಶಿಕ್ಷಕ ನಾಗರಾಜ ಎಂ. ಅತಿಥಿಗಳನ್ನು ಪರಿಚಯಿಸಿದರು. ಎಚ್. ಎಸ್. ತೇಲಿ ವಂದಿಸಿದರು. ಅರವಿಂದ ಬಿಜ್ಜೈ ಕಾರ್ಯಕ್ರಮ ನಿರೂಪಿಸಿದರು. ಆಡಳಿತ ಮಂಡಳಿ ಸದಸ್ಯರಾದ ಮಾಲಿನಿ ಪ್ರಹ್ಲಾದ್ ಮತ್ತು ದೀನಾ ಜಾಯ್ಸ್, ವಿದ್ಯಾರ್ಥಿಗಳು, ಶಿಕ್ಷಕ ವೃಂದ ಹಾಗೂ ಪೋಷಕರು ಉಪಸ್ಥಿತರಿದ್ದರು. □

## ರಾಷ್ಟ್ರಕವಿ ಗೋವಿಂದ ಪೈ ಸ್ಮರಣೆ:

'ತಾಯೆ ಬಾರ ಮೊಗವ ತೋರ ಕನ್ನಡಿಗರ ಮಾತೆಯೆ, ಹರಸು ತಾಯೆ ಸುತರ ಕಾಯೆ', ನಮ್ಮ ಜನ್ಮದಾತೆಯೆ ಎಂದು ಕನ್ನಡಾಂಬೆಯನ್ನು ಒಲುಮೆಯಿಂದ ಸ್ತುತಿಸಿದ ಕನ್ನಡದ ಪ್ರಪ್ರಥಮ ರಾಷ್ಟ್ರಕವಿ, ಬಹು ಭಾಷಾ ಪಂಡಿತ ಮಂಜೇಶ್ವರ ಗೋವಿಂದಪೈ ಅವರ 140ನೇ ಜನ್ಮ ದಿನದ ಪ್ರಯುಕ್ತ ಕವಿ ಸ್ಮರಣೆ ಕಾರ್ಯಕ್ರಮವನ್ನು ನಿಸ್ತಂತು ಮಾಧ್ಯಮದ ಮೂಲಕ ಮಾರ್ಚ್ 23ರಂದು ದೆಹಲಿ ಕನ್ನಡ ಹಿರಿಯ ಮಾಧ್ಯಮಿಕ ಶಾಲೆಯ ವತಿಯಿಂದ ಆಯೋಜಿಸಲಾಗಿತ್ತು.

ಕಾರ್ಯಕ್ರಮದಲ್ಲಿ ಸಾಹಿತಿ ಹಾಗೂ ಕಾಸರಗೋಡಿನ ಸರಕಾರಿ ಕಾಲೇಜಿನ ಸಹಾಯಕ ಪ್ರಾಧ್ಯಾಪಕ ಡಾ. ರತ್ನಾಕರ ಮಲ್ಲ ಮೂಲೆ ಅವರು, ಸುದೀರ್ಘ ಕಾಲ ಬದುಕಿದ ಕವಿ ಗೋವಿಂದ ಪೈ ಕನ್ನಡ ಸಾಹಿತ್ಯದ ಮಹಾಪರ್ವತ. ಓರ್ವ ವ್ಯಕ್ತಿಯ ಸ್ಮರಿಸಿಕೊಳ್ಳುವುದರ ಹಿನ್ನೆಲೆ ಅವರು ಈ ಸಮಾಜಕ್ಕೆ ಏನಾದರೂ ಕೊಡುಗೆ ನೀಡಿದ್ದಾರೆ ಎಂದರ್ಥ. 12ನೇ ವಯಸ್ಸಿನಲ್ಲಿ ಕವಿತೆ ಬರೆಯಲು ಆರಂಭಿಸಿ, 17ನೇ ವಯಸ್ಸಿಗೆ ತಾನು ಬರೆದ ಕವಿತೆಗೆ ಪ್ರಶಸ್ತಿ ಪಡೆದುಕೊಂಡ ಪೈಗಳು ಪ್ರಾಸತ್ಯಾಗ ಮಾಡಿ ಕನ್ನಡ ಸಾಹಿತ್ಯವನ್ನು ಬದಲಾವಣೆಗೆ ಒಳಪಡಿಸಿದವರು. ಗ್ರೀಕ್ ನಾಟಕದಲ್ಲಿ ಕನ್ನಡದ ಒಳಹು, ಸುಳಿವು ಇದೆ ಎಂದು ಮೊದಲಿಗೆ ಗುರುತಿಸಿದವರು. ನಾಲ್ಕು ವಿಭಿನ್ನ ಧರ್ಮಗಳ ಮಹಾತ್ಮರ ಕೊನೆಯ ದಿನದ ಬಗ್ಗೆ ಖಂಡಕಾವ್ಯ ರಚಿಸಿದವರು. ಸುಮಾರು 217 ಸಂಶೋಧನಾ ಲೇಖನ ಬರೆದರು.ಅವರ ಮನೆಯಲ್ಲಿ ಐದು ಸಾವಿರ ಪುಸ್ತಕಗಳ ಸಂಗ್ರಹವಿತ್ತು. ದೇಶಿಭಾಷೆಗಳಲ್ಲದೆ ವಿದೇಶಿ ಭಾಷೆಗಳಲ್ಲಿಯೂ ಪರಿಣಿತರಾಗಿದ್ದರು. ಈ ಮೂಲಕ ಕನ್ನಡವನ್ನು ಜಗದಗಲಕ್ಕೆ ಪಸರಿಸಿದವರು. ಪೈಅವರ ಕೃತಿಗಳ ಬಗ್ಗೆ ಸಾಕಷ್ಟು ಸಂಶೋಧನೆ ನಡೆದಿವೆ. ಅವರೇ ಹೇಳಿಕೊಂಡಿರುವಂತೆ ಪರರನ್ನು ಮೆಚ್ಚಿಸಲು, ಕೀರ್ತಿಗಳಿಸಲು ನಾನು ಕವಿತೆ ಬರೆಯಲಾರೆ, ನನ್ನ ಸಮಾಧಾನಕ್ಕಾಗಿ, ನೋವನ್ನು ಮರೆಯಲು ಕವಿತೆ ಬರೆಯುತ್ತೇನೆ. ಒಳ್ಳೆಯ ಮಾನವತಾವಾದಿಯಾಗಿದ್ದ ಪೈ ಅವರ ಸಾಧನೆ, ಸತ್ಕಾರ್ಯಗಳು ವಿದ್ಯಾರ್ಥಿಗಳಿಗೆ ಆದರ್ಶವಾಗಬೇಕು. ಇಂತಹ ಕಾರ್ಯಕ್ರಮದ ಮೂಲಕ ಪೈಯವರನ್ನು ಸ್ಮರಣೆ ಮಾಡಿಕೊಳ್ಳುತ್ತಿರುವುದು ಅನುಕರಣೀಯ ಎಂದರು.

ದೆಹಲಿ ಕನ್ನಡ ಹಿರಿಯ ಮಾಧ್ಯಮಿಕ ಶಾಲೆಯ ಗೌರವ ವ್ಯವಸ್ಥಾಪಕರಾದ ಡಾ. ಎಂ.ಎಸ್.ಶಶಿಕುಮಾರ ಪ್ರಾಸ್ತಾವಿಕ ನುಡಿಗಳನ್ನಾಡಿದರು. ಪ್ರಾಂಶುಪಾಲ ಪ್ರಶಾಂತ ಕುಮಾರ್ ಸ್ವಾಗತಿಸಿದರು. ಕು। ನಂದಿತಾ ಉಭಾಳೆ, ಕು। ಹರ್ಷಿತಾ ಉಭಾಳೆ ಗೋವಿಂದ ಪೈ ಅವರ 'ತಾಯೆ ಬಾರ ಮೊಗವ ತೋರ' ಭಾವ ಗೀತೆಯನ್ನು, ಕು। ಕಾವ್ಯಾಂಶ ಕವಿತೆಯನ್ನು ಪ್ರಸ್ತುತಪಡಿಸಿದರು. ಕು। ವೈಷ್ಣವಿ ಅತಿಥಿಗಳನ್ನು ಪರಿಚಯಿಸಿದರು. ಕು। ಅಭಿಷೇಕ್ ಉಭಾಳೆ ಕಾರ್ಯಕ್ರಮ ನಿರೂಪಿಸಿದರು. ಅರವಿಂದ ಬಿಜ್ಜೈ ವಂದಿಸಿದರು. □

## ಡಾ. ಸರೋಜಿನಿ ಮಹಿಷಿ ಸ್ಮರಣೆ

ದೆಹಲಿ ಕನ್ನಡ ಹಿರಿಯ ಮಾಧ್ಯಮಿಕ ಶಾಲೆಯ ವತಿಯಿಂದ ಲೇಖಕಿ, ರಾಜಕಾರಣಿ, ಕರ್ನಾಟಕದ ಮೊದಲ ಸಂಸದೆ, ಕಾನೂನು ತಜ್ಞೆ, ಸಮಾಜ ಸೇವಕಿ ಡಾ. ಸರೋಜಿನಿ ಮಹಿಷಿ ಅವರ ಜನ್ಮದಿನದ ಪ್ರಯುಕ್ತ ನಿಸ್ತಂತು ಮಾಧ್ಯಮದ ಮೂಲಕ "ಡಾ. ಸರೋಜಿನಿ ಮಹಿಷಿ ನಮನ" ಕಾರ್ಯಕ್ರಮವನ್ನು ಮಾರ್ಚ್ 03, 2022 ಗುರುವಾರದಂದು ಆಯೋಜಿಸಲಾಗಿತ್ತು.

ಕಾರ್ಯಕ್ರಮದ ಮುಖ್ಯ ಅತಿಥಿಗಳಾದ ಕರ್ನಾಟಕ ಸರಕಾರದ ಮಾಜಿ ಮುಖ್ಯ ಕಾರ್ಯದರ್ಶಿ ಹಾಗೂ ಸರೋಜಿನಿ ಮಹಿಷಿ ಅವರ ಸಹೋದರರಾದ ಶ್ರೀ ಪ್ರಹ್ಲಾದ್ ಬಿ. ಮಹಿಷಿ ಅವರು ಮಾತನಾಡಿ ಸರೋಜಿನಿ ಮಹಿಷಿಯವರು ದೆಹಲಿಯಲ್ಲಿ ಕರ್ನಾಟಕ ಸಂಘ, ಕನ್ನಡ ಶಾಲೆ ಎಂದು ಬಹಳ ಆಸಕ್ತಿಯಿಂದ ಸಕ್ರಿಯರಾಗಿದ್ದುಕೊಂಡೇ ದೆಹಲಿ ಕನ್ನಡಿಗರಿಗೆ ಪರಿಚಿತರಾದವರು. ನಮ್ಮ ತಂದೆ ಪಂಡಿತರು, ಮೇಧಾವಿಗಳಾಗಿದ್ದರು. ಅವರಿಗೆ ಭಾಷೆಯ ಬಗ್ಗೆ ಅಪಾರ ಒಲವಿತ್ತು. ನಿಘಂಟು ಸದಾ ಅವರ ಕೈಯಲ್ಲಿರುತ್ತಿತ್ತು. ನಮ್ಮ ಮನೆತನದ ಸಂಸ್ಕಾರ ಮಹಿಷಿ ಅವರ ಮೇಲೆ ಅಪಾರ ಪ್ರಭಾವ ಬೀರಿತು. ಶಿಕ್ಷಕಿಯಾಗಿ, ಕಾನೂನು ತಜ್ಞೆಯಾಗಿ ಮಹಿಳೆಯರ ಬಗ್ಗೆ ವಿಶೇಷ ಸಹಾನುಭೂತಿಯಿತ್ತು. ಮಹಿಳೆಯರು ಸ್ವಾವಲಂಬಿ ಬದುಕನ್ನು ರೂಪಿಸಿಕೊಳ್ಳಬೇಕೆಂಬುದು ಮಹಿಷಿ ಅವರ ಜೀವನದ ಗುರಿಯಾಗಿತ್ತು. 1962ರಲ್ಲಿ ರಾಜಕಾರಣವನ್ನು ಪ್ರವೇಶಿಸಿ ನೆಹರು ಅವರ ಸಂಪರ್ಕಕ್ಕೆ ಬಂದು 1966ರಲ್ಲಿ ಇಂದಿರಾ ಗಾಂಧಿಯವರ ಆಪ್ತ ಕಾರ್ಯದರ್ಶಿಯಾಗಿ ನೇಮಕವಾದರು. ಸಂಸತ್ತಿನಲ್ಲಿ ಇವರ ಮಾತುಗಳಿಗೆ ಪಕ್ಷಬೇಧವಿಲ್ಲದೆ ಎಲ್ಲರೂ ಕಿವಿಯಾಗುತ್ತಿದ್ದರು. ಸಂಸತ್ತಿನಲ್ಲಿ ಸಂಸ್ಕೃತದಲ್ಲಿ ಭಾಷಣ ಮಾಡಿದ ಮೊದಲಿಗರು ಕೂಡ ಇವರೇ. ಕನ್ನಡ, ಸಂಸ್ಕೃತ, ಮರಾಠಿ, ಹಿಂದಿ, ಇಂಗ್ಲೀಷ್ ಭಾಷೆಯಲ್ಲಿ ಪ್ರಭುತ್ವವನ್ನು ಹೊಂದಿದ್ದರು. ಕುವೆಂಪು ಅವರು ಜ್ಞಾನಪೀಠ ಪ್ರಶಸ್ತಿ ಸ್ವೀಕರಿಸುವಾಗ ಮಹಿಷಿಯವರನ್ನು ಉಲ್ಲೇಖಿಸಿದ್ದರು. ಮಹಿಷಿ ಅವರು ಬರೆದ ಹಿಂದಿ ಕವಿತೆಗಳನ್ನು ಸ್ವತಃ ಹಿಂದಿ ಕವಿಗಳೇ ಪ್ರಶಂಶಿಸಿದ್ದರು. ಅಧಿಕಾರಕ್ಕಾಗಿ ಎಲ್ಲರೂ ರಾಜಕಾರಣಕ್ಕೆ ಬರುವುದು ಸಹಜ. ಆದರೆ ಮಹಿಷಿ ಅವರು ಸಾಮಾಜಿಕ ಜೀವನದ ಬಗ್ಗೆ ಕಾಳಜಿ ಇಟ್ಟುಕೊಂಡು ಬಂದವರು. ಮಗುವಿನಂತ ಮನಸ್ಸಿದ್ದು, ಎಲ್ಲರನ್ನೂ ಅತಿಯಾಗಿ ನಂಬುತ್ತಿದ್ದರು. ಯಾವ ವಿಚಾರವನ್ನು ಕ್ಷುಲ್ಲಕ ಎಂದು ಪರಿಗಣಿಸುತ್ತಿರಲಿಲ್ಲ. ಕನ್ನಡ, ಕರ್ನಾಟಕ, ಮಹಿಳೆ ಇದು ಮಹಿಷಿ ಅವರ ಜೀವನದ ಆಸ್ತಿ ಹಾಗೂ ಆಸಕ್ತಿಯಾಗಿತ್ತು ಎಂದರು.

ದೆಹಲಿ ಕನ್ನಡ ಹಿರಿಯ ಮಾಧ್ಯಮಿಕ ಶಾಲೆಯ ಗೌರವ ವ್ಯವಸ್ಥಾಪಕರಾದ ಡಾ. ಎಂ.ಎಸ್. ಶಶಿ ಕುಮಾರ್ ಪ್ರಾಸ್ತಾವಿಕ ನುಡಿಗಳನ್ನಾಡಿದರು. ದೆಹಲಿ ಕನ್ನಡ ಶಿಕ್ಷಣ ಸಂಸ್ಥೆಯ ಆಡಳಿತ ಮಂಡಳಿ ಸದಸ್ಯರಾದ ಮಾಲಿನಿ ಪ್ರಹ್ಲಾದ್, ದೀನಾ ಜಾಯ್ಸ್, ದೆಹಲಿ ಕರ್ನಾಟಕ ಸಂಘದ ಕಾರ್ಯಕಾರಿ ಸಮಿತಿ ಸದಸ್ಯರಾದ ಕೆ.ಎಸ್. ಮೂರ್ತಿ, ವಿದ್ಯಾರ್ಥಿಗಳು, ಶಿಕ್ಷಕ ವೃಂದ ಹಾಗೂ ಪೋಷಕರು ಉಪಸ್ಥಿತರಿದ್ದರು. ಶಾಲಾ ಪ್ರಾಂಶುಪಾಲರಾದ ಪ್ರಶಾಂತ ಕುಮಾರ್ ಸ್ವಾಗತಿಸಿದರು.

ಶಿಕ್ಷಕಿ ಲಾವಣ್ಯ ಎಂ. ಎಸ್. ಅತಿಥಿಗಳನ್ನು ಪರಿಚಯಿಸಿದರು. ಅರವಿಂದ ಬಿಜ್ಜೈ ಕಾರ್ಯಕ್ರಮ ನಿರೂಪಿಸಿದರು. ರೇಖಾ ಐ. ವಂದಿಸಿದರು. □

***ಅರವಿಂದ ಬಿಜ್ಜೈ***

# ಫೇಸ್ ಬುಕ್ ಪ್ರಪಂಚ : ಸಾಮಾಜಿಕ ಮಾಧ್ಯಮದ ಯೋಗ್ಯ ಬಳಕೆ

ಕಳೆದ ಹದಿನೈದು ವರ್ಷಗಳಿಂದ ನನಗೆ ಆತ್ಮೀಯರಾಗಿರುವ ಮಾಧ್ಯಮ ತಜ್ಞ, ಲೇಖಕ ಜಯಪ್ರಕಾಶ್ ಪುತ್ತೂರು ಅವರ ಹೊಸ ಕೃತಿ. 'ಫೇಸ್ ಬುಕ್ ಪ್ರಪಂಚ : ಶ್ರೀ ಸಾಮಾನ್ಯರು ಬಹು ಮಾನ್ಯರು' ಆಸಕ್ತಿದಾಯಕವಾಗಿದೆ. ಮಾಜಿ ರಾಷ್ಟ್ರಪತಿ ಡಾ. ಎ.ಪಿ.ಜೆ. ಅಬ್ದುಲ್ ಕಲಾಂ ಅವರ ಶಿಷ್ಟಾಚಾರ ಅಧಿಕಾರಿಯಾಗಿ ಮತ್ತು ಕೇಂದ್ರ ರಕ್ಷಣೆ, ಸಂಶೋಧನೆ ಹಾಗೂ ಅಭಿವೃದ್ಧಿ ಸಂಸ್ಥೆಯ ಸಾರ್ವಜನಿಕ ಸಂಪರ್ಕಾಧಿಕಾರಿಯಾಗಿ ಜಯಪ್ರಕಾಶ್ ರಾವ್ ಪುತ್ತೂರು ಅವರು ಸೇವೆ ಸಲ್ಲಿಸಿದ್ದಾರೆ. ಅವರು ಅನುವಾದಿಸಿದ ಕಲಾಂ ಅವರ ಜೀವನ ಚರಿತ್ರೆ 'ಅಗ್ನಿಯ ರೆಕ್ಕೆಗಳು' ಬಹಳ ಜನಪ್ರಿಯ.

ರಾವ್ ಅವರ 'ಫೇಸ್ ಬುಕ್ ಪ್ರಪಂಚ' ಕೃತಿ ಅವರ ನಿರಂತರ ಕ್ರಿಯಾಶೀಲ ಚಟುವಟಿಕೆಗೆ ಕನ್ನಡಿ ಹಿಡಿದಿದೆ. ಕೋವಿಡ್ ಕಾಲದಲ್ಲಿ ಬಹುತೇಕ ಜನರು ಮನೆಯಲ್ಲಿ ಬಂಧಿಯಾಗಿ ವೃತ್ತಿ ಪ್ರವೃತ್ತಿಗಳಿಂದ ದೂರ ಸರಿದ ಸಂದರ್ಭಗಳಿವೆ. ಇಂತಹ ಸನ್ನಿವೇಶದಲ್ಲಿ ಜಯಪ್ರಕಾಶ್ ಪುತ್ತೂರು ಅವರು ತಮ್ಮ ಬದುಕಿನಲ್ಲಿ ಬಂದು ಹೋದ ವ್ಯಕ್ತಿಗಳನ್ನು ಸ್ಮರಿಸುತ್ತಾ ಅವರ ಸಾಧನೆಗಳ ಕುರಿತು ಬರೆದಿದ್ದಾರೆ. ಈ ರೀತಿ ಸಮಯದ ಸದುಪಯೋಗವನ್ನೂ ಮಾಡಿದ್ದಾರೆ.

ಈ ಕೃತಿಯಲ್ಲಿ ಒಟ್ಟು 58 ವ್ಯಕ್ತಿ ಚಿತ್ರಗಳಿವೆ. ಇಲ್ಲಿ ಜಾರ್ಜ್ ಫೆರ್ನಾಂಡೀಸ್‌ರಂತಹ ಗಣ್ಯ ವ್ಯಕ್ತಿಗಳಿಂದ ತೊಡಗಿ ಗುಜರಿ ವ್ಯಾಪಾರಿ ಯಾಕೂಬ್ ಗುಲ್ವಾಡಿಯವರವರೆಗೆ ವಿಭಿನ್ನ ವ್ಯಕ್ತಿಗಳ ಯಶೋಗಾಥೆಗಳಿವೆ. ಗುಜರಿ ವ್ಯಾಪಾರಿಯೊಬ್ಬ ವಿಶ್ವಮಾನ್ಯ ಚಲನಚಿತ್ರ ನಿರ್ದೇಶಕನಾಗುವ ಬಗೆ ನಮಗೆ ಸ್ಪೂರ್ತಿಯ ಕತೆಯಾಗುತ್ತದೆ. ಈ ಸಾಧನೆಯನ್ನು ಯಾಕೂಬ್ ಎಂಬ ಸಾಮಾನ್ಯ ವ್ಯಕ್ತಿ ಜಗತ್ತು ಎಂಬ ವಿಶ್ವವಿದ್ಯಾಲಯದಿಂದ ವಿಪುಲ ಜ್ಞಾನ ಸಂಪತ್ತು ಹಾಗೂ ಕುತೂಹಲದ ಪ್ರಜ್ಞೆಗಳನ್ನು ಪಡೆದ ಆಸಕ್ತಿಯಾಗಿ ಜಯಪ್ರಕಾಶ್ ಗುರುತಿಸುತ್ತಾರೆ.

ಹೀಗೆ ಫೇಸ್‌ಬುಕ್ ಪ್ರಪಂಚದ ತಮ್ಮ ಪುಟಗಳಲ್ಲಿ ಸರಣಿಯಾಗಿ ಬರೆದ ಈ ವ್ಯಕ್ತಿ ಚಿತ್ರಗಳು ಕುತೂಹಲ ಮೂಡಿಸುತ್ತದೆ. ಈ ಕೃತಿ ಸಾಮಾಜಿಕ ಮಾಧ್ಯಮದ ಯೋಗ್ಯ ಬಳಕೆಗೆ ಮಾದರಿಯಾಗಿದೆ. ಜಯಪ್ರಕಾಶ್ ಪುತ್ತೂರು ಅವರಿಂದ ಇನ್ನಷ್ಟು ವಿಭಿನ್ನ ಕೃತಿಗಳು ಮೂಡಿ ಬರಲಿ ಎಂದು ಹಾರೈಸುತ್ತೇನೆ. ◻

***ಡಾ. ಅವನೀಂದ್ರನಾಥ್ ರಾವ್***




ಪ್ರಕಾಶಕರು : ಸಪ್ನ ಬುಕ್ ಹೌಸ್, ಬೆಂಗಳೂರು
ಪುಟಗಳು : 200 ವರ್ಷ : 2021
ಬೆಲೆ : ರೂ. 160/-

# ಕನ್ನಡ ನಾಡಿನ ಅಂತರರಾಷ್ಟ್ರೀಯ ಖ್ಯಾತಿಯ ಸಸ್ಯ ವಿಜ್ಞಾನಿ-ಡಾ. ಬಿಜಿಎಲ್ ಸ್ವಾಮಿ

ನವದೆಹಲಿಯ 'ದಿನಕರ' ಫೌಂಡೇಶನ್ ಇವರು ನಿಸ್ತಂತು ಮಾಧ್ಯಮ ಮುಖೇನಾ ಹಮ್ಮಿಕೊಂಡಿದ್ದ ದಾರ್ಶನಿಕ ಕವಿ ಡಿವಿಜಿ ಎಂದೇ ಪ್ರಸಿದ್ಧರಾದ ಡಿ.ವಿ. ಗುಂಡಪ್ಪ ಅವರ ಹಿರಿಯ ಪುತ್ರ, ಖ್ಯಾತ ಸಂಶೋಧಕ ಡಾ. ಬಿ.ಜಿ.ಎಲ್. ಸ್ವಾಮಿ ಬೆಂಗಳೂರು ಗುಂಡಪ್ಪ ಲಕ್ಷ್ಮೀನಾರಾಯಣಸ್ವಾಮಿ ಅವರ 'ಹಸುರು ಹೊನ್ನು' ಕೃತಿಯಲ್ಲಿನ ನಾಟಕೀಯ ಅಂಶಗಳು ಹಾಗೂ ಅವರ ಬದುಕು ಬರಹ ಕುರಿತ ಉಪನ್ಯಾಸ ಮಾಲಿಕೆಯಲ್ಲಿ ನಟ, ನಿರ್ದೇಶಕ ಹಾಗೂ ಸಂಘಟಕ ಅ.ನಾ. ರಾವ್ ಜಾಧವ್, ಬೆಂಗಳೂರು ಮತ್ತು ಶಿಕ್ಷಣ ತಜ್ಞೆ ಹಾಗೂ ಬಿಜಿಎಲ್ ಸ್ವಾಮಿಯವರ ಬಂಧು ಗೀತಾ ನಾರಾಯಣ ಅಯ್ಯರ್ ಹಾಗೂ ರಾಜಕುಮಾರ್ ಎಚ್ ಅವರು ಸಂಪನ್ಮೂಲ ವ್ಯಕ್ತಿಗಳಾಗಿ ಭಾಗವಹಿಸಿ ಮಾತನಾಡಿದರು. ಫೆಬ್ರವರಿ 5, ಬಿಜಿಎಲ್ ಅವರ ಜನ್ಮ ದಿನ.

ಮೈಸೂರು ವಿಶ್ವವಿದ್ಯಾಲಯದ ವಸ್ತು ಸಂಗ್ರಹಾಲಯದಲ್ಲಿ ಬಿಜಿಎಲ್ ಅವರು ಉಪಯೋಗಿಸುತ್ತಿದ್ದ ವಸ್ತುಗಳು, ಪ್ರಶಸ್ತಿಗಳನ್ನು ಇಡಲಾಗಿದ್ದು ಆಸಕ್ತರು ಅಲ್ಲಿಗೆ ಭೇಟಿ ಕೊಟ್ಟು ವೀಕ್ಷಿಸಬಹುದಾಗಿದೆ. ಇದಕ್ಕಾಗಿ ಶ್ರೀ ರಾಜಕುಮಾರ ಹಾಗೂ ಅವರ ಗೆಳೆಯರು ಪಟ್ಟ ಶ್ರಮ ಸಾರ್ಥಕ್ಯಭಾವ ಮೂಡಿಸಿದೆ. ಚಿಕ್ಕ ವಯಸ್ಸಿನಲ್ಲಿಯೇ ಬಿಜಿಎಲ್ ಅವರಿಗೆ ಬರವಣಿಗೆಯಡೆಗೆ ಒಲವಿತ್ತು. ವಿದ್ವಾಂಸರ ಸಂಪರ್ಕ ಹಾಗೂ ಡಿವಿಜಿ ಸಂಗ್ರಹದಲ್ಲಿದ್ದ ಪುಸ್ತಕಗಳ ಪ್ರಭಾವ ಪ್ರೇರಣೆಯಾಯಿತು ಎಂದರು. ಅವರು ಆಯ್ಕೆ ಮಾಡಿಕೊಂಡ ಕ್ಷೇತ್ರವನ್ನು ಪಾವನಗೊಳಿಸಿದರು. ಪ್ರಶಾಂತ ವಾತಾವರಣದ ಹಿನ್ನೆಲೆಯಲ್ಲಿ ಬರವಣಿಗೆಗಾಗಿ ಮೈಸೂರಿಗೆ ಸ್ಥಳಾಂತರಿಸಿದರು.

ಇದು ಸ್ಮರಣಾರ್ಹ ಕಾರ್ಯ ಎಂದು ಶ್ರೀಮತಿ ಗೀತಾ ನಾರಾಯಣ ಅಯ್ಯರ್ ಅವರು ಕೃತಜ್ಞತೆ ವ್ಯಕ್ತ ಪಡಿಸಿದರು. ಶ್ರೀ ರಾಜಕುಮಾರ ಅವರು ಮಾತನಾಡಿ, 'ಸ್ವಾಮಿಯಾನ' ಶಿರೋನಾಮೆಯಡಿಯ ಸಾಕ್ಷ್ಯಚಿತ್ರ ಬಿಜಿಎಲ್ ಸ್ವಾಮಿ ಅವರ ಬದುಕು ಬರಹದ ಸಮಗ್ರ ಚಿತ್ರಣ ಕಟ್ಟಿಕೊಡುತ್ತದೆ. ಇದರಲ್ಲಿ ಕುಟುಂಬದವರು, ನಿಕಟವರ್ತಿಗಳು ಅವರ ಕುರಿತಾಗಿ ತಿಳಿದುಕೊಂಡ ಮಾಹಿತಿ ವಿವರ ದಾಖಲಿಸಲಾಗಿದೆ ಎಂದು ತಿಳಿಸಿದರು. ಬಿಜಿಎಲ್ ಅವರ ವೆಬ್ ತಾಣವೂ ಲಭ್ಯವಿದೆ.

"ಹಸುರು ಹೊನ್ನು" ಕೃತಿಯ ನಾಟಕ ರೂಪಾಂತರ 'ಗಾರ್ದಭ ಪುರಾಣ' ಕಥಾ ಪ್ರಸಂಗ ಪೂರ್ಣಪ್ರಮಾಣದ ವಿಡಂಬನೆ ಒಳಗೊಂಡಿದೆ. ಅದರಂತೆ ಡಾ. ಸ್ವಾಮಿ ಅವರ ಎಲ್ಲಾ ಕೃತಿಗಳಲ್ಲೂ ನಾಟಕೀಯ ಅಂಶಗಳಿವೆ ಎಂದು ಅ.ನಾ. ರಾವ್ ಜಾಧವ್ ಅವರು ತಿಳಿಸಿದರು. ಮುಂದೆ, ಬಿಜಿಎಲ್ ಹಾಗೂ ಪ್ರಾಂಶುಪಾಲರ ನಡುವಿನ ಸಂಭಾಷಣೆ ಪ್ರಸ್ತುತಪಡಿಸಿ ಪ್ರೇಕ್ಷಕರನ್ನು ಕೌತುಕದೆಡೆಗೆ ಕೊಂಡೊಯ್ದರು. ಅವರು ಸೃಷ್ಟಿಸಿದ ಪಾತ್ರಗಳು ವ್ಯಂಗ್ಯ ಚಿತ್ರದ ಹಾಗೆ ಇವೆ.

ಹರಿಪ್ರಿಯ ಅವರು ಅತಿಥಿಗಳ ಪರಿಚಯ ಮಾಡಿ ಕೊಟ್ಟರು. ಶಿವಾನಂದ ಇಂಗಳೇಶ್ವರ, ಸಂತೋಷ ಉಪಾಧ್ಯಾಯ ಸಹಕಾರ ನೀಡಿದರು. ಎಸ್. ಕುಮಾರ ಹಾಗೂ ನೇತ್ರಾವತಿ ಕುಮಾರ ಅವರು ರಂಗಗೀತೆ ಪ್ರಸ್ತುತಪಡಿಸಿದರು. ಮಮತಾ ಶಿವರಾಂ ಅವರು ವಂದಿಸಿದರು. ◻

***ಹರಿಪ್ರಿಯ ಎಸ್***

# ಕಲೆಯಲ್ಲಿ ಸ್ವಾರ್ಥ ಚಿಂತನೆ ತ್ಯಜಿಸಲು ಬಾ. ಸಾಮಗ ಕರೆ

ಒಂದು ಕಲೆಯನ್ನು ಅದರ ಸಮಗ್ರತೆಯೊಂದಿಗೆ ಆಸ್ವಾದಿಸಬೇಕಾದುದು ಕಲೆಯ ಬೆಳವಣಿಗೆ ದೃಷ್ಟಿಯಿಂದ ಅಗತ್ಯವೆಂದು ದೆಹಲಿ ಕನ್ನಡಿಗ, ತುಳುವೆರ್ ಪತ್ರಿಕೆಗಳ ಸಂಪಾದಕ ಬಾ. ಸಾಮಗ ಅವರು ಕರೆ ನೀಡಿದರು.

ಸಾಮಗ ಅವರು ಶ್ರೀ ಮಹಾ ಗಣಪತಿ ಯಕ್ಷಗಾನ ಕಲಾ ಸಂಘ ಮಾ. 16ರಂದು ಉಡುಪಿ ಬೆಳ್ಕಳೆಯಲ್ಲಿ ಏರ್ಪಡಿಸಿದ 44ನೇ ವಾರ್ಷಿಕೋತ್ಸವದ ಮುಖ್ಯ ಅತಿಥಿಯಾಗಿ ಮಾತನಾಡುತ್ತಿದ್ದರು. ಯಾವುದೋ ಅಸಂಬದ್ಧ ರೂಪಗಳನ್ನು ಯಕ್ಷಗಾನವೆಂದೇ ತಿಳಿಯುವಂತಾಗದಿರಲು ಉತ್ತಮ ಚಿಂತನೆಗಳಿಗೆ ಪ್ರಚೋದನೆ ಕೊಡುವ ಯಕ್ಷಗಾನವನ್ನು ನಾವು ಹೆಚ್ಚು ಹೆಚ್ಚು ಬೆಳೆಸಬೇಕಾಗಿದೆಯೆಂದರು. ಸಾಮಗ ಅವರು ಯಕ್ಷಗಾನವು ಪ್ರೇಕ್ಷಕರಿಗೆ ಭಾವನಾತ್ಮಕ ಮತ್ತು ಬೌದ್ಧಿಕ ಸಂಸ್ಕಾರವನ್ನು ಕೊಡುವುದಿಲ್ಲವೋ ಆಗ ಅದು ನಿಧಾನವಾಗಿ ತನ್ನ ಮೌಲ್ಯವನ್ನು ಕಳೆದುಕೊಳ್ಳುತ್ತಿದೆ ಎಂದರು.



ಸುಪ್ರಸಿದ್ಧ ಯಕ್ಷಗಾನ ವೇಷಧಾರಿ ಕೃಷ್ಣ ನಾಯ್ಕ ಹಳ್ಳಾಡಿ, ರತ್ನಾಕರ ಆಚಾರ್ಯ ಅವರನ್ನು ಗೌರವಿಸಿ ಸನ್ಮಾನಿಸಲಾಯಿತು. ಯಕ್ಷಗಾನ ಭಾಗವತ ಪಿ.ಎನ್. ಲಕ್ಷ್ಮಣ ಹಂದೆ ಅವರು ಅಧ್ಯಕ್ಷತೆ ವಹಿಸಿದ್ದರು. ಸಂಘದ ಅಧ್ಯಕ್ಷ ಸುಧಾಕರ ಜತ್ತನ್ನ ಕಾರ್ಯಕ್ರಮ ನಿರ್ವಹಿಸಿದರು. ಚಕ್ರ ಚಂಡಿಕಾ ಪ್ರಸಂಗದ ಪ್ರದರ್ಶನ ನಡೆಯಿತು. ◻

***ಬಾ. ಸಾಮಗ***

# 'ಆಧುನಿಕ ಕನ್ನಡ ಸಾಹಿತ್ಯ 2000-2020' ವಿಚಾರಗೋಷ್ಠಿ

ನವದೆಹಲಿಯ ಜೆ.ಎನ್.ಯು. ಕನ್ನಡ ಅಧ್ಯಯನ ಪೀಠದಲ್ಲಿ ಆಯೋಜಿಸಿದ್ದ ಕನ್ನಡ ಸಾಹಿತ್ಯ ಸಂಸ್ಕೃತಿ ಪರಂಪರೆ ಕುರಿತಾದ 5 ದಿನಗಳ ಸಾಹಿತ್ಯಿಕ ಹಬ್ಬದಲ್ಲಿ ಅನೇಕ ಕನ್ನಡದ ಮನಸ್ಸುಗಳು ಭಾಗಿಯಾಗಿದ್ದ ಕಾರ್ಯಕ್ರಮವು ಪಿ. ಶಿವರಾಜ, ಕೆ.ಎ.ಎಸ್., ಇವರ ಮುಕ್ತಾಯ ಭಾಷಣದೊಂದಿಗೆ ಪರಿಸಮಾಪ್ತಿಯಾಯಿತು.

ದಿನಾಂಕ 21 ರಿಂದ 25ನೇ ಮಾರ್ಚ್ 2022ರ ವರೆಗೆ "ಆಧುನಿಕ ಕನ್ನಡ ಸಾಹಿತ್ಯ 2000–2020" ವಿಚಾರ ಗೋಷ್ಠಿಯಲ್ಲಿ ಪಾಲ್ಗೊಂಡು ತಮ್ಮ ಅಭಿಪ್ರಾಯವನ್ನು ಮಂಡಿಸಿದ ಶ್ರೀ. ಸಿ.ಎಂ. ನಾಗರಾಜ, ಡಾ. ಎಚ್.ಎನ್. ಸತ್ಯನಾರಾಯಣ, ಡಾ. ಮಹೇಂದ್ರ ಸಿ., ಕನ್ನಡ ಸಾಹಿತ್ಯ ಪರಂಪರೆಯಿಂದ ಹಿಡಿದು ವರ್ತಮಾನದಲ್ಲಿ ರಚನೆಯಾದ ಕೃತಿಗಳ ವಿಮರ್ಶಾತ್ಮಕ ಚಿಂತನ ಮಂಥನ ಮಾಡಿದರು.

ಕನ್ನಡಿಗರ ಪ್ರಾತಿನಿಧಿಕ ಸಂಸ್ಥೆಯಾಗಿ 75 ವರ್ಷಗಳಿಂದ ನಮ್ಮ ಮಾತೃಭಾಷೆ ಕನ್ನಡ ಹಾಗೂ ಕರ್ನಾಟಕವನ್ನು ಕಟ್ಟುವ, ಬೆಳೆಸುವ ದೆಹಲಿ ಕರ್ನಾಟಕ ಸಂಘದಲ್ಲಿ ಕಳೆದ 20 ವರ್ಷದಿಂದ ಸತತವಾಗಿ 5 ಬಾರಿ ಕಾರ್ಯದರ್ಶಿಯಾಗಿ ಕನ್ನಡಕ್ಕೆ ಅನುಕೂಲಕರವಾದ ಹಾಗೂ ಕಲಾವಿದರಿಗೆ ಪ್ರೋತ್ಸಾಹಕರವಾದ ರೀತಿಯಲ್ಲಿ ಕೆಲಸ ಮಾಡುತ್ತಾ ಬಂದಿದ್ದೇನೆ ಎಂದು ದೆಹಲಿ ಕರ್ನಾಟಕ ಸಂಘದ ಅಧ್ಯಕ್ಷ ಶ್ರೀ. ಸಿ. ಎಂ. ನಾಗರಾಜ ಹೇಳಿದರು. ಡಾ. ಎಚ್. ಎನ್. ಸತ್ಯನಾರಾಯಣರು ಮಾತಾಡುತ್ತಾ, ಕನ್ನಡದಲ್ಲಿ ಅನೇಕ ಪ್ರತಿಭಾನ್ವಿತ ಲೇಖಕರಿದ್ದಾರೆ. ಹೊಸ ತಾತ್ವಿಕ ಚೌಕಟ್ಟುಗಳಿವೆ ಆದರೂ ಹಳೆಯ ಪರಂಪರೆ ಮುಂದುವರಿಯಬೇಕಾ? ಎಂಬ ಚಿಂತನೆ ಕಾಡುತ್ತಿದೆ ಎಂದು ಅಭಿಪ್ರಾಯ ಪಟ್ಟರು. ಡಾ. ಸಿ. ಮಹೇಂದ್ರ ಅವರು ಕನ್ನಡ ಸಾಹಿತ್ಯಕ್ಕೆ ಭವ್ಯ ಪರಂಪರೆ ಇದ್ದು, ಇದು ಕನ್ನಡ ನಾಡಿನ ಸಾಮಾಜಿಕ ಸಮಸ್ಯೆಗಳಿಂದ ಕುರಿತಾದ ಕೃತಿಗಳು ರಚನೆಗಳಿಂದ ಕೂಡಿದೆ ಎಂದರು.

ಕನ್ನಡ ಸಾಹಿತ್ಯ ಅಂದು, ಇಂದು, ಮುಂದು ಎಂಬ ಉಪನ್ಯಾಸದ ಶೀರ್ಷಿಕೆ ಅಡಿಯಲ್ಲಿ ಓದುವ ಹವ್ಯಾಸ ಕಡಿಮೆ ಆಗಿರುವುದರಿಂದ ಯುವ ಸಾಹಿತಿಗಳು ಎಲೆಮರೆಯ ಕೋಗಿಲೆಗಳಾಗಿ ನಮ್ಮ ಗಮನಕ್ಕೆ ಬರುತ್ತಿಲ್ಲ ಎಂದು ನ್ಯಾಷನಲ್ ಬುಕ್ ಟ್ರಸ್ಟ್‌ನಲ್ಲಿ ಕಾರ್ಯನಿರತರಾದ ಶ್ರೀ ವೀಣೇಶ ಅವರು ಆತಂಕ ವ್ಯಕ್ತಪಡಿಸಿದರು.

ಲಿಂಗ ರಾಜಕಾರಣ : Gender politics ಬಗ್ಗೆ ಮಾತಾಡುತ್ತಾ, ಮಹಿಳೆಯರು ಬಡತನದಿಂದ ಸಮಾಜದಲ್ಲಿ ಲೈಂಗಿಕವಾಗಿ ಶೋಷಣೆಗೆ ಒಳಗಾಗಿದ್ದಾರೆ. Woman have been sexually exploited in society due to poverty. ಎಂದು ವಿಮರ್ಶಾತ್ಮಕವಾಗಿ ವಿಶ್ಲೇಷಿಸಿದರು. ಇದನ್ನು ಕೇಳಿ, ಡಾ. ಸಂದೀಪ್ ಲಿಂಗ ಭೇದ / ಲೈಂಗಿಕ ಶೋಷಣೆ ಬಗ್ಗೆ ಆಳವಾದ ಮುಕ್ತವಾದ ಮಾತುಗಳಿಗೆ ಬೆಂಗಳೂರಿನಿಂದ ಡಾ. ದಮಯಂತಿ ಧನ್ಯವಾದಗಳನ್ನು ತಿಳಿಸಿದರು.

ಡಾ. ಶಾಲಿನಿ ಅವರು ಶ್ರೀ ಚರಿತೆಯ ವಾಸ್ತವ ನೆಲೆಗಳು ಎಂಬ ಶೀರ್ಷಿಕೆಯಲ್ಲಿ ತಮ್ಮ ವಿಚಾರಗಳನ್ನು ಮಂಡಿಸಿದರು. ಕು. ರಶ್ಮಿ ಅವರು ಅಮ್ಮನ ವಿಚಾರವಾಗಿ ಪ್ರಸ್ತುತ ತಾಯಿಯ ಯೋಗಕ್ಷೇಮವನ್ನು ನೋಡಿಕೊಳ್ಳುವ ವಿಚಾರವನ್ನು ವ್ಯಕ್ತಪಡಿಸಿದರು.

ಕೆ.ಎಸ್. ಮೂರ್ತಿ ಅವರು ಲವಲವಿಕೆಯಿಂದ ಪ್ರೀತಿ ಪೂರ್ವಕವಾಗಿ ಕಾರ್ಯಕ್ರಮದಲ್ಲಿ ಭಾಗವಹಿಸಿ ಕನ್ನಡ ಜಾನಪದ ರಂಗಕರ್ಮಿ ಯು.ಎಸ್. ರಾಮಣ್ಣ ಅವರ ವ್ಯಕ್ತಿ ಪರಿಚಯ ಮತ್ತು ಸಾಧನೆಗಳನ್ನು ಕುರಿತು ಪ್ರಬಂಧ ಮಂಡಿಸಿ ನಮ್ಮ ತಿಳುವಳಿಕೆಯನ್ನು ಹೆಚ್ಚಿಸಿದ ಕಾರಣಕ್ಕಾಗಿ ಕನ್ನಡ ಭಾಷಾ ಪೀಠವು ಅವರಿಗೆ ಚಿರಋಣಿಯಾಗಿದೆ.

ಸಾಹಿತಿಗಳಾದ ಪ್ರೊ. ಬಿಳಿಮಲೆ ಅವರು ರಾಮಣ್ಣನವರನ್ನು ಬಹಳ ಸಮಯದ ಆನಂತರ ಕಂಡು ಬಹಳ ಸಂತೋಷವಾಯಿತು. ಸಂಸ್ಥೆ ಕಟ್ಟಿದ ಮಹನೀಯರು ಅವರು, ನಮಗೆಲ್ಲ ಆದರ್ಶ ಎಂದು ಹೇಳಿ, ಸುದೀಪ್ ಅವರ ಪೇಪರ್ ಗಂಭೀರವಾಗಿದ್ದು ಉಪಯುಕ್ತ ವಿಶ್ಲೇಷಣೆಯಿಂದ ಕೂಡಿತ್ತು. ಎಂದು ಹೇಳಿದರು. ಐದು ದಿನದ ಕಾರ್ಯಕ್ರಮದಲ್ಲಿ ಸುಮಾರು 90 ಜನ ಸಹೃದಯರು ಭಾಗವಹಿಸಿದ್ದರು. ಇಲ್ಲಿ ಅಧ್ಯಾಪಕರು, ಸಾಹಿತ್ಯ ಚಿಂತಕರು, ಸಂಶೋಧಕರು, ಕನ್ನಡ ಸಂಘಟನೆಯ ಮುಖ್ಯಸ್ಥರು ಕರ್ನಾಟಕ ಸರ್ಕಾರದಲ್ಲಿ ಆಡಳಿತ ನಡೆಸುವ ಅಧಿಕಾರಿಗಳು, ದೆಹಲಿಯ ಕನ್ನಡಿಗರು, ಸಾಹಿತ್ಯ ಸಂಸ್ಕೃತಿಯ ಅನ್ಯೋನ್ಯಘಾತೆಯನ್ನು ಇಂತಹ ಸಂಗೋಷ್ಠಿಗಳು ತಿಳಿಸುತ್ತವೆ ಎಂದು ಹರ್ಷ ವ್ಯಕ್ತ ಪಡಿಸಿದರು. ಈ ವಿಚಾರಗೋಷ್ಠಿಯಲ್ಲಿ ಕನ್ನಡ ಸಾಹಿತ್ಯದ ಅಭಿಮಾನಿಗಳು ಭಾಗವಹಿಸಿ ಸಂತಸ ವ್ಯಕ್ತಪಡಿಸಿದರು. ಕಾರ್ಯಕ್ರಮದ ನಿರೂಪಣೆ ಪ್ರೊ. ವಿಶ್ವನಾಥ ಅವರಿಂದ ಆರಂಭವಾದ ಈ ಕಾರ್ಯಕ್ರಮ ಶಂಕರರಾವ್ ಅವರ ವಂದನೆಗಳೊಂದಿಗೆ ಮುಕ್ತಾಯವಾಯಿತು. □

**ಪ್ರೊ. ವಿಶ್ವನಾಥ**


ರಾಷ್ಟ್ರದ ರಾಜಧಾನಿಯಲ್ಲಿ
ಕನ್ನಡಿಗರೊಬ್ಬರ ಬಹುವರ್ಣದ
ಸುಸಜ್ಜಿತ ಮುದ್ರಣಾಲಯ
ಸೌಜನ್ಯ ಪ್ರಿಂಟಿಂಗ್ ಮತ್ತು
ಎಚ್.ಪಿ. ಗ್ರಾಫಿಕ್ ಪ್ರಿಂಟರ್ಸ್
ಇಲ್ಲಿ ಎಲ್ಲಾ ಬಗೆಯ ಮುದ್ರಣ
ಕಾರ್ಯಗಳನ್ನು ಸಮಯಕ್ಕೆ
ಸರಿಯಾಗಿ ಅಚ್ಚುಕಟ್ಟಾಗಿ
ಮಾಡಿಕೊಡಲಾಗುವುದು.
ಪ್ರೊಸೆಸಿಂಗ್, ಪ್ಲೇಟ್ ಮೇಕಿಂಗ್,
ಪ್ರಿಂಟಿಂಗ್ ಮತ್ತು ಬೈಂಡಿಂಗ್
ಕೆಲಸಗಳಿಗಾಗಿ ದಯವಿಟ್ಟು
ಸಂಪರ್ಕಿಸಿ

SAUJANYA
PRINTING PRESS
A HOUSE OF QUALITY PRINTING
Office :
B-303, Okhla Industrial Area
Phase-I, New Delhi – 110 020
Ph : 40520770
M : 9811104398, 9811604398

Delhi Karnataka Sangha Abhimata
April-2022, Vol. No.32, Issue No. 7, Price Rs.1/-
RNI Regn. No. 53405/91, DL-SW-01/4016/22-24
Date of Publication : April 8th / 9th, Posting Date : 10th / 11th, Total Pages-24, Monthly-Language Kannada
Printed & Published by R. Renukumar, General Secretary on behalf of Delhi Karnataka Sangha (R)Rao Tularam Marg, Sector-12, R.K.Puram, New Delhi-110022
Tel: 26109615, Printed at Saujanya Printing Press B-303, Okhla Industrial Area, Phase-I, New Delhi-110020, Tel: 40520770, Editor: Chandrashekara N.P

## ಪಂದ್ಯ ಪುರುಷೋತ್ತಮರು















12.03.2022 ರಂದು ಭಾರತೀಯ ಶಾಸ್ತ್ರೀಯ ನೃತ್ಯ
ಕಾರ್ಯಕ್ರಮ ನೀಡಿದ ಅಲ್ಮಾಟಿ-ಕಜಕಿಸ್ತಾನ್ ಶಾಸ್ತ್ರೀಯ
ನೃತ್ಯ ಮತ್ತು ಯೋಗ ಕೇಂದ್ರದ ಕಲಾವಿದರೊಂದಿಗೆ ಸಂಘದ
ಕಾರ್ಯಕಾರಿ ಸಮಿತಿ ಪದಾಧಿಕಾರಿಗಳು ಮತ್ತು ಸದಸ್ಯರು